
ಕಲ್ಯಾಣ ಕಿರಣ

ಸಂಪುಟ ೭
ಸಂಚಿಕೆ ೫
ಸೆಪ್ಟಂಬರ್ ೧೯೮೧
ಬಸವ ಶಕೆ ೮೭೫
ಬೆಲೆ : ೧-೫೦



ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬ ಅಜೀವ ಸದಸ್ಯತ್ವ ೧೫೧ ರೂ

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

ಕಲ್ಯಾಣ ಕಿರಣ

ಸಂಪುಟ ೭] ಸೆಪ್ಟೆಂಬರ್ 1981 [ಸಂಚಿಕೆ ೫

ಶ್ರೀ ಗುರು ಚರಣಕೆ

ನುಡಿ ನೈವೇದ್ಯ

ನೀವಲ್ಲ, ದುರ್ಗಮ ಕಾನನ ಗರ್ಭದಲಿ ನಿರ್ಜನ ಗಂಹ್ವರದಿ
ಮೂಗು ಮುಚ್ಚಿ ಕುಳಿತಿಹ ಏಕಾಂತ ತಪಸಿಗಳು,
ವಿಗುರ್ಬಿಸುವ ವಿಚಿತ್ರ ಮೃಗಗಳಿಂ ತುಂಬಿಹ
ಲೋಕ ಕಾಂತಾರವ ಆತ್ಮ ವಿಶ್ವಾಸದಿಂದ ಎದುರಿಸುವ ಸಾಹಸಿಗಳು.
ಇದ್ದವರು ದುಷ್ಟರು ಸತ್ತವರು ಸಜ್ಜನರು
ಎಂಬ ಲೋಕದ ನೀತಿಗೆ ನಗುವಿರಲ್ಲವೆ ತಾವು ?
ಸರಿದ ಆನೆಯ ಹೆಜ್ಜೆಗೆ ಧೂಪ ಆರತಿಯ ವೈಭವ
ಹೊರುವ ಆನೆಯ ಕಡೆಗೆ ತುಂಬು ಔದಾಸೀನ್ಯ.
ಅನ್ನ ನೀಡುವ ಕೈಗೆ ಕತ್ತಿ–ಕತ್ತರಿ ತಾಡನ
ವಿಷವನುಣಿಸುವ ಹಸ್ತಕ್ಕೆ ಗೌರವದ ಅರ್ಚನ
ಹತ್ತಿ, ತುಳಿದು ಮುನ್ನಡೆವಂಗೆ ವೈಭವದ ತೇರು
ಮೇಲೆತ್ತಿ, ಸಂತೈಸಿ ಸಾಗುವವಗೆ ಅಪವಾದದ ಹೇರು !
ಮೌಢ್ಯದ ಕಣ್ಪಟ್ಟಿ ಕಟ್ಟಿ, ಮೆರೆದಾಡುವಗೆ ಬಿರಿದು ಬಾವಲಿ
ಮೌಢ್ಯತೆಯ ಪೊರೆಕಿತ್ತು ಸತ್ಯದರ್ಶನ ತೋರ್ಪವಗೆ ಉರಿಯ ಕಾವಲಿ.
ಇದೆಯಲ್ಲವೇ ಈ ಜಗದ ಲೀಲಾ ವಿನೋದ ? !
ಆದರೇಂ ? ಅಲ್ಪ ಕೀರ್ತಿಯ ಕಡೆಗೆ ನಿಮಗಿಲ್ಲ ತೀಕ್ಷ್ಣ ಉನ್ಮಾದ !
ಕೋಣನ ಹೇರಿಂಗೆ ಕುನ್ನಿ ಬುಸುಗುಡುವಂಥ ಜನಮನವ
ಸಹಿಸಿಕೊಂಡು, ಮತ್ತೆ ಮಾತೃಹೃದಯದಿಂ ತಿದ್ದಿ ತೀಡುವ ತವಕಿಗಳು
ಮರೆವಿನ ತಿಮಿರಕ್ಕೆ ಶತಮಾನಗಳಿಂ ಹೊಂದಿಕೊಂಡ ಕಣ್ಣುಳ್ಳವರ
ಕಣ್ಪೊರೆಯ ವೈಚಾರಿಕತೆಯ ಶಸ್ತ್ರದಿಂ ಹರಿದ ಮರುಕಿಗಳು
ಉಪ್ಪು ನೀರನು ನುಂಗಿ ಸವಿಯ ಜಲವನು ಈವ
ಮೇಘಾಳಿಯ ತೆರದಿ ನಿಮ್ಮ ಹಿರಿ ಬಾಳು !
ಸೊಪ್ಪು ಹಾಕದೆ ಬನ್ನಕೆ ಅದಮ್ಯ ಉತ್ಸಾಹದಿಂ ಸಾಗ್ವ
ಕ್ರಾಂತಿ ಖಡ್ಗವನಾಂತ ಸಚ್ಚಿದಾನಂದ ಕಂದ
ಸ್ವಾಮಿ ಲಿಂಗಾನಂದರು ನೀವು.

– ಜಗದ್ಗುರು ಮಾತೆ ಮಹಾದೇವಿ



— ಜಗದ್ಗುರು ಮಾತೆ ಮಹಾದೇವಿ

ಹರಿಜನರು ಮತ್ತು ಇಸ್ಲಾಂಗೆ ಮತಾಂತರ

ಹರಿಜನರು ಮುಸಲ್ಮಾನ್ ಧರ್ಮಕ್ಕೆ ಮತಾಂತರ ಹೊಂದುತ್ತಿರುವ ಸುದ್ದಿ ಈಗ ನಾಡಿನಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬುತ್ತಿದೆ. ಇಂಥ ಮತಾಂತರವು ಮುಸಲ್ಮಾನರು ಈ ದೇಶಕ್ಕೆ ಕಾಲಿಟ್ಟಾಗಿನಿಂದ ನಡೆಯುತ್ತಲೇ ಬಂದಿದ್ದರೂ. ಇತ್ತೀಚೆಗೆ ಈ ಸುದ್ದಿಗೆ ಹೊಸತೊಂದು ಚಾಲನೆ ಸಿಕ್ಕಿದೆ ಮುಸಲ್ಮಾನ್ ಧರ್ಮಕ್ಕೆ ಮತಾಂತರ ಹೊಂದುತ್ತಿರುವುದಕ್ಕೆ ಧಾರ್ಮಿಕ, ಸಾಮಾಜಿಕ ಕಾರಣಗಳೇ ಅಲ್ಲದೆ ಆರ್ಥಿಕ ಅದಕ್ಕೂ ಮಿಗಿಲಾಗಿ ರಾಜಕೀಯ ಕಾರಣಗಳು ಮಿಳಿತಗೊಂಡಿವೆ.

ವಿಧರ್ಮೀಯ ಹುಲಿಗಳಿಗೆ ಈ ದೇಶದಲ್ಲಿ ಪ್ರಚಲಿತವಿರುವ ವಿಲಕ್ಷಣವಾದ ಜಾತಿಪದ್ಧತಿ ಅತ್ಯುತ್ತಮ ಆಹಾರವನ್ನೊದಗಿಸಿದೆ. ಆಸ್ಟ್ರೇಲಿಯಾ, ಆಫ್ರಿಕಾ, ದಕ್ಷಿಣ ಅಮೆರಿಕ, ಉತ್ತರ ಅಮೆರಿಕ ಮುಂತಾದ ಭೂಖಂಡಗಳಲ್ಲಿ ಇದ್ದ ನೆಲದ ಮಕ್ಕಳನ್ನು, ನೆಲದ ಸಂಸ್ಕೃತಿಯನ್ನು ಸಂಪೂರ್ಣ ನಾಶಮಾಡಿದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಈಗ ಸದ್ಯಕ್ಕೆ ಸಿಗಬಹುದಾದ ಆಹಾರ ಕೇವಲ ಭಾರತದಲ್ಲಿ ಮಾತ್ರ. ಉಳಿದೆಲ್ಲೆಡೆ ನುಂಗಿ ನೀರುಕುಡಿದಾಗಿದೆ. ಇನ್ನು ಇಸ್ರೇಲಿಯ ಯಹೂದ್ಯರಂತೂ ಇವರಿಗೆ ಗ್ರಾಸವಾಗುವವರಲ್ಲ. ಏಕೆಂದರೆ ಆ ರಾಷ್ಟ್ರ ಮತಾಂತರವನ್ನು ನಿಷೇಧಿಸಿದೆ. ಹೀಗಾಗಿ ಕ್ರೈಸ್ತ ಮಿಶನರಿಗಳು, ಮುಸಲ್ಮಾನ್ ರಾಷ್ಟ್ರಗಳು ಮತಾಂತರಕ್ಕೆ ಆಸೆಬುರುಕ ಕಣ್ಣಿಂದ ನೋಡುತ್ತಿರುವುದು ಭಾರತದತ್ತ. ಕೋಟ್ಯಾಂತರ ಡಾಲರುಗಳನ್ನು

ಉಭಯ ಧರ್ಮಗಳೂ ಮತಾಂತರಕ್ಕಾಗಿ ಸುರಿಯುತ್ತಿವೆ. ಈ ವಿದೇಶೀ ಹಣದ ಮಹಾನ್ ಪ್ರವಾಹವನ್ನೆದುರಿಸಿ ಹಿಂದೂ ಮಿಶನರಿ ಸಂಸ್ಥೆಗಳು ಕೆಲಸ ಮಾಡಲಾರದ್ದೊಂದು ಸಮಸ್ಯೆಯಾದರೆ, ಹಿಂದೂ ಜನಾಂಗದಲ್ಲಿ ಪ್ರಚಲಿತವಿರುವ ಅನಿಷ್ಟಮಯವಾದ ಜಾತಿಪದ್ಧತಿ, ಅಸಹ್ಯವಾದ ಅಸ್ಪೃಶ್ಯತಾ ಕಲ್ಪನೆ, ಬ್ರಹ್ಮವಾದಿಗಳಾಗಿ ಶುಷ್ಕ ತತ್ತ್ವಜ್ಞಾನ ಹೇಳುತ್ತಾ ದಂತಗೋಪುರವನ್ನೇರಿ ಕುಳಿತ ಏಕಾಂತವಾದಿಗಳು, ಮಡಿವಂತರಾಗಿ ಎಂಥದೇ ಪ್ರಸಂಗದಲ್ಲಿ ಬದಲಾಗದ ಸಂಪ್ರದಾಯವಾದಿಗಳು—ಈ ಎಲ್ಲವೂ ಹಿಂದೂ ಸಮಾಜವನ್ನು ತತ್ತರಿಸುವಂತೆ ಮಾಡುತ್ತಿವೆ. ಹಿಂದೂ ಸಮಾಜದಿಂದ ಹರಿಜನರ ಮತಾಂತರಗಳು ನಡೆಯಲಿಕ್ಕೆ ಸವರ್ಣೀಯರ ತಿರಸ್ಕಾರವೊಂದೇ ಕಾರಣವಾಗದೆ, ಸಂಘಟನಾತ್ಮಕ ಶಕ್ತಿಯಾಗಬಯಸಿರುವ ಮುಸಲ್ಮಾನರ ಸತತ ಪ್ರಯತ್ನ ಮತ್ತು ಪ್ರಚಾರವೂ ಕಾರಣವಾಗಿದೆ. ಅಲ್ಪಸಂಖ್ಯಾತರ ಹೆಸರಿನಲ್ಲಿ ತಮ್ಮ ಬೇಡಿಕೆಗಳನ್ನು ಸುಲಭವಾಗಿ ಈಡೇರಿಸಿಕೊಳ್ಳಬಹುದೆಂಬ ರಾಜಕಾರಣಿಗಳ ಕೈವಾಡ ಇಲ್ಲಿ ಮಿಳಿತವಾಗಿದೆ. ತೈಲ ಮಾರಿ ಗಳಿಸಿದ ಅಪಾರ ಹಣವನ್ನು ಜನಸಂಖ್ಯಾವರ್ಧನೆಗೆ ತೊಡಗಿಸಲು ಕಾತುರರಾಗಿರುವವರ ಏಜೆಂಟರಾಗಿ ತಾವಷ್ಟು ಹಣ ಮಾಡಿಕೊಳ್ಳುವ ಆಕಾಂಕ್ಷೆಯುಳ್ಳವರ ಕೈಚಳಕವೂ ಸೇರಿದೆ ಎಂಬುದಾಗಿ ಬಲವಾದ ವದಂತಿ. ಇನ್ನು ಕೆಲವು ವದಂತಿಗಳ ಪ್ರಕಾರ ಖೋಟಾನೋಟು ಹಂಚಿಕೆ, ಕಳ್ಳಸಾಗಾಣಿಕೆ, ಕೆಲವು ಕೊಲೆ ಆರೋಪ—ಈ ಎಲ್ಲವುಗಳಿಂದ ಸುಲಭವಾಗಿ ಬಿಡುಗಡೆಯಾಗಲು ಮತಾಂತರ ಒಂದು ಸಾಧನವಾಗಿದೆಯಂತೆ. ಜೊತೆಗೆ ವ್ಯವಸ್ಥಿತ ಪತ್ರಿಕಾ ಪ್ರಚಾರವೂ ಶಾಂತವಾಗಿರುವ ಜನರನ್ನು ಕಲಕಿ ಪ್ರಚೋದಿಸದೆ ಇರದು.

ಇಷ್ಟೆಲ್ಲಾ ಕಾರಣಗಳಿದ್ದರೂ, ಇವುಗಳ ಮೇಲೆಯೇ ಹೊಣೆಹಾಕಿ ನಾವು ಜಾರಿಕೊಳ್ಳುವುದು ಮೂರ್ಖತನವೂ, ಅಮಾನುಷವೂ ಆಗುವುದು. ಹಿಂದೂ ಸಮಾಜದ ಬಹುದೊಡ್ಡ ಲೋಪ ಮತ್ತು ಪಾಪ ಜಾತಿಪದ್ಧತಿ, ವರ್ಣವ್ಯವಸ್ಥೆ ಮತ್ತು ಅದರ ವಿಷಫಲವಾದ ಅಸ್ಪೃಶ್ಯತೆ. ಅದು ಕೈಮೀರಿ ಹೋಗುವಷ್ಟು ಶತಮಾನಗಳ ಅವಧಿಯಲ್ಲಿ ಬೆಳೆದು ರಕ್ಕಸಾಕಾರ ತಾಳಿನಿಂತಿದೆ. ಸಹಸ್ರಾರು ವರ್ಷಗಳಿಂದ ಜಾತಿಪದ್ಧತಿಯ ಕೋಟೆ ಸಡಲಿಸಲು ಅನೇಕ ಸಂತರು ಶ್ರಮಿಸಿದರೂ ಅದರ ಒಂದು ಕಲ್ಲನ್ನೂ ಅಲ್ಲಾಡಿಸಲಾಗಿಲ್ಲವೇನೋ ಎಂದು ಭಾಸವಾಗುತ್ತಿದೆ. ಇಂದಿನ ಹಲವಾರು ರಾಜಕಾರಣಿಗಳಂತೂ ಇನ್ನಷ್ಟು ಬಲಗೊಳಿಸಿದ್ದಾರೆ ತಮ್ಮ ಸ್ವಾರ್ಥ, ಸಂಕುಚಿತ ಮನೋಭಾವಗಳಿಂದಾಗಿ ಹಿಂದೂ ಸಮಾಜವನ್ನು, ಭಾರತವನ್ನು ಕುರೂಪಿಯಾಗಿ ಮಾಡಿರುವ ಈ ಜಾತಿಪದ್ಧತಿ, ಅಸ್ಪೃಶ್ಯತೆಗಳಿಂದ ಮುಕ್ತರಾಗಲು ಸಾಧ್ಯವಿಲ್ಲವೆ? ಎಂದು ಚಿಂತೆಯಾಗುವುದು ವಿಚಾರವಂತರಿಗೆ ತೀರಾ ಸಹಜ.

ಹರಿಜನರನ್ನು ಕೆರಳಿಸುವುದರಲ್ಲಿ ಪತ್ರಿಕೆಗಳ ಪಾಲು

ಜಾತಿಭಾವನೆಗಳು, ಕೋಮುಗಲಭೆಗಳನ್ನು ಉದ್ರೇಕಿಸುವಲ್ಲಿ ಪತ್ರಿಕೆಗಳದು ಬಹುದೊಡ್ಡ ಪಾತ್ರವಿದೆ. ತಾವು ಹರಿಜನರ ಬಗ್ಗೆ ತುಂಬಾ ಔದಾರ್ಯಭಾವನೆಯನ್ನು ತೋರುತ್ತಿದ್ದೇವೆಂದು ಪ್ರದರ್ಶಿಸಿಕೊಳ್ಳಲೋ ಏನೋ ವಿನಾ ಕಾರಣ ಬಣ್ಣ ಕೊಟ್ಟು ವರದಿಗಳನ್ನು ಪ್ರಕಟಿಸುತ್ತಾರೆ. 'ಸವರ್ಣೀಯರಿಂದ ಹರಿಜನ ತರುಣನ ಕೊಲೆ' ಎಂಬ ತಲೆಬರಹ ಕಾಣುತ್ತಿದ್ದಂತೆಯೇ ಹರಿಜನರಲ್ಲಿ ರೋಷದ ಜ್ವಾಲಾಮುಖಿ ಏಳುತ್ತಿರುತ್ತದೆ; ಸವರ್ಣೀಯ ಹಿಂದೂ ಸಮಾಜದ ಬಗ್ಗೆ ತಿರಸ್ಕಾರ, ಕ್ರೋಧ ಜನಿಸುತ್ತವೆ. ಆದ್ದರಿಂದ ಪತ್ರಿಕೆಗಳು ವರದಿಗಳನ್ನು ಪ್ರಕಟಿಸುವ ಮೊದಲಿಗೆ ಸತ್ಯ ಕಾರಣವನ್ನು ಕಂಡುಹಿಡಿಯುವುದೊಳ್ಳಿತು.

ಕೆಲವು ಪ್ರಸಂಗಗಳು :

1. ಓರ್ವರ ಮನೆಯಲ್ಲಿ ಹರಿಜನ ಬಾಲಕನೊಬ್ಬ ಕೆಲಸ ಮಾಡುತ್ತ ಏನಾದರೂ ಕದ್ದುಕೊಂಡನೆಂದು ಭಾವಿಸಿದಾಗ, ಕದ್ದುದೇಕೆಂದು ಅವನಿಗೆ ದಂಡಿಸಬಹುದು. ಇಲ್ಲಿ ಆ ಹುಡುಗನನ್ನು ದಂಡಿಸಿದ್ದು ಕಳ್ಳತನಕ್ಕಾಗಿಯೇ ವಿನಾ ಅಸ್ಪೃಶ್ಯನೆಂದಲ್ಲ; ಹರಿಜನ ಹುಡುಗನ ಬದಲಿಗೆ ಬ್ರಾಹ್ಮಣರ ಹುಡುಗ ಕದ್ದಿದ್ದರೂ ಅವನು ದಂಡಿಸಲ್ಪಡುತ್ತಿದ್ದನಷ್ಟೆ! ಒಂದು ವೇಳೆ ಅಸ್ಪೃಶ್ಯತೆಯ ಆಚರಣೆ ಮಾಡುವ ವ್ಯಕ್ತಿ ಆ ಮನೆಯ ಮಾಲಿಕನಾಗಿದ್ದಿದ್ದರೆ ಆ ಜಾತಿಯ ಹುಡುಗನನ್ನು ಏಕೆ ಇರಿಸಿಕೊಳ್ಳುತ್ತಿದ್ದ ?!

ಒಮ್ಮೆ ಓರ್ವ ಹಿರಿಯ ಮುಂದಾಳುಗಳ ಮನೆಯಲ್ಲೊಂದು ಘಟನೆ ನಡೆಯಿತು. ಅವರ ಮನೆಯಲ್ಲಿ ಅತ್ಯಂತ ಆದರಭಾವನೆಯಿಂದ ಹರಿಜನ ಕುಟುಂಬವೊಂದನ್ನು ಕೆಲಸಕ್ಕೆ ಇರಿಸಿಕೊಂಡಿದ್ದರು. ಅವರಿಗೆ ನೆಮ್ಮದಿಯಿಂದ ಬದುಕಲಿಕ್ಕೂ ಅನುವು ಮಾಡಿಕೊಟ್ಟಿದ್ದರು. ಒಂದು ದಿನ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹರಿಜನ ಬಾಲಕಿ ಹಸನುಮಾಡಲು ಕೊಟ್ಟಿದ್ದ ಅಕ್ಕಿಯನ್ನು ಕದ್ದು, ಅಂಗಡಿಗೆ ಮಾರಲು ಒಯ್ಯುತ್ತಿದ್ದಾಗ ಮನೆಯೊಡತಿಯ ಕೈಯಲ್ಲಿ ಸಿಕ್ಕಳು. ಆಕೆ ತಾನೇನೂ ಶಿಕ್ಷೆ ನೀಡದೆ ಕೋಣೆಯಲ್ಲಿ ಕೂಡಿಹಾಕಿ, ಆ ಬಾಲಕಿಯ ತಂದೆಯನ್ನು ಕರೆಯಲು ಹೋದಳು, ಅವನೇ ಬಂದು ಬುದ್ಧಿ ಹೇಳಲಿ ಎಂದು ನಿರೀಕ್ಷಿಸಿ. 'ತುಂಬಾ ಆತ್ಮೀಯತೆಯಿಂದ ಜೋಪಾನ ಮಾಡಿರುವ ಅವರ ಮನೆಯಲ್ಲಿ ಕಳ್ಳತನ ಮಾಡಿದೆಯಾ ?' ಎಂದು ತಂದೆಯು ಕೇಳಿಬಿಟ್ಟಾನು ಎಂಬ ಗಾಬರಿ, ಸಂಕೋಚಗಳಿಂದ ಆ ಹುಡುಗಿ ಕೋಣೆಯಲ್ಲಿ ನೇಣುಹಾಕಿಕೊಂಡು ಬಿಟ್ಟಿದ್ದಳು. ಅಸ್ಪೃಶ್ಯತಾ ನಿಷೇಧ ಶಾಸನದ ಬಲದಿಂದ ಇನ್ನಿತರ ರಾಜಕೀಯ ಪಕ್ಷಗಳವರು ಆ ಹಿರಿಯರ ಮೇಲೆ ವ್ಯಾಜ್ಯ ಹೂಡಿ

ಸಲು ಯತ್ನಿಸಿದರು. ಆ ಬಾಲಕಿಯ ತಂದೆಯೇ ಸ್ವತಃ ಒಪ್ಪಿಕೊಳ್ಳಲು ತಯಾರಿರಲಿಲ್ಲ. ಆ ಹಿರಿಯರು ತಮ್ಮನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆಂಬುದನ್ನು ಅವನು ಬಲ್ಲ.

2. ಒಮ್ಮೆ ಒಂದು ಬಹುದೊಡ್ಡ ಸರ್ಕಾರಿ ಉದ್ಯಮದ ಕಾರ್ಯಾಲಯದಲ್ಲಿ ನಡೆದ ಘಟನೆ. ಅದರ ಮುಖ್ಯಸ್ಥರು ತೀರಾ ಮೃದು ಸ್ವಭಾವದವರು. ಜಾತಿಯಿಂದ ಬ್ರಾಹ್ಮಣರು, ಕರ್ತವ್ಯ ದಕ್ಷತೆಯಲ್ಲಿ ಹೆಸರಾದವರು. ಅಲ್ಲಿ ಕೆಲಸಮಾಡುವ ಓರ್ವ ತರುಣ ಆವೇಳೆಯಲ್ಲಿ ಕುಡಿದುಬಂದು ತಾನೂ ಕೆಲಸಮಾಡದೆ, ಉಳಿದ ಕಾರ್ಯಮಗ್ನರನ್ನೂ ಕೆಡಿಸುತ್ತ ಹರಟೆಕೊಚ್ಚುತ್ತಿದ್ದ. ಅಧಿಕಾರಿ ಬಂದು ಗದರಿಕೊಂಡರು. ಇವನು ಸೀದಾ ಹೋಗಿ ಅಧಿಕಾರಿಯ ಕೊರಳಪಟ್ಟಿ ಹಿಡಿದು ಜಗಳಕ್ಕೆ ಆರಂಭಿಸಿದಾಗ ಉಳಿದ ಕೆಲಸಗಾರರು ಬಂದು ಬಿಡಿಸಿ, ಅವನನ್ನು ಹೊರಗೆ ಹಾಕಿದರು. ಆದರೆ ಆ ತರುಣ ಸೀದಾ ಆರಕ್ಷಕ ಠಾಣೆಗೆ ಹೋಗಿ 'ತಾನು ಹರಿಜನನೆಂಬ ಕಾರಣಕ್ಕೆ ಆ ಬ್ರಾಹ್ಮಣ ಅಧಿಕಾರಿಗಳು ಅವ್ಯಾಚ್ಯವಾಗಿ ಬೈದರು, ಅಗೌರವಿಸಿದರು' ಎಂದು ದೂರುಕೊಟ್ಟ. ಇಲ್ಲಿ ಬ್ರಾಹ್ಮಣ—ಹರಿಜನ ಎಂಬ ದೃಷ್ಟಿಯಲ್ಲಿ ಈ ಪ್ರಸಂಗವನ್ನು ವಿಶ್ಲೇಷಿಸದೆ, ಉಸ್ತುವಾರಿ ಅಧಿಕಾರಿಯ ಕರ್ತವ್ಯಪಾಲನೆ—ಕೆಲಸಗಾರರ ನಿಷ್ಠೆ ಈ ದೃಷ್ಟಿಯಿಂದ ಅರ್ಥೈಸಬೇಕು.

ಯಾವುದಾದರೊಂದು ಗ್ರಾಮದಲ್ಲಿ ಎರಡು ರಾಜಕೀಯ ಗುಂಪುಗಳಿದ್ದು ಒಂದರ ಮುಖಂಡ ಹರಿಜನ, ಇನ್ನೊಂದರ ಮುಖಂಡ ಹರಿಜನೇತರನಿದ್ದು ಏನಾದರೂ ಗುಂಪು ಘರ್ಷಣೆಯಾದರೆ ಈ ಗಲಭೆಗೆ ಕೋಮುಗಲಭೆ ಎಂದು ಹೆಸರುಕೊಟ್ಟು ಸವರ್ಣೀಯ, ಹರಿಜನ ಘರ್ಷಣೆ ಎಂದು ಕರೆಯಬಾರದು. ಇದು ಪಕ್ಷ ಪಕ್ಷಗಳ ತಿಕ್ಕಾಟ. ಹರಿಜನನ ಸ್ಥಾನದಲ್ಲಿ ಇನ್ನೊಬ್ಬನಿದ್ದರೂ ಅಲ್ಲಿ ಘರ್ಷಣೆ ಆಗೇ ಆಗುತ್ತಿತ್ತು. ಹಿನ್ನೆಲೆಯನ್ನು ಆಲೋಚಿಸದೆ ಪತ್ರಿಕೆಗಳು ಅವಸರದ ವರದಿಯನ್ನು ಅಜ್ಞಾನದಿಂದಲೋ, ದುರುದ್ದೇಶದಿಂದಲೋ ಕೊಟ್ಟುಬಿಟ್ಟರೆ ಜನರ ಮನಸ್ಸಿನ ಮೇಲಾಗುವ ಪರಿಣಾಮ ಅಗಾಧ.

ಎರಡನೆಯದಾಗಿ ಹಿಟ್ಲರ್–ಗೋಬೆಲ್ಲರ ತಂತ್ರವೊಂದನ್ನು ಕೆಲವರು ಕಾರ್ಯಗತ ಮಾಡುತ್ತಾರೆ. ಒಂದು ಸುಳ್ಳನ್ನು ಹತ್ತಾರುಸಲ ಹೇಳುವುದರಿಂದ ಅದು ಸತ್ಯವೆಂಬ ಭಾವನೆ ಜನರಿಗೆ ಬರುತ್ತದೆಂದು, ಕೆಲವು ಸಂಘ ಸಂಸ್ಥೆಗಳವರು ಮತಾಂತರದ ಸುದ್ದಿಗಳನ್ನು ಸುಳ್ಳುಸುಳ್ಳಾಗಿ ಪತ್ರಿಕೆಗಳಿಗೆ ಪ್ರಕಟಿಸುತ್ತಾರೆ. ವ್ಯಾಪಕವಾದ ಪ್ರಚಾರ ಸಿಕ್ಕಾಗ, ಇನ್ನೊಂದು ಭಾಗದ ಜನರೂ ಪ್ರೇರಿತರಾಗಿ ಆ ದಿಶೆಯಲ್ಲಿ ಸುಲಭವಾಗಿ ಕೈಗೆ ಸಿಗುತ್ತಾರೆ ಎಂಬುದವರ ಧೋರಣೆ. ಪ್ರಮುಖ ದಿನಪತ್ರಿಕೆಗಳು ಇಂಥ ವಿಚಾರಗಳನ್ನು ಸಾರಾಸಾರಾ ವಿಚಾರಮಾಡಿ ಸಂಗ್ರಹಿಸದೆ ಸುಳ್ಳುಸುದ್ದಿಗಳನ್ನು ಪ್ರಕಟಿಸಬಾರದು.

ಹರಿಜನರು ತಮ್ಮ ಸಮಾನತೆ ಕಂಡುಕೊಳ್ಳಲು ಅನ್ಯಧರ್ಮಗಳನ್ನು ಆಶ್ರಯಿಸಲು ಹೋಗುವುದರಲ್ಲಿ, ಮುಖ್ಯವಾಗಿ ಇಸ್ಲಾಂ ಧರ್ಮ ಸೇರುವುದರಲ್ಲಿ ಅರ್ಥವಿದೆಯೆ ?

1. ಹಿಂದುಳಿದವರೆಂಬ ಕಾರಣಕ್ಕಾಗಿ ಈಗವರು ಪಡೆಯುವ ಎಲ್ಲ ಸೌಲತ್ತುಗಳನ್ನು ಕಳೆದುಕೊಳ್ಳುವರು.
2. ಸೌಲತ್ತು ತೆಗೆದುಕೊಂಡು ಏನು ಮಾಡುವುದು ? ಧಾರ್ಮಿಕ ಸ್ಥಾನಮಾನ ಮುಖ್ಯ ಎಂದು ಅನ್ನಬಹುದು. ಮತಾಂತರದಿಂದ ಸಿಕ್ಕಬಹುದಾದ ಸ್ಥಾನಮಾನವೇನು ? ಭಾರತೀಯರಲ್ಲಿ ರಕ್ತಗತವಾಗಿ ಬಂದಂತೆ ಇಲ್ಲಿಯ ಜನ ಯಾವ ಧರ್ಮವನ್ನೇ ಅನುಸರಿಸಲಿ ಜಾತಿವಿಂಗಡಣೆ ಸ್ವಾಭಾವಿಕವಾಗಿ ನುಸುಳುತ್ತದೆ. ಹರಿಜನ ಕ್ರೈಸ್ತರು, ಬ್ರಾಹ್ಮಣ ಕ್ರೈಸ್ತರು, ಹರಿಜನ ಬೌದ್ಧರು (ನವ ಬೌದ್ಧರು), ಹರಿಜನ ಮುಸ್ಲಿಮರು ಎಂಬ ಭೇದ ಸಹಜವಾಗಿಯೇ ಉಳಿಯುತ್ತ ಹೋಗುತ್ತದೆ.
3. ಈಗೊಂದು ತಿಂಗಳ ಹಿಂದೆ ಓರ್ವ ಕ್ರೈಸ್ತ ಸ್ತ್ರೀ ದುಃಖತಪ್ತಳಾಗಿ ಬಂದಳು. ನಾಲ್ಕೈದು ವರ್ಷಗಳ ಹಿಂದೆ ಮಾತ್ರ ಕ್ರೈಸ್ತರಾದ ಹರಿಜನರವರು. ಆಕೆಯ ನವಜಾತ ಮಗುವಿಗೆ ದೀಕ್ಷಾಸ್ನಾನಮಾಡಿಸಿ ನಾಮಕರಣ ಮಾಡಬೇಕಿತ್ತಂತೆ ಹೋದರೆ ಪಾದ್ರಿಗಳು ಮೊದಲೇ ಕಾರ್ಯಕ್ರಮ ನಿರ್ಧರಿಸದೆ ಏಕೆ ಬಂದೆ ಎಂದು ವಾಪಸ್ಸು ಕಳಿಸಿದರಂತೆ. ಆಕೆ ಸಾಲಮಾಡಿ ಸಾಮಾನು ಸರಂಜಾಮು ಕೊಳ್ಳಲು ಅರವತ್ತು ರೂಪಾಯಿ ಖರ್ಚುಮಾಡಿದ್ದಳಂತೆ ! ಮತಾಂತರ ಮಾಡುವ ಕಾಲದಲ್ಲಿ ಅವರು ತೋರುವ ಆಮಿಷವೆಷ್ಟು, ಕೊಡುವ ಹಣವೆಷ್ಟು! ಒಮ್ಮೆ ಆದನಂತರ ಹೇಗಿದ್ದರೂ 'ಹಿಂದೂ ಸಮಾಜಕ್ಕೆ ಹೊರಬರುವ ದಾರಿಯಿದೆ, ಒಳಹೋಗುವ ದಾರಿಯಿಲ್ಲ' ಎಂದರಿತು ಮತಾಂತರಗೊಂಡವರ ಬಗ್ಗೆ ಉದಾಸೀನ ತಾಳುತ್ತಾರೆ.

ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದುವುದರಿಂದ ಸರ್ಕಾರವನ್ನು ಹೆದರಿಸಲಿಕ್ಕೆ ಅಷ್ಟಿಷ್ಟು ಶಕ್ತಿ ಬಂದೀತೇ ವಿನಾ ಆಚಾರ–ವಿಚಾರಗಳ ಮಟ್ಟದಲ್ಲಿ ಸುಧಾರಣೆಯಾಗದು. ಇಸ್ಲಾಂ ಧರ್ಮವಿರುವ ಯಾವುದೇ ರಾಷ್ಟ್ರವನ್ನು ತೆಗೆದುಕೊಂಡರೂ ಅಲ್ಲಿ ಕ್ರೌರ್ಯ, ಶೋಷಣೆ, ಸುಲಿಗೆ, ಅತ್ಯಾಚಾರ, ಸೇನಾಡಳಿತ ತಾಂಡವವಾಡುತ್ತಿವೆ. ಎಲ್ಲಿ ನೋಡಿದರೂ ಮಾರಾಮಾರಿ, ಆಳ್ವಿಕೆಗಳ ತ್ವರಿತ ಪಲ್ಲಟ, ಹತ್ಯೆ, ವಿಚಾರಣೆ ಇಲ್ಲದೆ ಜನರನ್ನು ಹತಿಸುವುದು, ದಯೆ–ಮಾನವೀಯತೆಗಳ ಸೋಂಕು ಇಲ್ಲದ ರಾಜಕೀಯ ವ್ಯವಸ್ಥೆ, ಧರ್ಮಪ್ರಧಾನ ರಾಷ್ಟ್ರವೆಂದು ಘೋಷಿಸುವ ಆತುರದಲ್ಲಿ ಸ್ತ್ರೀಯರ ಅಸಮಾನತೆ, ಘೋಷಾ ಪದ್ಧತಿ, ಬಹುಪತ್ನಿತ್ವ. ಇದೆಲ್ಲ ನೋಡಿದಾಗ ತತ್ತ್ವವಿಚಾರ

ದೃಷ್ಟಿಯಿಂದಲಾಗಲೀ, ಸಂಸ್ಕೃತಿಯ ದೃಷ್ಟಿಯಿಂದಲಾಗಲೀ ಅತ್ಯುತ್ತಮತೆಯನ್ನು ಕಾಣಲಾರೆವು. ಇಂಥದೊಂದು ಪ್ರವೃತ್ತಿ ಬೆಳೆಸುವ ಸಮಾಜವನ್ನು ಸೇರಲಿಕ್ಕೆ ಹರಿಜನರು ಹಾತೊರೆಯುವುದರಲ್ಲಿ ಅರ್ಥವೇನಿದೆ ?

ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು, ಅದರಲ್ಲೂ ವಿಶೇಷವಾಗಿ ಮುಸ್ಲಿಂ ಧರ್ಮವು ಸಂಪ್ರದಾಯಬದ್ಧ ಧರ್ಮ. ಅಲ್ಲಿ ವ್ಯಕ್ತಿಸ್ವಾತಂತ್ರ್ಯವೂ ತೀರಾ ಕಡಿಮೆ, ಇಲ್ಲವೆಂದರೂ ತಪ್ಪಾಗದು. ದೇವರು ಸಗುಣನು, ವ್ಯಕ್ತನು ಎಂದು ಹೇಳಿದ ಕಾರಣಕ್ಕೇ ಸೂಫಿ ಪಂಥದವರಿಗೆ ಎಂಥ ಕ್ರೂರಶಿಕ್ಷೆಯಾಯಿತು ! ಕೆಲವು ಸುಧಾರಣೆಗಳನ್ನು ಮಾಡಲೆಳಸಿದ್ದಕ್ಕೆ ಇರಾನಿನ ಷಹಾರಿಗೆ ಎಂಥ ದುರಂತ ಪ್ರಾಪ್ತವಾಯಿತು ಎಂದು ಇತಿಹಾಸದಲ್ಲಿ ಅರಿಯಬಹುದು. ಹಿಂದೂತತ್ತ್ವ ಉದಾರವಾದಿ ಮನೋಭಾವ ಉಳ್ಳದು. ಇಲ್ಲಿ ಕಟ್ಟಾ ಆಸ್ತಿಕನಿಂದ ಹಿಡಿದು ಶುದ್ಧ ನಾಸ್ತಿಕನವರೆಗೆ ಎಲ್ಲರಿಗೂ ಸ್ವಾತಂತ್ರ್ಯವಿದೆ. ಇಂದು ಹರಿಜನರೇ ಒಂದು ಸ್ವತಂತ್ರವಾದ ಗುರುಪರಂಪರೆಯನ್ನು, ಮಠವನ್ನು, ಪೀಠವನ್ನು ಆರಂಭಿಸಿದರೂ ಅಸಹನೆ ಪಡುವವರು ಯಾರೂ ಇಲ್ಲ. ಅದೇ ಅಂಥದೊಂದು ಪ್ರಯತ್ನಮಾಡಿದ ಮಾರ್ಮೋನ್ ಎಂಬುವನನ್ನು ಅಮೆರಿಕಾದಲ್ಲಿ ಕ್ರೂರವಾಗಿ ಶಿಕ್ಷಿಸಲಾಯಿತು. ಈ ವಿಶೇಷ ಸ್ವಾತಂತ್ರ್ಯದಿಂದಾಗಿಯೇ ಅನೇಕ ಜಾತಿ ಮತ ಪಂಥಗಳವರು ಹಿಂದೂ ಸಮಾಜದಲ್ಲಿ ದೊಡ್ಡ ದೊಡ್ಡ ಸಂತರಾಗಿದ್ದಾರೆ.

ಭಾರತ ಮತ್ತು ಇಸ್ಲಾಂ

ವ್ಯಕ್ತಿಯ ಸಂಬಂಧ ಸಮಾಜ–ಧರ್ಮ, ಭಾಷೆ-ರಾಷ್ಟ್ರ ಈ ನಾಲ್ಕು ಘಟಕಗಳೊಡನೆ ಬೆಸೆದುಕೊಂಡಿರುತ್ತದೆ. ಕೆಲವೊಂದು ಧರ್ಮಗಳು ಕೆಲವೊಂದು ಧೋರಣೆಯನ್ನು ಬೆಳೆಸುತ್ತವೆ. ಹಿಂದೂ ತತ್ತ್ವವು, ಎಲ್ಲಿಯೂ ವ್ಯಕ್ತಿ ತನ್ನ ಧರ್ಮವನ್ನು ಮುಖ್ಯವಾಗಿರಿಸಿಕೊಂಡು ರಾಷ್ಟ್ರೀಯತ್ವದಿಂದ ದೂರ ಉಳಿಯಲು ಬೋಧಿಸದೆ, ರಾಷ್ಟ್ರೀಯ ಪ್ರವಾಹದೊಡನೆ ಬೆಸೆದುಕೊಂಡು ಬಾಳಲು ಬೋಧಿಸುತ್ತದೆ. ಅಮೆರಿಕಾ, ಇಂಗ್ಲಂಡುಗಳಲ್ಲಿದ್ದ ಹಿಂದುಗಳು ಆ ರಾಷ್ಟ್ರದ ಪ್ರವಾಹದೊಡನೆ ಬೆಸೆದುಕೊಂಡು ಬಾಳುತ್ತಾರೆ. ಅಲ್ಲಿಯ ಪೌರತ್ವವನ್ನು ಸ್ವೀಕರಿಸಿದ ಮೇಲೆ ಅಲ್ಲಿಯ ಸಂವಿಧಾನಕ್ಕೆ ಬದ್ಧರಾಗುತ್ತಾರೆ. ಓರ್ವ ತಾಯಿ ಹೆತ್ತು, ಹಸುಕೂಸನ್ನು ಅನ್ಯರಿಗೆ ದತ್ತು ಕೊಟ್ಟಾಗ ಆ ಮಗು ಸಾಕುತಾಯಿಯನ್ನೇ ಮಮತೆಯಿಂದ 'ಅಮ್ಮಾ' ಎಂದು ಕರೆದು, ಸಾಕುತಾಯಿಯ ಮಮತೆಯನ್ನೇ ಹೆಚ್ಚಾಗಿ ಬಯಸುವಂತೆ ಹಿಂದುಗಳು ಭಾರತದಲ್ಲಿ ಹುಟ್ಟಿ ಅಮೆರಿಕಾದಂತಹ ನಾಡುಗಳಿಗೆ ಹೋದರೂ, ಪೌರತ್ವ ನೀಡಿದ ರಾಷ್ಟ್ರದ ಹಿತಾಸಕ್ತಿಗೆ ಎಂದೂ ಧಕ್ಕೆ ತಂದುದನ್ನು ಕಾಣೆವು. ಇದಕ್ಕಾಗಿ ನಾವು ಹೆಮ್ಮೆಪಡಬೇಕು. ಜನನಿ ಮತ್ತು ಜನ್ಮಭೂಮಿಗಳು ಸ್ವರ್ಗಕ್ಕಿಂತಲೂ ಮಿಗಿಲಾದವು ಎಂಬ

ಋಷಿವಾಣಿ ಈ ಮನೋಭಾವವನ್ನು ಹಿಂದುಗಳಲ್ಲಿ ರಕ್ತಗತ ಮಾಡಿರಲಿಕ್ಕೂ ಸಾಕು. ಅಂತೆಯೇ ಯಾವ ರಾಷ್ಟ್ರಗಳಲ್ಲಿಯೂ ಅವರು ರಾಷ್ಟ್ರದ್ರೋಹದ ಕಾರ್ಯದಲ್ಲಿ ತೊಡಗಿದುದನ್ನಾಗಲೀ, ರಾಷ್ಟ್ರಕ್ಕೆ ಧಕ್ಕೆ ತರುವಂತಹ ಚಟುವಟಿಕೆ ಮಾಡಿದ್ದನ್ನಾಗಲೀ ಅಷ್ಟಾಗಿ ಕಾಣೆವು. ಇಷ್ಟು ಮಾತ್ರವಲ್ಲದೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಒಂದು ಮಾತನ್ನಾಡಬಹುದು. ಭಾರತದ ಮಿಲಿಟರಿ ಅತ್ಯಂತ ಸಬಲವಾದ, ಶ್ರೇಷ್ಟವಾದ ಮಿಲಿಟರಿ. ಆದರೆ ಎಂದೂ ಮಿಲಿಟರಿ ಪ್ರಜಾಪ್ರಭುತ್ವಕ್ಕೆ ತಿರುಗಿ ಬಿದ್ದುದನ್ನಾಗಲೀ, ಅಧಿಕಾರವನ್ನು ತಾನೇ ವಹಿಸಿಕೊಳ್ಳಬೇಕೆಂಬುದನ್ನು ವ್ಯಕ್ತಪಡಿಸಿದ್ದಾಗಲೀ ಕಾಣೆವು. ಈ ದೇಶದ ಜನ ಎಂತಹ ಭವ್ಯರು, ಧೀಮಂತರು, ಆದರ್ಶವಾದಿಗಳು ಎಂಬುದನ್ನು ಇದರಿಂದ ನಾವು ಅರಿಯಬಹುದು.

ಇಸ್ಲಾಂ ವಿದೇಶದಿಂದ ಬಂದ ಬೇರೊಂದು ಸಂಸ್ಕೃತಿಯ ಧರ್ಮ. ಆ ಧರ್ಮವನ್ನು ಪಾಲಿಸುವವರಲ್ಲಿ ಅನೇಕ ಜನ ರಾಷ್ಟ್ರಭಕ್ತರು, ಉದಾರಿಗಳು, ಸಮರಸಗುಣ ಉಳ್ಳವರು ಇರಬಹುದು. ಆದರೆ ಬಹುಪಾಲು ಜನ ರಾಷ್ಟ್ರೀಯ ಪ್ರವಾಹದಲ್ಲಿ ಒಂದಾಗದೆ ಪ್ರತ್ಯೇಕವಾಗಿ ಉಳಿಯಲಿಚ್ಛಿಸುವವರು. ಅಂಥವರ ಧೋರಣೆಯ ಪ್ರಕಾರ ರಾಷ್ಟ್ರಕ್ಕಿಂತಲೂ ಅವರ ಧರ್ಮ ದೊಡ್ಡದು. ಯಾವ ನೆಲದ ಅನ್ನವನ್ನುಂಡು, ಗಾಳಿ ನೀರುಗಳನ್ನು ಉಂಟೆ ಬದುಕುತ್ತೇವೋ ಅಂಥ ನೆಲಕ್ಕೆ ನಿಷ್ಠರಾಗಿದ್ದರೆ ದೇವರು-ಅಲ್ಲಾ ಮೆಚ್ಚುವನೇ ವಿನಾ ತಾನು ನಿಂತ, ಆಡಿದ ನೆಲಕ್ಕೆ ದ್ರೋಹ ಬಗೆದು ಅವನನ್ನು ಪೂಜಿಸಿದರೆ, ಪ್ರಾರ್ಥಿಸಿದರೆ ಮೆಚ್ಚುವನೇ? ಸ್ವೀಕರಿಸಿರುವುದು ಭಾರತೀಯ ಪೌರತ್ವ, ಉಣ್ಣುವುದು ಇಲ್ಲಿಯ ಅನ್ನ. ಆದರೆ ಕ್ರಿಕೆಟ್‌ನಲ್ಲಿ ಭಾರತವು ಸೋತರೆ, ಪಾಕಿಸ್ತಾನ ಗೆದ್ದರೆ ಜಯಘೋಷ ಮಾಡುವುದು ವಂಚನೆಯಾಗದೆ? ಪಾಕಿಸ್ತಾನ ಬಾಂಗ್ಲಾದ ಸೋದರರನ್ನು ಶಿಕ್ಷಿಸಿ, ಶೋಷಿಸುತ್ತಿದ್ದಾಗ ಎಲ್ಲಿತ್ತು ಅವರ ಧಾರ್ಮಿಕ ಭ್ರಾತೃತ್ವ! "ಊರು ದನ ಕಾಯ್ದು ದೊಡ್ಡ ಬೋರ ಎನ್ನಿಸಿಕೊಂಡ" ಎಂಬ ಗಾದೆಯಂತೆ ಭಾರತ ತನ್ನ ಹಣವನ್ನು ವ್ಯಯಿಸಿ, ಶೋಷಣೆ ತಪ್ಪಿಸಲೋಸುಗ ಬಾಂಗ್ಲಾಕ್ಕೆ ಸಹಾಯ ಮಾಡಿದುದೂ ಅಲ್ಲದೆ ತಮ್ಮ ಧರ್ಮೀಯರೇ ತಮ್ಮ ಹತ್ಯಾಕಾಂಡ ಮಾಡಿದಾಗ ಪ್ರವಾಹದೋಪಾದಿಯಲ್ಲಿ ನಿರಾಶ್ರಿತರಾಗಿ ಬಂದ ಬಂಗ್ಲಾದ ಇಸ್ಲಾಮೀಯರನ್ನು ಜನ ಸಂಖ್ಯಾಬಾಹುಳ್ಯದಿಂದ ತತ್ತರಿಸುತ್ತಿದ್ದ ಈ ಬಡದೇಶ ಮಾನವೀಯ ದೃಷ್ಟಿಯಿಂದ ಒಳಕರೆದುಕೊಂಡಿತು. ಬರುವಾಗ ಅಂಗೈಯಗಲ ಭೂಮಿ ಸಿಕ್ಕರೆ ಸಾಕು ಎಂದು ವಿನೀತರಾಗಿ ನುಗ್ಗಿ, ಒಳಬರುತ್ತಿದ್ದಂತೆಯೇ ಗುರ್ರೆಂದು ಆಕ್ರಮಣಕಾರೀ ಪ್ರವೃತ್ತಿ ಬೆಳೆಸಿಕೊಳ್ಳುವುದನ್ನು ದೇವರಾದರೂ ಒಪ್ಪಿಯಾನೆ? ರಾಷ್ಟ್ರಕ್ಕಿಂತಲೂ ಧರ್ಮವೇ ದೊಡ್ಡದು ಎಂದು ಅಂದಿನ ಶೋಷಣೆ, ಕ್ರೌರ್ಯಗಳನ್ನು ಮರೆತು ಪಾಕಿಸ್ತಾನ ಬಾಂಗ್ಲಾಗಳು ಈಗ ಧರ್ಮದ ಹೆಸರಿ

ನಲ್ಲಿ ಒಂದಾಗಿ ಭಾರತವನ್ನು ದ್ವೇಷಿಸತೊಡಗುವುದು ನ್ಯಾಯವೆ? ಧಾರ್ಮಿಕ ಭ್ರಾತೃತ್ವದ ಹೆಸರಿನಲ್ಲಿ ಸ್ನೇಹವನ್ನೂ ಗಾಳಿಗೆ ತೂರಿತು ಬಾಂಗ್ಲಾ ಸರ್ಕಾರ.

ಮುಸ್ಲಿಮರು ಮತ್ತು ಸುರಕ್ಷಿತತೆ

ಮುಸ್ಲಿಮರು ಅಲ್ಪ ಸಂಖ್ಯಾತರು, ಅರಕ್ಷಿತರು ಎಂದು ಮುಸ್ಲಿಂ ಸಮಾಜದ ಹಲವಾರು ಮುಖಂಡರು ಆಗಾಗ ಕೂಗಾಡುವುದುಂಟು? ಇದು ಸತ್ಯವೇ? ಇಂದು ಹಿಂದೂಸ್ಥಾನದಲ್ಲಿ ಹಿಂದುಗಳು ಅರಕ್ಷಿತರಾದಷ್ಟು ಬೇರಾರೂ ಆಗಿಲ್ಲ.

1. ಆರ್ಥಿಕ ದೃಷ್ಟಿಯಿಂದ ಶ್ರೀಮಂತ ರಾಷ್ಟ್ರಗಳಿಂದ ಕೋಟಿಗಟ್ಟಳೆ ಹಣವನ್ನು ಮುಸ್ಲಿಮ್, ಕ್ರೈಸ್ತ ಸಂಘ ಸಂಸ್ಥೆಗಳು ಪಡೆಯುತ್ತಿವೆ.

2. ಧರ್ಮದ ದೃಷ್ಟಿಯಿಂದ ಬಲಶಾಲಿ ತೋಳಗಳು ಕುರಿಗಳನ್ನು ನುಂಗಿ ಹಾಕುವಂತೆ ನಾನಾ ಕಾರಣಗಳಿಂದ ಅಸಂಖ್ಯಾತ ಹಿಂದುಗಳನ್ನು ಮತಾಂತರಿಸಿ ಬೀಗುತ್ತಿದ್ದಾರೆ.

3. ಸಂಘಟನಾ ದೃಷ್ಟಿಯಿಂದ ಅಚ್ಚುಕಟ್ಟಾಗಿ ಶಸ್ತ್ರಾಸ್ತ್ರಗಳ ಬಲದಿಂದ ಆಂತರಿಕ ಯುದ್ಧಗಳಲ್ಲಿ ತಲ್ಲೀನರಾಗುತ್ತಾರೆ. ಎಲ್ಲ ಹಿಂದು ದೇವಾಲಯಗಳು ಪತ್ರೆ-ಪುಷ್ಪ, ದೀಪ-ಧೂಪ, ವಿಭೂತಿ-ಕುಂಕುಮಗಳ ಸಂಗ್ರಹ ಹೊಂದಿದ್ದರೆ ಕೆಲವಾರು ಮಸೀದಿಗಳು ಲಕ್ಷಲಕ್ಷಗಟ್ಟಳೆ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿರುತ್ತವೆಂಬ ವದಂತಿ.

4. ಅಲ್ಪ ಸಂಖ್ಯಾತರೆಂದು ಹೇಳಿಕೊಳ್ಳುತ್ತ ಹಲವಾರು ಅಕೃತ್ಯಗಳನ್ನು ಅದರಲ್ಲಿ ಮುಚ್ಚಿಕೊಳ್ಳುತ್ತ ಈಗಲೇ ಸರ್ಕಾರವನ್ನು ಕೌಲೆತ್ತಿನಂತೆ ಆಟವಾಡಿಸುತ್ತ ಇರುವ ಮುಸಲ್ಮಾನರು, ಮತಾಂತರ ಮತ್ತು ಕುಟುಂಬ ನಿಯಂತ್ರಣವಿಲ್ಲದ ಸಂತಾನೋತ್ಪತ್ತಿಯ ಮುಖಾಂತರ ಬಹುಸಂಖ್ಯಾತರಾದಾಗ (ಆ ಕಾಲ ದೂರವೇನಿಲ್ಲ) ಯಾವ ರೀತಿ ವರ್ತಿಸಬಹುದು? ಆಗ, ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ಗುಂಡೂರಾಯರಾಗಲೀ, ದೇಶದ ಧೀಮಂತ ನಾಯಕರಾದ ಶ್ರೀಮತಿ ಇಂದಿರಾಜಯವರಾಗಲೀ ಅಧಿಕಾರಕ್ಕೆ ಬರುವುದನ್ನು ಕನಸಿನಲ್ಲಾದರೂ ಸ್ಮರಿಸಲಾದೀತೆ? ಹಿಂದೂಗಳು ಬಹುಸಂಖ್ಯಾತರಾಗಿದ್ದಾಗಲೂ ಮುಸ್ಲಿಮರು, ಕ್ರೈಸ್ತರು ಈ ದೇಶವನ್ನು ಆಳಿದ್ದಾರೆ. ಆದರೆ ಮುಸ್ಲಿಮರು ಬಹುಸಂಖ್ಯಾತರಾಗಿರುವಲ್ಲಿ ಹಿಂದೂಗಳು ಆಳುವುದಿರಲಿ, ಅವರು ಬದುಕಲೂ ಸಾಧ್ಯವಿಲ್ಲ. ಭಾರತ-ಪಾಕಿಸ್ತಾನ ವಿಭಜನೆಯ ಕಾಲಕ್ಕೆ ಇಲ್ಲಿ ಮುಸಲ್ಮಾನರು ಎಷ್ಟು ಇದ್ದರೋ ಅದಕ್ಕೆ ಎರಡು ಮೂರು ಪಟ್ಟು ಹುಲುಸಾಗಿ ಬೆಳೆದಿದ್ದಾರೆ. ಆದರೆ ಅದೇ ಕಾಲಕ್ಕೆ ಎಷ್ಟು ಜನ ಹಿಂದುಗಳು ಪಾಕಿಸ್ತಾನ, ಬಾಂಗ್ಲಾಗಳಲ್ಲಿ ಉಳಿದಿದ್ದರೋ ಅದರ ಹತ್ತರಷ್ಟು ಭಾಗ ಕುಗ್ಗಿದ್ದಾರೆ. ಸಂಖ್ಯಾ ಬಾಹುಳ್ಯದಲ್ಲಿ ಬೆಳೆಯಲು ಬೇಕಾದ

ನೀರು ಗೊಬ್ಬರಗಳನ್ನು ನಮ್ಮ ದೇಶ-ಸಮಾಜಗಳು ಯಥೇಚ್ಛವಾಗಿ ಅವರಿಗೆ ಒದಗಿಸಿ ಕೊಡುತ್ತವೆ. ಆದರೆ ಅವರ ದೇಶಗಳಲ್ಲಿ, ಹಿಂದುಗಳು ಹುಲಿಯ ಪಂಜರದಲ್ಲಿ ಕಾಲ ಕಳೆಯುವಂತೆ ಕಳೆಯಬೇಕಲ್ಲದೆ, ಬಲವಂತವಾಗಿಯಾದರೂ ಮತಾಂತರ ಹೊಂದಬೇಕು ಬದುಕಿ ಉಳಿಯಲು !

ಡಾ॥ ಅಂಬೇಡ್ಕರರು ಮಹಾನ್ ವಿಚಾರವಾದಿ. ಅವರು ದೀರ್ಘಾಲೋಚನೆ ಮಾಡಿದ್ದರು ಈ ವಿಷಯದಲ್ಲಿ. ದುಡುಕಿ ಅಭಾರತೀಯ ಧರ್ಮಗಳನ್ನು ಸೇರಲಿಲ್ಲ. ಇಂದು, ಭಾರತದಲ್ಲಿ ಜನ್ಮಿಸಿರುವ ಬೌದ್ಧ, ಜೈನ, ಲಿಂಗಾಯತ ಧರ್ಮಗಳನ್ನು ಪ್ರವೇಶಿಸಲು ವಿಪುಲ ಅವಕಾಶವಿದೆ. ಆರ್ಯ ಸಮಾಜ, ಬ್ರಹ್ಮ ಸಮಾಜಗಳು ದೀಕ್ಷೆ ನೀಡುತ್ತವೆ. 25-8-81 ರ ಪ್ರಜಾವಾಣಿಯ ಓದುಗರ ಓಲೆಯಲ್ಲಿ ಶ್ರೀ ಅರ್ಜುನಪುರಿ ಅಪ್ಪಾಜಿಗೌಡ, ಮದ್ದೂರು ಎಂಬವರ ಓಲೆ ನೋಡಿದೆ. ಬಸವ ತತ್ತ್ವವನ್ನು ಆಚರಣೆ ಮಾಡಿದರೆ ಲಿಂಗಾಯತರು ತಮ್ಮವರೆಂದು ಸ್ವೀಕರಿಸಿಯಾರೆ? ಎಂದು ಕೇಳಿದ್ದಾರೆ. ಸಂತೋಷದಿಂದ ಎಂದು ಉತ್ತರ ಹೇಳಬಹುದು. ಹರಿಜನರಿಂದ ಮತ್ತು ಇತರ ಅನೇಕ ವರ್ಣದವರಿಂದ ಕ್ರೈಸ್ತ, ಇಸ್ಲಾಂ ಸಮಾಜಕ್ಕೆ ಮತಾಂತರವನ್ನು ಅನೇಕರು ಮಾಡಿದ್ದಾರೆ. ಆದರೆ ಅವರು ಪೂಜಾರ್ಹರಾಗಿ ಗೌರವಿಸಲ್ಪಟ್ಟಿದನ್ನು ಅಷ್ಟಾಗಿ ಕಾಣುವುದಿಲ್ಲ. ಆದರೆ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ ಬಸವಣ್ಣನವರ ಸಮಕಾಲೀನರಾದ ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯನಂಥವರು ಇತಿಹಾಸ ಪ್ರಸಿದ್ಧರಾದರು, ಪೂಜಾರ್ಹರಾದರು. ಮಲೆಯ ಮಹದೇಶ್ವರರು ಜನ್ಮತಃ ಮಾದಿಗರಿದ್ದರು. ಮುಂದೆ ಗುರುದೀಕ್ಷಾ ಸಂಸ್ಕಾರ ಹೊಂದಿದರು ಎಂಬೊಂದು ವಿಚಾರ ಕಂಸಾಳೆ ಪದಗಳಲ್ಲಿ ಕೇಳಿ ಬರುತ್ತದೆ. (ಈ ಬಗ್ಗೆ ಇನ್ನೂ ಭಿನ್ನಾಭಿಪ್ರಾಯವಿದೆ ವಿದ್ವಾಂಸರಲ್ಲಿ) ಬೀದರ ಜಿಲ್ಲೆಯಲ್ಲಿ ಬೆಲ್ಲದಾಳ ಸಿದ್ಧರಾಮ ಶರಣರು ಎಂಬವರು ಜನ್ಮತಃ ಹರಿಜನರು. ಈಗ ಬಸವ ಧರ್ಮವನ್ನು ಸ್ವೀಕರಿಸಿರುವ ಶರಣರು ಅವರು; ಮತ್ತೆ ತಮ್ಮ ಸಾಧನೆಯಿಂದ ನೂರಾರು ಹರಿಜನ ಕುಟುಂಬಗಳನ್ನು ಬಸವ ತತ್ತ್ವಕ್ಕೆ, ಸಾತ್ವಿಕ ಆಚಾರ – ವಿಚಾರಗಳಿಗೆ ಪರಿವರ್ತಿಸಿರುವುದೇ ಅಲ್ಲದೆ ಲಿಂಗಾಯತ ಸಮಾಜದವರಿಂದ ಎಲ್ಲ ದೃಷ್ಟಿಯಿಂದಲೂ ಗೌರವಿಸಲ್ಪಡುತ್ತಿದ್ದಾರೆ. ಹಿಂದೂತ್ವದ ಕಕ್ಷೆಯೊಳಗಿನಿಂದ ಹೊರಗೆ ಹೋಗದೆಯೇ ಹರಿಜನರ ಧಾರ್ಮಿಕ, ಸಾಮಾಜಿಕ ಸ್ಥಾನಗಳನ್ನು ಎತ್ತರಿಸಲು ಸಾಧ್ಯವಿದೆ. ಭಾರತೀಯ ಜನ್ಯ ಧರ್ಮಗಳಾವುವೂ ರಾಷ್ಟ್ರೀಯ ಭಾವೈಕ್ಯತಾ ಪ್ರವಾಹದಿಂದ ಜನರನ್ನು ಹೊರಗೆ ಒಯ್ಯವು ಎಂಬುದನ್ನು ನೆನಪಿನಲ್ಲಿಡಬೇಕು.

ಧಾರ್ಮಿಕ ಸೌಲಭ್ಯ, ಸೌಕರ್ಯಗಳನ್ನು, ಸಮಾನತೆಯನ್ನು ಹೊಂದಬಯಸುವ ಹರಿಜನರಿಗೆ ಭಾರತೀಯ ಜನ್ಯ ಧರ್ಮಗಳನ್ನು ಸೇರಲು ಅವಕಾಶವಿದೆ. ಇನ್ನೊಂದೂ

ಪರಿಹಾರವಿದೆ. ತಮ್ಮ ವೈಯಕ್ತಿಕತೆಯನ್ನು ಕಳೆದುಕೊಳ್ಳದೇ ಧಾರ್ಮಿಕ ಮಟ್ಟವನ್ನು, ಸ್ವಾವಲಂಬನೆಯನ್ನು ಸಾಧಿಸುವುದು. ಅಸ್ಪೃಶ್ಯ ಎಂಬ ಶಬ್ದ ಅನ್ಯರು ಹೇರಿದ್ದು ; ಹರಿಜನ ಎಂಬುದು ಸುಧಾರಣಾತ್ಮಕ ಹೆಸರು. ಮೂಲಹೆಸರು ಆದಿ ಕರ್ನಾಟಕ, ಆದಿ ದ್ರಾವಿಡ ಇತ್ಯಾದಿ. ಇವು ಐತಿಹಾಸಿಕ ದೃಷ್ಟಿಯಿಂದ ಮಹತ್ವಪೂರ್ಣವಾದವು ಈ ನೆಲದ ನಿಜ ನಿವಾಸಿಗಳು, ಮೂಲ ಮಕ್ಕಳು ಅವರೇ ಎಂಬುದನ್ನು ಈ ಶಬ್ದಗಳು ಸಾರಿ ಸಾರಿ ಹೇಳುತ್ತವೆ. ತಮ್ಮದೇ ಆದ ಒಂದು ಪರಂಪರೆಯನ್ನು ಅವರು ಹೊಂದಿದಾರೆಂಬುದು ಈ ಶಬ್ದಗಳಿಂದ ತಿಳಿದು ಬರುತ್ತದೆ. ಈ ಹರಿಜನರು ಅಥವಾ ಶ್ರೀ ಬಸವಲಿಂಗಪ್ಪನವರು ಕರೆಯುವಂತೆ ಹರಜನರು, ಆದಿ ಕರ್ನಾಟಕರು ತಮ್ಮದೇ ಆದ ಒಂದು ಸಮಾಜವನ್ನು ಸಂಘಟಿಸಬೇಕು. ತಮ್ಮವರೇ ಆದ ಒಬ್ಬ ಗುರುವನ್ನು ಮಾಡಿಕೊಳ್ಳಬೇಕು ಪೂಜಾರಿಗಳಿಗೆ ಶಿಕ್ಷಣ ನೀಡಿ ತರಬೇತಿ ಕೊಡಬೇಕು. ಧಾರ್ಮಿಕ ಆಚರಣೆಗಳಿಗಾಗಿ ಮೇಲ್ಜಾತಿಯವರೆನ್ನಿಸಿಕೊಂಡವರನ್ನು ಪೂಜಾರಿಕೆಗೆ ಕರೆಯುವ ಬದಲಿಗೆ ತಾವು ಸ್ವಾವಲಂಬನೆ ಸಾಧಿಸಬೇಕು. ಹತ್ತು ಕೋಟಿ ಜನಸಂಖ್ಯೆಯಿರುವ ಅವರು ತಾವೇ ಒಂದು ಶಕ್ತಿಯುತ ಗಮನಾರ್ಹ ಗುಂಪಾಗಬಲ್ಲರು.

ಸಾಂಪ್ರದಾಯಿಕ ವರ್ಣ ವ್ಯವಸ್ಥೆಯ ಜಾಡ್ಯವನ್ನು ಎದುರಿಸಲು ಇದೊಂದು ಉತ್ತಮ ಪರಿಹಾರ. ವರ್ಣಾಶ್ರಮ ವ್ಯವಸ್ಥೆಯ ಪ್ರಕಾರ ಒಕ್ಕಲಿಗರು ಶೂದ್ರರು. ಅವರಿಗಾದರೂ ಧಾರ್ಮಿಕ ಸ್ಥಾನಮಾನ ಕೊಡಲ್ಪಟ್ಟಿರಲಿಲ್ಲ. ಇಂಥದರಲ್ಲಿ ಚುಂಚನಗಿರಿಯಲ್ಲೊಂದು ಪೀಠ ಸ್ಥಾಪನೆ ಮಾಡಿ, ಪೀಠಾಧಿಕಾರಿಗಳನ್ನು ಕುಳ್ಳಿರಿಸಿ ಈಗ ಧಾರ್ಮಿಕ ಸ್ವಾವಲಂಬನೆಯತ್ತ ಸಾಗುತ್ತಿರುವುದು ಸ್ತುತ್ಯಾರ್ಹ. ಇನ್ನಷ್ಟು ಮುಂದರಿದು ತಮ್ಮ ತಮ್ಮ ಅನುಯಾಯಿಗಳ ಮನೆಗೆ ಪೂಜಾದಿಕಾರ್ಯಗಳನ್ನು ನೆರವೇರಿಸಲು, ಜಾತಕರ್ಮಗಳನ್ನು ಮಾಡಲು ಅವರದೇ ಜನಾಂಗದ ಅರ್ಚಕರನ್ನೂ ತಯಾರು ಮಾಡಿ ಬಿಟ್ಟರೆ ಅದು ಗಮನಾರ್ಹ ಸಾಧನೆಯಾಗುತ್ತದೆ. ಅದೇ ರೀತಿ ಲಿಂಗಾಯತ ಸಮಾಜದ ಅವಿಭಾಜ್ಯ ಗುಂಪಾದ ಸಾದು ಜನಾಂಗದವರು ಇಂತಹ ಪೂಜಾದಿಕಾರ್ಯಗಳನ್ನು ಮಾಡಿಸುವವರನ್ನು ತಯಾರು ಮಾಡಿರುವರು. ಕೆಲವೊಂದು ಆರ್ಯ ವೈಶ್ಯ ದೇವಾಲಯಗಳಲ್ಲಿ ತಮ್ಮವರೇ ಅರ್ಚಕರನ್ನು ಪೂಜಾದಿ ಕ್ರಿಯೆಗಳಿಗೆ ತೊಡಗಿಸಿದ್ದಾರೆ. ಇದು ಧಾರ್ಮಿಕ ಸ್ವಾವಲಂಬನೆಗೆ ಅತ್ಯಂತ ಸೂಕ್ತ ಪಥ. ಹರಿಜನರೂ ಸಹ ಧಾರ್ಮಿಕ ಕೇಂದ್ರಗಳನ್ನು ಆರಂಭಿಸಿ, ಜನರ ವೈಚಾರಿಕ ಮಟ್ಟದ ಸುಧಾರಣೆಗೆ ನಿಷ್ಠಾವಂತ ಪ್ರಯತ್ನ ಮಾಡಬೇಕು.

ಇನ್ನು ಕೆಲವರ ಅಭಿಪ್ರಾಯ ಯಾವುದಾದರೊಂದು ಮತದ ಅವಲಂಬನೆ ಏಕೆ ಬೇಕು ? ಹಿಂದೂ ಮತವನ್ನು ತ್ಯಜಿಸಿಯೂ ಮತ್ತೊಂದನ್ನು ಅವಲಂಬಿಸದೆ ಇರಲು

ಬರುತ್ತದೆಯಷ್ಟೇ ? ಎಂಬುದಾಗಿದೆ. ರಾಷ್ಟ್ರಕವಿ ಸನ್ಮಾನ್ಯ ಕುವೆಂಪುರವರು 26-8-81 ರ ಪ್ರಜಾವಾಣಿಯ ಸಂದರ್ಶನದಲ್ಲಿ "ಮನುಜ ಮತ, ವಿಶ್ವಪಥ" ಸಾಕು ಎಂದಿದ್ದಾರೆ. ಇದು ನಿಜಕ್ಕೂ ಶ್ರೇಷ್ಠ ಆದರ್ಶವೇ! ಅಧ್ಯಾತ್ಮಿಕ ದೃಷ್ಟಿಕೋನ ಬೆಳೆಸಿಕೊಳ್ಳಬೇಕು. ಅದು ಎಲ್ಲರನ್ನೂ ಬೆಸೆಯಬೇಕು ಎಂದಿದ್ದಾರೆ. ಇದೂ ನಿಜವೇ! ಆದರೆ ಆ ಮಟ್ಟಕ್ಕೇರಲು ಯಾರಿಗೆ ಸಾಧ್ಯ? ಸಾಕಷ್ಟು ಧರ್ಮದರ್ಶನ ಶಾಸ್ತ್ರ ಓದಿ ಪರಿಷ್ಕರಣ ಗೊಂಡವರಿಗೆ ಸಾಧ್ಯ. ಬಸವಣ್ಣನವರು ಹೇಳಿದ್ದು ಅದೆಯೇ? 'ಬನ್ನಿ, ದೇವಸಾಕ್ಷಿಯಾಗಿ ಒಂದೆಡೆ ಸೇರುವಾ. ದೇವರ ಸಂಕೇತವೊಂದನ್ನು ಧರಿಸಿಕೊಂಡು, ಅನುಭವಮಂಟಪದಲ್ಲಿ ಎಲ್ಲರೂ ಅಣ್ಣ ತಮ್ಮರಾಗಿ ಬಾಳೋಣ' ಎಂದು ಕರೆ ನೀಡಿದರು, ಸಾಧಿಸಿ ತೋರಿಸಿದರು. ಕೆಲವೇ ದಶಕಗಳಲ್ಲಿ ಆ ವಿಶಾಲ ಮನೋಭಾವ ನಶಿಸಿ, ಇನ್ನೊಂದು ಗುಂಪು ನಿರ್ಮಾಣವಾಯಿತು. ಅಧ್ಯಾತ್ಮಿಕ ದೃಷ್ಟಿಕೋನ ಬೆಳೆಸಿಕೊಂಡ ಬ್ರಾಹ್ಮಣರಾಗಲೀ, ಲಿಂಗಾಯತರಾಗಲಿ, ಹರಿಜನರಾಗಲೀ ಅವರು ಪರಸ್ಪರ ಭೇದವನ್ನೂ ಮಾಡುವುದಿಲ್ಲ, ಮತಾಂತರಕ್ಕೂ ಎಳೆಸುವುದಿಲ್ಲ.

ಸಮಸ್ಯೆ ಇರುವುದು ಯಾವುದೇ ಸುಧಾರಣೆಗೆ ಈಡಾಗದಿರುವ ಶ್ರೀಸಾಮಾನ್ಯ ಹರಿಜನರನ್ನು ಕುರಿತು. ಯಾವುದೇ ಧಾರ್ಮಿಕ ವಿಧಿ ವಿಧಾನಗಳಿಲ್ಲದೆ ಬಾಳಲು ಅವರು ಅಂಜುತ್ತಾರೆ. ವಿದ್ಯಾವಂತರು ನಾಸ್ತಿಕತೆಯನ್ನು ಅಥವಾ ಧರ್ಮದ ಬಗ್ಗೆ ಔದಾಸೀನ್ಯವನ್ನು ಬೆಳೆಸಿಕೊಂಡಷ್ಟು ಸುಲಭವಾಗಿ ಅವಿದ್ಯಾವಂತರು ಬೆಳೆಸಿಕೊಳ್ಳಲಾರರು. ಉತ್ತಮ ತರಗತಿಯ ಮದ್ಯ ದೊರೆಯದಾದಾಗ ಕಳ್ಳಭಟ್ಟಿಗೆ ಮೊರೆಹೋಗುವಂತೆ ಯಾವುದಾದರೂ ಮೂಢ ನಂಬಿಕೆಯ ಆಶ್ರಯ ಪಡೆಯ ಹೋಗುವರು. ಆದ್ದರಿಂದ ಯಾವುದಾದರೊಂದು ಧರ್ಮ ಸಂಹಿತೆಯನ್ನು ಕೊಡದ ಹೊರತು ಶ್ರೀಸಾಮಾನ್ಯ ಹರಿಜನರಿಗೆ ತೃಪ್ತಿಯಾಗದು. ಈ ದಿಶೆಯಲ್ಲಿ ಮೇಲ್ಕಂಡ ಸೂಚನೆ ಸ್ವಲ್ಪ ಬೆಳಕು ತೋರಬಲ್ಲುದು.

ಸರ್ಕಾರವು ಊರ ಹೊರಗೆ ಬೇರೆ ಕಾಲನಿಗಳನ್ನು ನಿರ್ಮಾಣ ಮಾಡಿ ಶತಮಾನಗಳಿಂದ ಬಂದ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕಿಂತ ಸಮಾಜದಲ್ಲಿ ಬೆರೆಯಲು ಅವಕಾಶ ಕಲ್ಪಿಸಬೇಕು. ಸಮಾಜದಲ್ಲಿ ಇಂದು ಪ್ರಚಲಿತವಿರುವುದು ವರ್ಣವಾದಕ್ಕಿಂತ ವರ್ಗವಾದವು. ಶುಚಿಯಾದ ಬಟ್ಟೆಯುಟ್ಟು ಮಾತಿನಲ್ಲಿ ಸುಸಂಸ್ಕೃತಿಯನ್ನು ಅಳವಡಿಸಿಕೊಂಡು, ಆರ್ಥಿಕವಾಗಿ ಮೇಲೇರಿದ ಅನ್ಯಜಾತಿಯವನಿಗೆ ಸಿಕ್ಕುವ ಗೌರವ, ಮರ್ಯಾದೆ ಕೊಳಕು ಬಟ್ಟೆಯುಟ್ಟು, ಬಡಸ್ಥಿತಿಯಲ್ಲಿರುವ ಸ್ವಜಾತಿಯವನಿಗೆ ಸಿಕ್ಕದು. ಹರಿಜನರ ಉದ್ಧಾರವಾಗಬೇಕಾದರೆ ಅನಕ್ಷರತೆ ತೊಲಗಬೇಕು, ಸಾಂಸ್ಕೃತಿಕ ಪರಿವರ್ತನೆ, ಆರ್ಥಿಕ-ಶೈಕ್ಷಣಿಕ ಸುಧಾರಣೆಯಾಗಬೇಕು. ಹರಿಜನ ಮುಖಂಡರು ಮತಾಂತರದ ಘೋಷಣೆ ಮಾಡುವ ಪತ್ರಿಕಾ ಹೇಳಿಕೆ ಕೊಡುವುದಕ್ಕಿಂತ, ಕೇವಲ

ಜಾಥಾಗಳನ್ನು ಪ್ರದರ್ಶನ, ಪ್ರತಿಭಟನೆ ಏರ್ಪಡಿಸುವುದಕ್ಕಿಂತ ತಮ್ಮ ಜನರ ಅಜ್ಞಾನ ಸರಿದು ಆಚಾರವಿಚಾರಗಳನ್ನು ಪರಿವರ್ತಿಸಿಕೊಳ್ಳುವ ತರಬೇತಿ ನೀಡಲಿ, ಅದು ವಿಧಾಯಕ ಕೆಲಸವಾಗುವುದು. ಒಂದು ಕಾಲದಲ್ಲಿ ಧರ್ಮವು ಮಾಲಿಕನಾಗಿತ್ತು, ಅರ್ಥ ವ್ಯವಸ್ಥೆ ಸೇವಕನಾಗಿತ್ತು. ಇಂದು ಅರ್ಥವ್ಯವಸ್ಥೆ ಮುಂದಾಳುವಾಗಿದೆ; ಧಾರ್ಮಿಕ ಮೌಲ್ಯವು ಹಿಂದಾಳುವಾಗಿದೆ. ಆದ್ದರಿಂದ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹರಿಜನರನ್ನು ಸುಧಾರಿಸಲು ಬೇಕಾದ ಯೋಜನೆಗಳನ್ನು ನಾವಿಂದು ಹಾಕಿಕೊಳ್ಳಬೇಕಾಗಿದೆ.

ಸವರ್ಣೀಯರ ಕರ್ತವ್ಯವೇನು ?

ಇಂದಿನ ಪರಿಸ್ಥಿತಿಯಲ್ಲಿ ಸವರ್ಣೀಯರ ಕರ್ತವ್ಯವೇನುಂಟು? ಹರಿಜನರು ಅಸ್ಪೃಶ್ಯರು, ಅವರನ್ನು ಮುಟ್ಟಿದರೆ ಮೈಲಿಗೆ ಎಂಬೊಂದು ಮೂಢನಂಬಿಕೆ ರಕ್ತಗತವಾಗಿ ಹಿಂದುಗಳಲ್ಲಿ ಅದರಲ್ಲಿಯೂ ಅವಿದ್ಯಾವಂತರು, ಹಳ್ಳಿಗಾಡಿನವರಲ್ಲಿದೆ. ಅಂಥ ನಂಬಿಕೆಯುಳ್ಳವರನ್ನು ನಾವು ದ್ವೇಷಿಸುವುದಕ್ಕಿಂತ ಕಂಡು ಇಂದು ಮರುಕ ಪಡಬೇಕಾಗಿದೆ. ಇದೇ ಸಂಚಿಕೆಯಲ್ಲಿ ನಾನು ಪ್ರಸ್ತಾಪಿಸಿರುವ ಓರ್ವ ಸಾಧುಗಳು ತಮಗೆ ಸ್ತ್ರೀಯರು ನಮಸ್ಕರಿಸಲಿಕ್ಕೆ ಬಂದಾಗ "ದೂರದಿಂದಲೇ ಮಾಡಿರಿ; ಮುಟ್ಟಿದರೆ ಮೈಲಿಗೆಯಾಗುತ್ತದೆ; ಇಲ್ಲವಾದರೆ ನಂತರ ಸ್ನಾನಮಾಡಬೇಕಾಗುತ್ತದೆ," ಎಂದರು. ಮೊದಲು ಮಾತನಾಡಿಸಿದಾಗ ನಾನೆಂದರೆ ಆತ್ಮ, ಇದಕ್ಕೆ ನಾಮ ರೂಪಗಳಿಲ್ಲ, ಜಾತಿ ಮತಗಳಿಲ್ಲ ಎಂದವರು ಹೆಣ್ಣು ಮಕ್ಕಳಲ್ಲಿಯೂ ಆತ್ಮವನ್ನು ಕಾಣಲಾಗಲಿಲ್ಲ. ಅವರೊಡನೆ ವಾದದ ಕಣಕ್ಕೆ ಇಳಿಯಬೇಕೆಂದುಕೊಂಡವಳು ಮೌನ ತಾಳಿದೆ. ಆಗಲೇ 68 ವರ್ಷದ ಮುದುಕ. ಎಷ್ಟೋ ವರ್ಷಗಳಿಂದ ಈ ಭ್ರಾಂತಿ ತುಂಬಿಕೊಂಡಿದ್ದಾರೆ. ಈಗ ವಾದಮಾಡಿದರೂ ತನ್ನನ್ನು ತಾನು ತಿದ್ದಿಕೊಳ್ಳಲು ಸಾಧ್ಯವಾಗದಷ್ಟು ಮಲೆತ ವಿಚಾರಗಳಿಂದ ತುಂಬಿಕೊಂಡಿದೆ ಅವರ ಬುದ್ಧಿ ಎಂದು ಮರುಕ ತಾಳಿ ಸುಮ್ಮನಾದೆ.

ನಮ್ಮ ಪೂರ್ವಾಶ್ರಮದ, ಜನ್ಮವಿತ್ತ ತಂದೆಯವರು ಬಹಳ ಪ್ರಗತಿಪರ ವಿಚಾರದವರು. ಸರ್ಕಾರಿ ಜವಾನ ಆಕಸ್ಮಿಕವಾಗಿ ಹರಿಜನನೇ ಸಿಕ್ಕಿದ್ದ. ಮನೆಯೊಳಗೇ ಕರೆದು ಊಟ ತಿಂಡಿ ಮಾಡಿಸುತ್ತಿದ್ದರು. ಆದರೆ ವಯಸ್ಸಾದ ಅಜ್ಜಿಯ ಕೂಗಾಟವೋ ಕೂಗಾಟ. ವಿಜ್ಞಾನ, ಮಾನವೀಯತೆ, ಧಾರ್ಮಿಕ ಭ್ರಾತೃತ್ವ ಎಲ್ಲ ಕುರಿತು ಹೇಳಿದರೂ ಆ ಮೂಢ ಅಜ್ಜಿ, 'ಅಷ್ಟಲ್ಲದೆ ಹಿರಿಯರು ಹೇಳುವರೇ? ಎಂದು ಒಂದೇ ಉತ್ತರ ನೀಡುತ್ತಿತ್ತು. ಕಾಕತಾಳೀಯ ನ್ಯಾಯದಂತೆ ಐದಾರು ತಿಂಗಳಲ್ಲೇ ಹೃದಯಾಘಾತವಾಗಿ ತಮ್ಮ 39 ನೆಯ ವಯಸ್ಸಿನಲ್ಲಿ ತಂದೆ ಲಿಂಗೈಕ್ಯರಾದರು. ಆ ಅಜ್ಜಿ ಅಳುತ್ತ ತಟ್ಟನೆ ನುಡಿಯಿತು, 'ಬೇಡಪ್ಪಾ ಎಂದರೆ ಕೇಳಲಿಲ್ಲ. ಸಹ ಪಂಕ್ತಿಯಲ್ಲಿ ಊಟಕ್ಕಿಡಿಸು

ತ್ತಿದ್ದ. ಅದಕ್ಕೇ ಸಾವು ಬಂದಿತು.' ಇದು ಎಂಥಾ ಅಜ್ಞಾನ! ಅಮೆರಿಕಾದಲ್ಲಿ ನೀಗ್ರೋಗಳ ಬಗ್ಗೆಯೂ ಅಷ್ಟೇ. ಅವರು ದೇವರ ಕೃಪೆಗೆ ಅರ್ಹರಲ್ಲ ಎಂಬ ನಂಬಿಗೆ ಜನಸಾಮಾನ್ಯ ಬಿಳಿಯರಲ್ಲಿ ರಕ್ತಗತವಾಗಿದೆ. ಮತ್ತೆ ನೋಡಿದರೆ ಇಬ್ಬರೂ ಕ್ರೈಸ್ತರೇ? [ಐರ್ಲೆಂಡಿನಲ್ಲಿ ಅಮಾನುಷ ಕೊಲೆ ಮಾಡುತ್ತಿರುವ, ಆಫ್ರಿಕಾದಲ್ಲಿ ನೀಗ್ರೋಗಳನ್ನು ಕ್ರೂರವಾಗಿ ನಡೆಸಿಕೊಳ್ಳುವ, ಪೋಲೆಂಡಿನಲ್ಲಿ ಸ್ವಜಾತಿಯವರನ್ನೇ ಹಿಂಸಿಸುವ ಕ್ರೈಸ್ತ ಪಾದ್ರಿಗಳು ಭಾರತದಲ್ಲಿ ಹಿಂದುಗಳಲ್ಲಿ ಒಡಕು ಹುಟ್ಟಿಸುವ ಕೆಲಸ ಮಾಡುತ್ತಾರೆ.]

ಕೆಲವು ನಂಬಿಕೆಗಳು ಹುಲುಸಾಗಿ ಅಜ್ಞಾನಿಗಳಲ್ಲಿ ಬೆಳೆದಿರುತ್ತವೆ. ಅವುಗಳನ್ನು ಮೆದುಳಿನಿಂದ ತೊಳೆಯುವ ಕೆಲಸ ತೀವ್ರವಾಗಿ ಆಗಬೇಕಾಗಿದೆ.

1) ಹರಿಜನರು ನಮ್ಮವರೇ; ಎಲ್ಲರಂತೆ ಸಮಾನರು ಎಂಬುದರ ಪ್ರಚಾರ ತೀವ್ರವಾಗಿ ಆಗಬೇಕು; ಅದೂ ಮುಖ್ಯವಾಗಿ ಕಾವಿ ತೊಟ್ಟವರು, ಧಾರ್ಮಿಕ ವೇಷಗಳನ್ನು ಹೊತ್ತವರಿಂದ ಆಗಬೇಕು. ಅವರ ನಾಲಿಗೆಯಿಂದ ಬಂದಾಗ ಅಜ್ಞಾನ ಬೇಗನೇ ತೊಲಗುವುದು.

2) ಪ್ರತಿಯೊಬ್ಬ ಹರಿಜನನಿಗೆ ಮಾತ್ರವಲ್ಲ ಪ್ರತಿಯೊಬ್ಬ ಹಿಂದುವಿಗೆ ಒಂದು ಮಂತ್ರೋಪದೇಶದ ಸಂಸ್ಕಾರದ ವ್ಯವಸ್ಥೆಯಾಗಬೇಕು. ಈಗ ಸದ್ಯಕ್ಕೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ, ಸ್ವತಂತ್ರ ಧರ್ಮಸಂಸ್ಕಾರ ಹೊಂದಿರುವ ಲಿಂಗಾಯತರು, ಸಿಖ್ಖರಿಗೆ ಬಯಸದೆಯೇ ಧರ್ಮಸಂಸ್ಕಾರ ಕೊಡಲಾಗುತ್ತಿದೆ. ಅದೇ ರೀತಿ ಕಡ್ಡಾಯವಾಗಿ ಎಲ್ಲ ಹಿಂದುಗಳಿಗೆ ಕೊಡಲ್ಪಡಬೇಕು. ಅಂದರೆ ಮಾತ್ರ ಅವರಿಗೆ ತಮ್ಮ ಧರ್ಮ-ಪರಂಪರೆಗಳ ಬಗ್ಗೆ ಅಭಿಮಾನ ಮೂಡಲು ಸಾಧ್ಯ.

3) ಸಮಾಜ ಸುಧಾರಣೆ, ರಾಷ್ಟ್ರೀಯ ಪ್ರಗತಿ ಬಯಸುವವರೆಲ್ಲರು ಮುಖ್ಯವಾಗಿ ರಾಜಕೀಯ ಮತ್ತು ಧಾರ್ಮಿಕ ಕಾರ್ಯಕರ್ತರು ವೈಚಾರಿಕ, ಸಾಂಸ್ಕೃತಿಕ, ಆರ್ಥಿಕ ಸುಧಾರಣೆಗೆ ಯತ್ನಿಸಲು ಹರಿಜನರ ಕೇರಿಗಳಿಗೆ ಹೋಗಿ ಸತ್ಸಂಗಗಳನ್ನು ನಡೆಸಬೇಕು. ಇಂದಿನ ಬಹುಪಾಲು ರಾಜಕಾರಣಿಗಳು ದ್ವೇಷದ ಕಿಡಿ ಹಚ್ಚುವುದರಲ್ಲಿ, ಪತ್ರಿಕಾ ಹೇಳಿಕೆ ನೀಡುವುದರಲ್ಲಿ ಮತ್ತು ಮುಸ್ಲಿಂ ಸಂಘ ಸಂಸ್ಥೆಗಳಿಂದ ಹಣ ತೆಗೆದುಕೊಂಡು ಮುಗ್ಧ ಜನರನ್ನು ಮತಾಂತರ ಮಾಡಿಸುವಲ್ಲಿ ನಿರತರಾಗಿದ್ದಾರೆ. ಇದರ ಬದಲಿಗೆ ನಿಜವಾದ ಕಳಕಳಿಯಿಂದ ಅವರ ಅಭಿವೃದ್ಧಿಗಾಗಿ ಯತ್ನಿಸಬೇಕು. ಯಾವುದೇ ಒಂದು ಧರ್ಮದ ಸೊತ್ತಲ್ಲದ-ಅಂದರೆ ವೈದಿಕ ಧರ್ಮ, ಲಿಂಗಾಯತ ಧರ್ಮ, ಜೈನ, ಸಿಖ್ ಧರ್ಮಗಳ ಸೊತ್ತಲ್ಲದ ಒಂದು ಮಹಾನ್ ಪರಂಪರೆ (Cultural Heritage) ಈ ದೇಶಕ್ಕಿದೆ, ಅದರ ಅವಿಭಾಜ್ಯ ಅಂಗ ಹರಿಜನರು. ಹಿಂದೂ ಸಮಾಜವನ್ನು ಬಿಟ್ಟು ಹೋಗುವುದು

ಒಂದು ದೃಷ್ಟಿಯಿಂದ ಅವರ ಗೆಲುವಲ್ಲ, ಸೋಲು. ಸ್ವಾರ್ಥನೋ ದುಷ್ಟನೋ ಆದ ಅಣ್ಣ ಆಸ್ತಿಕೊಡಲಿಲ್ಲವೆಂದು ಹೊರಗೆ ಹೋಗುವದೊಂದು ವಿಧಾನ; ನ್ಯಾಯವನ್ನು ಬೇಡಿ ಪಡೆಯುವುದು ಇನ್ನೊಂದು ವಿಧಾನ. ಹಿಂದೂ ಕುಟುಂಬದ ಮಕ್ಕಳೇ ಆದ ಹರಿಜನರು ಇಲ್ಲಿದ್ದು ತಮ್ಮ ಹಕ್ಕಿಗಾಗಿ ಹೋರಾಡಿ, ಅದನ್ನು ಪಡೆಯುವುದು ನಿಜಕ್ಕೂ ಶ್ಲಾಘನೀಯವೇ ಹೊರತು, ಬಿಟ್ಟು ಹೋಗುವ ದೌರ್ಬಲ್ಯ, ಹತಾಶೆ, ರೋಷ ಶ್ಲಾಘನೀಯವಲ್ಲ.

ಸರ್ಕಾರದ ಕರ್ತವ್ಯ

ಈ ದಿಶೆಯಲ್ಲಿ ಸರ್ಕಾರದ ಕೆಲಸವೂ ಬಹಳಷ್ಟಿದೆ

1) ಹರಿಜನರ ಸಮಾನತೆಯನ್ನು ಪ್ರಚಾರ ಮಾಡಲು ಸಾಮಾಜಿಕ ಕಾರ್ಯಕರ್ತರನ್ನು ವ್ಯವಸ್ಥೆಗೊಳಿಸಬೇಕು.

2) ಹಳ್ಳಿಗಾಡಿನ ಹರಿಜನರಲ್ಲಿರುವ ಕೀಳರಿಮೆ, ಉಳಿದ ಹಿಂದುಗಳಲ್ಲಿರುವ ಮೇಲರಿಮೆ ಎರಡೂ ತೊಲಗಿಸುವಂತಹ ಪ್ರಚಾರಕಾರ್ಯ ನಡೆಯಬೇಕು.

3) ಚಾಕಲೇಟ್, ಪೆಪ್ಪರ್‌ಮಿಂಟ್ ಆಸೆಗೆ ಅಪಹರಣಕಾರರ ಕೈಯಲ್ಲಿ ಸಿಕ್ಕಿ ಬೀಳುವ ಮುಗ್ಧ ಮಕ್ಕಳಂತೆ, ಅವಿದ್ಯಾವಂತ ಹರಿಜನರು ಮತಾಂತರ ಮಾಡುವ ಧೂರ್ತರು, ಮಾಡಿಸುವ ಏಜೆಂಟರ ಕೈಯಲ್ಲಿ ಸಿಕ್ಕಿ ಬೀಳದಂತೆ ಮಾಡಬೇಕು.

4) ಈಗಾಗಲೇ ಸುದ್ದಿ ಎದ್ದಿರುವಂತೆ ಕಳ್ಳಸಾಗಾಣಿಕೆ, ಕೊಲೆಯ ಆರೋಪಗಳು, ಬಹುಪತ್ನಿತ್ವದ ಆಸೆ ಇಂತೆಲ್ಲ ಕಾರಣಗಳಿಗೆ, ಅಲ್ಪಸಂಖ್ಯಾತರೆಂಬ ಕಾರಣದಿಂದ ಬಚಾವಾಗಲು ಮತಾಂತರ ಹೊಂದಿರುವ ಕೆಲವರನ್ನು ಸಂವಿಧಾನಕ್ಕೆ ತಕ್ಕಂತೆ ಶಿಕ್ಷಿಸಬೇಕು.

5) ದೇಶದ ಎಲ್ಲ ಪ್ರಜೆಗಳಿಗೆ ಒಂದೇ ನಿಯಮಾವಳಿ ರೂಪಿಸಬೇಕು. ಜಗತ್ತಿನ ಎಲ್ಲ ರಾಷ್ಟ್ರಗಳು ಒಂದೇ ರೀತಿಯ ಕಾಯಿದೆ ಮಾಡಿರುವಾಗ, ಸ್ವತಃ ಮುಸ್ಲಿಂ ರಾಷ್ಟ್ರಗಳೇ ಅಂಥ ಬದಲಾವಣೆ ಮಾಡಿಕೊಂಡಿರುವಾಗ ಭಾರತದ ಮುಸ್ಲಿಮರೂ ಒಂದು ನಿಯಮಕ್ಕೆ ಬದ್ಧರಾಗುವಂತೆ ಮಾಡಬೇಕು. ಬಹುಪತ್ನಿತ್ವ, ಕುಟುಂಬ ಅನಿಯಂತ್ರಣಕ್ಕೆ ಅವಕಾಶ ಕೊಡಕೂಡದು.

6) ಈ ದೇಶದೊಳಕ್ಕೆ ಹಲವಾರು ಧರ್ಮೀಯರನ್ನು ಸ್ವಾಗತಿಸಿಯಾಗಿದೆ. ನಮ್ಮ ಔದಾರ್ಯವನ್ನು (ದೌರ್ಬಲ್ಯವೋ!) ಅವರುಗಳು ದುರುಪಯೋಗ ಮಾಡಿಕೊಂಡೂ ಆಗಿದೆ. ಕೂಡಿ ಬಾಳುವ ಸೂತ್ರ ಕಲಿಯಬೇಕಾದರೆ ಪ್ರತ್ಯೇಕ ಕಾಲೊನಿ, ಪ್ರತ್ಯೇಕ ಶಾಲೆಗಳನ್ನು ರೂಪಿಸದೆ ಸಾರ್ವಜನಿಕವಾಗಿ ಶೈಕ್ಷಣಿಕವಾಗಿ ಹಿಂದುಗಳೆಲ್ಲರೂ

ಹರಿಜನರು, ಹರಿಜನೇತರರು, ಮುಸ್ಲಿಮರು ಬೆರೆಯುವಂತಾಗಬೇಕು. ಸಾರ್ವಜನಿಕ ಶಾಲೆಗಳಲ್ಲಿ ಓದಿ ಎಲ್ಲರೊಡನೆ ಆಡಿ ಬೆಳೆದ ಮುಸ್ಲಿಮರಿಗಿಂತ ಹಿಂದುಗಳೊಡನಾಡದೆ ಬೆಳೆದವರು ತೀವ್ರ ಪ್ರತ್ಯೇಕತಾ ಮನೋಭಾವದವರು, ಆಗಿರುವುದನ್ನು ಕಾಣುತ್ತೇವೆ.

7) ಸರ್ಕಾರವು ಮತಾಂತರ ನಿಷೇಧದ ಕಾನೂನನ್ನು ಮಾಡಬೇಕು. ಕೈಯಲ್ಲಿ ಕತ್ತಿ, ಈಟಿ ತೆಗೆದುಕೊಂಡು ಶತ್ರುವು ಬಂದಾಗ ಶಾಂತಿ ಮಂತ್ರವನ್ನು ಪಠಿಸುವುದು ತೀರಾ ಅವಿವೇಕ. ನಮ್ಮ ಧರ್ಮಸಹಿಷ್ಣುತೆಯನ್ನು ಇನ್ನಿತರರು ದುರುಪಯೋಗ ಮಾಡಿಕೊಳ್ಳುವಾಗ ಸುಮ್ಮನಿರುವದು ಅವಿವೇಕ ರಮಣೀಯ. ಹುಲಿಗಳು, ಜಿಂಕೆಗಳಂತಹ ಪ್ರಾಣಿಗಳನ್ನು ರಕ್ಷಿಸಲು ಅಭಯಾರಣ್ಯಗಳನ್ನು ಏರ್ಪಡಿಸಿದಂತೆ, ಹಿಂದೂಸ್ಥಾನ ಬಿಟ್ಟರೆ ಇನ್ನಾವ ನೆಲವೂ ಇವರಿಗಾಗಿ ಇಲ್ಲ. ಬಾಕಿ ಎಲ್ಲ ಧರ್ಮಗಳವರಿಗೂ ಆಶ್ರಯ ನೀಡಬಲ್ಲ ದೇಶಗಳಿವೆ. ಹಿಂದೂಗಳಿಗೆ ಭಾರತ ಬಿಟ್ಟರೆ ಇನ್ನಾವುದಿದೆ? (ಒಂದು ಪುಣ್ಯವೆಂದರೆ ದೇಶದ ಮೂರೂ ಕಡೆ ಸಮುದ್ರವಿರುವುದರಿಂದ ಮುಸಲ್ಮಾನರೂ ಕ್ರೈಸ್ತರೂ ಬಹುಸಂಖ್ಯಾತರಾಗಿ ಅಳಿದುಳಿದ ಹಿಂದುಗಳನ್ನು ಮತಾಂತರಿಸಲು ಯತ್ನಿಸಿದರೆ ಪ್ರಾಣ ಹೋದರೂ ಧರ್ಮ ಬಿಡೆವು ಎಂಬುವವರಿಗೆ ಸಮುದ್ರಗಳು ಆಶ್ರಯ ನೀಡಬಲ್ಲವು) ಆಕ್ರಮಣಕಾರೀ ಧರ್ಮಗಳಿಂದ ಸಂರಕ್ಷಿಸಿಕೊಳ್ಳಲು ಹಿಂದೂ ಜನಾಂಗಕ್ಕೆ ಒಂದು ಅಭಯ ಶಾಸನಬೇಕು. ಇಂಗ್ಲೆಂಡು ಎಷ್ಟೇ ಉದಾರ ನೀತಿಯ ನಾಡಾದರೂ ಒಂದು ಪರಂಪರೆಗೆ ಸಂಬಂಧಿಸಿದವರೇ ಆಳುತ್ತಾ ಬಂದಿದ್ದಾರೆ. ಪಾಕಿಸ್ತಾನವೇ ಮುಂತಾದ ಇಸ್ಲಾಂ ದೇಶಗಳು ಕನಸಿನಲ್ಲಿಯೂ ಒಬ್ಬ ಹಿಂದೂ ಪ್ರಧಾನಿಯನ್ನೋ, ರಾಷ್ಟ್ರಪತಿಯನ್ನೋ ಹೊಂದಲಾರವು. ಯಾವುದಾದರೂ ಸಂಕಷ್ಟವನ್ನೆದುರಿಸಲು ಅಥವಾ ಭವಿಷ್ಯತ್ಕಾಲದಲ್ಲಿ ಕೋಮುಭಾವನೆ ಅಧಿಕಗೊಂಡು ವಿದೇಶಗಳಲ್ಲಿರುವ ಹಿಂದುಗಳಿಗೆ ನೆಲೆಯಿಲ್ಲವಾದರೆ ಬಂದು ನೆಲೆಸಲಿಕ್ಕಾದರೂ ಒಂದು ಸ್ಥಾನಬೇಕು. ಅಲ್ಪಸಂಖ್ಯಾತರಿಗೆ ಬೇಕಾದಷ್ಟು ರಕ್ಷಣೆ ಕೊಡಲಿ; ಆದರೆ ಸದ್ಯಕ್ಕೆ ಮಾತ್ರ ಬಹು ಸಂಖ್ಯಾತರಿದ್ದು, ದಿನ ದಿನಕ್ಕೂ ಹೆಚ್ಚಿನ ಆಘಾತವನ್ನೆದುರಿಸುವ ಹಿಂದುಗಳ ರಕ್ಷಣೆಯತ್ತ ಸರ್ಕಾರ-ಗಮನ ಹರಿಸುವಂತಾಗಲೀ ಎಂದು ಹಾರೈಸುವಾ.

ವಿನೋದ ಎಂದರೇನು ?

ಅ. ನ. ಕೃಷ್ಣರಾಯ

ವಿನೋದದ ಜನನ ಮತ್ತು ಸ್ವರೂಪ

ಜಗದ ಜನತೆಯಲ್ಲವೂ ಒಬ್ಬನೇ ಸೃಷ್ಟಿಕರ್ತನ ಸೃಷ್ಟಿ ವೈಚಿತ್ರ್ಯಕ್ಕೆ ಒಳಪಟ್ಟಿದ್ದರೂ ರೂಪ, ತಿಳಿವು, ರಸಭಾವಗಳಲ್ಲಿ ವ್ಯತ್ಯಾಸಗಳಿರುತ್ತವೆ. ಆದರೂ ಏಕಮುಖವಾದ ಮತ್ತು ಏಕತ್ವವಾದ ಕೆಲವು ಗುಣಗಳಿದ್ದೇ ಇರುತ್ತವೆ. ಇವುಗಳನ್ನು ವಿಚಾರ ಮಾಡಿ ಸರಾಸರಿಯ ಮನುಷ್ಯನಲ್ಲಿ ಇವೇ ಗುಣಗಳಿರುತ್ತವೆಂದು ಮನಃಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ. ಈ ಸರಾಸರಿ ಗುಣಗಳಿಗೆ ಕಮ್ಮಿ ತೂಗುವವನು ಜನತೆಯ ಅಪಹಾಸ್ಯಕ್ಕೀಡಾಗುತ್ತಾನೆ. ವಿನೋದದ ಜನನವೂ ಅಂತಹ ಮಾನವಕೋಟಿಯಿಂದಾದುದೆಂದು ನಾವು ಸ್ಥೂಲವಾಗಿ ನಿರ್ಧರಿಸಬಹುದು. ಪ್ರಕೃತಿಯ ಪೂರ್ಣಪ್ರಭೆ ಜ್ಞಾನದ ಅಥವಾ ವಿವೇಚನೆಯ ಪೂರ್ಣತೆಗೆ ಸರಿಹೊಂದುತ್ತದೆ. ಆದರಾಪೂರ್ಣ ಪ್ರಕೃತಿಯನ್ನು ವಿಭಾಗಿಸಿ ಒಂದು ವಿಭಾಗವನ್ನೇ ಪೂರ್ಣದೃಷ್ಟಿಯಕೋಣದಿಂದ ನೋಡಲಾರಂಭಿಸಿದರೆ ಆಗ ಅಪಹಾಸ್ಯದ ಭಾವನೆ ಉನ್ನತವಾಗುತ್ತದೆ. ಈ ಅಪೂರ್ಣತ್ವದಿಂದಲೇ ನಗೆ ತನ್ನ ಜನನವನ್ನು ಪಡೆಯುವುದು. ಸ್ವಾಭಾವಿಕ ಅಪೂರ್ಣತೆಯ ವಿಡಂಬನವೇ ನಗೆಗೊಂದಾಕೃತಿಯನ್ನೂ, ಸ್ವರೂಪವನ್ನು ಕೊಡುವುದು. ಕಪಿ ಹಲ್ಲುಗಿಂಜಿಕೊಂಡು ವಕ್ರ ಚೇಷ್ಟೆಗಳನ್ನು ಮಾಡುತ್ತಿರುವುದನ್ನು ಕಂಡರೆ ಸ್ವಾಭಾವಿಕವಾಗಿ ನಮ್ಮಲ್ಲಿ ಮುಗುಳ್ನಗೆಯುಂಟಾದರೂ, ಕಪಿಯನ್ನು ಅಣಕಿಸುತ್ತಿರುವವನನ್ನು ಕಂಡರೆ ಉಂಟಾಗುವಷ್ಟು ನಗೆಯುಂಟಾಗುವದಿಲ್ಲ. ಸ್ವಾಭಾವಿಕವಾದ ಅಪೂರ್ಣತೆ ಜಗತ್ತಿಗೆ ಪ್ರತಿಕ್ಷಣವೂ ಕಾಣಬರುತ್ತಿರುವುದರಿಂದ ಈ ಬಳಕೆ ಅನಾದರವನ್ನು ಹುಟ್ಟಿಸಿ ನಗೆಚಟಾಕಿಯನ್ನು ಕೆಲಕಾಲದಲ್ಲಿಯೇ ಸಂಪೂರ್ಣವಾಗಿ ಧ್ವಂಸಮಾಡಿಬಿಡುತ್ತದೆ. ಆದರೆ ಸ್ವಭಾವವಾಗಿ ಅಪೂರ್ಣತೆಯನ್ನು (ನ್ಯೂನತೆ) ಪಡೆಯದಿರುವ ವಸ್ತುವಿನಲ್ಲಿ ಆ ಗುಣವನ್ನು ಕಂಡರೆ ನಗೆಯುತ್ಪನ್ನವಾಗುತ್ತದೆ.

ವಿನೋದ ಎಂದರೇನು ?

ಮಾನವಜೀವನದ ರಸವಂತಿಗಳೊಡನೆ ಬೆರತಿರುವ ಅಪಹಾಸ್ಯಾಸ್ಪದವಾದ ವಿಷಯಗಳನ್ನು ಮನಸ್ಸಿಗೆ ಹಿಡಿಯುವ ರೀತಿಯಲ್ಲಿ ಪ್ರದರ್ಶಿಸುವುದೇ ವಿನೋದ. ವಿನೋದ ಆಕಸ್ಮಿಕ ಘಟನೆಗಳಲ್ಲಿಯೂ ವ್ಯಕ್ತಿ ಮತ್ತು ವಸ್ತುಗಳಿಗುಂಟಾಗುವ ಅವಸ್ಥೆಗಳಲ್ಲಿಯೂ ಉತ್ಪನ್ನವಾಗುತ್ತದೆ.

ಉದಾಹರಣೆಗಾಗಿ ಶ್ರೀಹರ್ಷಕೃತ ರತ್ನಾವಳಿ ನಾಟಕದಲ್ಲಿ ಬರುವ 'ಪ್ರಾಣಸಖನಾದ ವಿದೂಷಕನ ಮಾತಿನಲ್ಲಿ ಭರವಸೆಯಿಟ್ಟ ವತ್ಸರಾಜ ಪ್ರಣಯ ಪರಿತಪ್ತನಾಗಿ ರತ್ನಾವಳಿಯನ್ನು ನಾಟ್ಯಗೃಹದಲ್ಲಿ ನಿರೀಕ್ಷಿಸುತ್ತಿದ್ದಾಗ ಪಟ್ಟದರಸಿಯಾದ ವಾಸವದತ್ತಾದೇವಿ ಈ ಸಂಚನ್ನು ತಿಳಿದು ರತ್ನಾವಳಿಯ ಉಡುಪಿನಲ್ಲಿ ಬಂದು ರಾಯನನ್ನವಮಾನಕ್ಕೀಡುಮಾಡಿದ' ದೃಶ್ಯವನ್ನು ಪರೀಕ್ಷಿಸೋಣ. ಈ ಸನ್ನಿವೇಶದಲ್ಲಿ ವಾಸವದತ್ತಾದೇವಿಯ ಬದಲು ನಿರೀಕ್ಷಿಸಿದಂತೆ ರತ್ನಾವಳಿಯೇ ಬಂದಿದ್ದ ಪಕ್ಷದಲ್ಲಿ ವಿನೋದಕ್ಕವಕಾಶವೇ ಇರುತ್ತಿರಲಿಲ್ಲ. ನಿರೀಕ್ಷಣೆಗೆ ವ್ಯತಿರಿಕ್ತವಾಗಿ ಪ್ರಾಪ್ತವಾದ ಈ ಆಕಸ್ಮಿಕ ಘಟನೆಯಿಂದ ಉಚ್ಚ ತರಗತಿಯ ವಿನೋದ ಹೊರಬಂದಿತು. 'ವ್ಯಕ್ತಿವಸ್ತುಗಳಿಗುಂಟಾಗುವ ಅವಸ್ಥೆಗಳಲ್ಲಿ ಕರುಣವೂ, ದುಃಖವೂ ಬರುವುದಿಲ್ಲವೆಂದು.' ಕೆಲ ಮಂದಿ ಆಕ್ಷೇಪಿಸುತ್ತಾರೆ. ಈ ವಿಷಯ ಸಂಪೂರ್ಣವಾಗಿ ನಾಟಕಕರ್ತೃವಿನ ವಶವಾದುದಾಗಿದೆ. ನಗೆಯುತ್ಪನ್ನವಾಗುವಂತೆಯೂ ಅವನು ಮಾಡಬಲ್ಲ. ಕೇವಲ ದುಃಖದಲ್ಲಿಯೇ ಪರ್ಯವಸಾನ ಹೊಂದುವಂತೆಯೂ ಅವನು ಮಾಡಬಲ್ಲ. ಕೆಲವು ಸನ್ನಿವೇಶಗಳಲ್ಲಿ ಕವಿ ಉದ್ದೇಶಪೂರ್ವಕವಾಗಿ ಕೇವಲ ಕರುಣ ಮತ್ತು ಶೋಕರಸಗಳನ್ನು ತರಬೇಕೆಂದು ಪ್ರಯತ್ನಪಟ್ಟರೂ ಸಾಧ್ಯವಾಗುವುದಿಲ್ಲ ಉದಾಹರಣೆಗಾಗಿ 'ಅಗ್ನಿಯಲ್ಲಿ ಬಿದ್ದು ಆರ್ತಧ್ವನಿಯಲ್ಲರಚುತ್ತಿದ್ದ ಕರ್ಕೋಟಕನಿಗೆ ಸಹಾಯ ಮಾಡಹೋದ ನಳರಾಯ ಪ್ರತಿಫಲವಾಗಿ ಕುರೂಪವನ್ನು ಪಡೆದು ಬಂದ' ದೃಶ್ಯವನ್ನು ತೆಗೆದುಕೊಳ್ಳೋಣ. ಈ ನೋಟವನ್ನು ಕಂಡೊಡನೆಯೇ ನಮ್ಮಲ್ಲಿ ಅನೈಚ್ಛಿಕವಾಗಿ ನಗೆಯುಂಟಾಗುತ್ತದೆ. ರಾಯನ ನಿಜಸ್ಥಿತಿಯನ್ನೂ, ಕುರೂಪದ ಪ್ರಯೋಜನ ಇತ್ಯಾದಿಗಳನ್ನು ಕೇಳಿದ ನಂತರ ನಮ್ಮಲ್ಲಿ ಮರುಕವುಂಟಾಗಿ ಶೋಕ ಮತ್ತು ಕರುಣಾರಸಗಳುತ್ಪನ್ನವಾಗುತ್ತವೆ. ಆದರಿವು ಸ್ವಾಭಾವಿಕವಾದುವಲ್ಲ.

ಚಮತ್ಕಾರವೂ ವಿನೋದವೂ

ವಿನೋದಕ್ಕೆ ಸಂಬಂಧಪಟ್ಟ ಮತ್ತೊಂದು ವಿಷಯವುಂಟು. ಅದೇ ಚಾತುರ್ಯ ಅಥವಾ ಚಮತ್ಕಾರ (Wit). ಇವೆರಡೂ ಒಂದೇ ಅರ್ಥದ ಎರಡು ಪದಗಳೆಂದು ಜನರು ತಿಳಿದುಕೊಂಡಿದ್ದಾರೆ. ಸಮಾಜದಲ್ಲಿ ಜನರೊಪ್ಪಿಗೆಗೆ ಮತ್ತು ಉಲ್ಲಾಸಕ್ಕೆ ಚಾಕಚಕ್ಯತನದಿಂದ ಮಾತನಾಡುವವನನ್ನು 'ಒಳ್ಳೆಯ ವಿನೋದಗಾರ'ನೆಂದು ಭಾವಿಸುತ್ತಾರೆ. ಆದರಿದು ಶುದ್ಧ ತಪ್ಪು ತಿಳುವಳಿಕೆ. ವಿನೋದ ಅಪಹಾಸ್ಯಾಸ್ಪದವಾದ ವಿಷಯದ ಸ್ಥಿರವಾದ ಮತ್ತು ಸ್ಥಿಮಿತವಾದ ಮೆಚ್ಚುಗೆ; ಚಮತ್ಕಾರ ಕ್ಷಣಿಕವಾದ ಮತ್ತು ಕಿರಿದಾದ ಅಭಿವ್ಯಕ್ತಿ. ಜನತೆಯ ಅಪೂರ್ಣತ್ವದಲ್ಲಿ ಕಾಣಬರುವ ಅಪಹಾಸ್ಯಾಸ್ಪದವಾದ ವಿಷಯಗಳನ್ನು ಚಮತ್ಕಾರ ಆಕಸ್ಮಿಕವೂ ಅನಿರೀಕ್ಷಿತವೂ

ಆದ ಸಾಮ್ಯಗಳಿಂದ ಉದಹರಿಸಿ ವಿಸ್ತರಿಸುತ್ತದೆ. ಜನಸಾಮಾನ್ಯರ ಆಲೋಚನೆಗೆ ಅಳವಟ್ಟು ಹೊಸ ರೀತಿಯಲ್ಲಿ ಒಂದು ವಿಷಯವನ್ನು ಕಾಣಿಸುವ ಶಕ್ತಿ ಚಮತ್ಕಾರಕ್ಕಿದೆ. ಉದಾಹರಣೆಗಾಗಿ 'ಟೊಳ್ಳುಗಟ್ಟಿ'ಯಲ್ಲಿ ಬರುವ 'ಈ ಮೂದೇವಿ ಬಂದ್ಮೂರ್ದಿನ್ಸಕ್ಕೆ ನನ್ತಲೆ ಸಾರ್ಸಿ ಗುಡ್ಸಿ ರಂಗೋಲಿಯಿಕ್ಕೆ......' ಎನ್ನುವ ಚಮತ್ಕಾರವನ್ನು ತೆಗೆದುಕೊಳ್ಳಬಹುದು. ಹಿಂದೂ ವಿಧವೆಯರ ರೂಪು ನಗೆಯನ್ನೇನೂ ಉಂಟುಮಾಡುವುದಿಲ್ಲ. ಆದರೆ ಅವರ ದುಂಡದಾಕಾರವನ್ನು 'ಸಾರಿಸಿ ಗುಡಿಸಿ ರಂಗವಲ್ಲಿಯಿಕ್ಕಿದ' ಮನೆಗೆ ಹೋಲಿಸಿದರೆ ಚಮತ್ಕಾರದ ಭಾವನೆ ನಮಗುಂಟಾಗುತ್ತದೆ.

ಇದರಿಂದ ವಿನೋದಕ್ಕೆ ಚಮತ್ಕಾರ ಪ್ರಥಮ ಸೋಪಾನವೆಂದು ವ್ಯಕ್ತವಾಗುವುದು. ಜೀವಿತದಲ್ಲಿ ಅಪಹಾಸ್ಯಾಸ್ಪದವಾದ ವಿಷಯಗಳಿರದಿದ್ದರೆ ನಗೆಗೆ ಮಾರ್ಗವೇ ಇಲ್ಲ. ಇರತಕ್ಕ ಅಪಹಾಸ್ಯವನ್ನು ಚಮತ್ಕಾರವಾಗಿ ಪ್ರತಿಬಿಂಬಿಸದಿದ್ದರೆ ವಿನೋದಕ್ಕೆ ಜನನವೇ ದೊರೆಯುವುದಿಲ್ಲ. ಚಮತ್ಕಾರಕ್ಕಿಂತ ವಿನೋದಕ್ಕೆ ಆಯುಃಪರಿಮಿತಿ ಹೆಚ್ಚು. ಸಂಸ್ಕೃತ ಸಾಹಿತ್ಯದ ಪ್ರಸಿದ್ಧ ಕವಿಗಳಾದ ಶೂದ್ರಕ, ಕಾಳಿದಾಸ, ಶ್ರೀಹರ್ಷ ಕವಿಗಳು ತಮ್ಮ ಮೃಚ್ಛಕಟಿಕ, ಶಾಕುಂತಲ, ರತ್ನಾವಳಿ ನಾಟಕಗಳಲ್ಲಿ ಸೃಜಿಸಿರುವ ಸಂಸ್ಥಾನಿಕ, ಮಾಣವಕ, ವಿದೂಷಕ ಪಾತ್ರಗಳು ನಿರ್ಮಾಣವಾಗಿ ನೂರಾರು ವರ್ಷಗಳಾದರೂ ಒಂದೇ ಬಗೆಯ ಆನಂದವನ್ನೀಯುತ್ತಿವೆ. ಪ್ರಳಯಕಾಲ ಸಮಿಾಪಿಸುತ್ತ ಬಂದರೂ ಇದೇ ತೆರನಾದ ಆನಂದವನ್ನೀಯುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಹಿಂದೆ ನಾವು ಉದಹರಿಸಿದಂತಹ ಮತ್ತು ಇತರ ಬಗೆಯ ಚಮತ್ಕಾರಗಳು ಎರಡನೆಯ ಬಾರಿ ಕೇಳಿದೊಡನೆಯೇ ಬೇಸರವನ್ನು ಹುಟ್ಟಿಸುತ್ತವೆ. ಏಕೆಂದರೆ ಚಮತ್ಕಾರ ವಚನಗಳಲ್ಲಿ ವಿನೋದದಲ್ಲಿರುವಂತಹ ಸ್ಥಿಮಿತವಾದ ಆಕಾರವನ್ನು ತಾಳಿದ ಮಾನವ ಅಪೂರ್ಣತ್ವದ ಪ್ರದರ್ಶನವಿಲ್ಲ. ಚಮತ್ಕಾರದ ವಸ್ತುವಿನ ಆಕೃತಿಯನ್ನು ಬದಲಾಯಿಸಲು ಸಾಧ್ಯ. ಆದರೆ ಮಾನವ ನ್ಯೂನತೆ ಪೂರ್ಣವಾಗಿ ಸರಿಹೊಂದುವುದು ಅಸಾಧ್ಯ.

ವಿನೋದವು ಕೀಳ್ತರದ್ದಾಗಿರಬೇಕೇ ?

ಜನರು ವಿನೋದದ ವಸ್ತು ಕೀಳ್ತರದ್ದಾಗಿರಬೇಕೆಂದು ಸಾಮಾನ್ಯವಾಗಿ ಅಭಿಪ್ರಾಯ ಪಡುತ್ತಾರೆ. ಅವರು ತಮ್ಮ ವಾದವನ್ನು ದೃಢಪಡಿಸಲು ಕೆಲವು ಅಸಂಗತ ಕಾರಣಗಳನ್ನು ಸೂಚಿಸುತ್ತಾರೆ. ಆದರವುಗಳ ಚರ್ಚೆ ಪ್ರಕೃತ ಬೇಕಿಲ್ಲ. ಆ ತಪ್ಪವೇ ನಮ್ಮ ರಂಗಭೂಮಿಯ ಅಪಕ್ವ ವಿನೋದದ ಅಡಿಗಲ್ಲು. ಸಾವಧಾನವಾಗಿ ಆಲೋಚಿಸಿದರೆ ಕೀಳು ವಿಷಯವನ್ನಾರಿಸುವ ವಿನೋದಗಾರ ಕೀಳು ಬಗೆಯ ವಿನೋದವನ್ನೇ ಮಾಡಬೇಕು. ವಿಚಾರ ಶೀಲರಲ್ಲದ ಬಹುಮಂದಿ ವಿನೋದಗಾರರಿಗೆ ವಿಷಯಕ್ಕನುಗುಣವಾಗಿಯೇ ಮನೋಸಾಗರದಿಂದ ತಕ್ಕ ಅಲೆ ಏಳುತ್ತದೆ.

ಅವರು ರಚನಾತ್ಮಕವಾದ ಮತ್ತು ವಿನಾಶಾತ್ಮಕವಾದ ರಂಗವಿಶ್ವದ ವಿಷಯಗಳನ್ನು ಬಲ್ಲವರಲ್ಲವಾದುದರಿಂದ ಈ ಕ್ಲಿಪ್ತತೆಯ ಬಲೆಗೆ ಬಿದ್ದು ಹೊರಬರಲಾರದೆ ನರಳುತ್ತಾರೆ. ಈ ಕೀಳುತೆರದ ವಿನೋದಗಾರ ಮನವಾರೆ ನಗಿಸತಕ್ಕವನು. ಅವನ ಕಾರ್ಯಕ್ರಮ ಚಿತ್ತ ಚಾಂಚಲ್ಯಕ್ಕೆ ಕುಶಲತೆಯ ಮೂಲಕ ರೂಪಕೊಡುತ್ತಾ, ಒಮ್ಮೊಮ್ಮೆ, ಎಡವಿ ಆ ಚಾಂಚಲ್ಯ ತನ್ನನ್ನೇ ಆವರಿಸಿರುವಂತೆ ಅಭಾಸಮಾಡಿಕೊಳ್ಳುವುದರಲ್ಲಿ ಮುಕ್ತಾಯವಾಗುತ್ತದೆ. ಉತ್ತಮ ತರಗತಿಯ ವಿನೋದಗಾರರ ರಂಗ ಇಷ್ಟು ವಿಶಾಲವಾದುದಲ್ಲ. ಉತ್ತಮ ತರಗತಿಯವನಿಗೊಂದು ಮಿತಿಯುಂಟು. ಉತ್ತಮ ತರಗತಿಯವನು ಪರಿಹಾಸ್ಯ ಕವಿಯ ದೃಷ್ಟಪಥ, ಆಲೋಚನಾ ತರಂಗಗಳನ್ನು ಮೀರಿರುವಂತಹ ಭಿನ್ನವಾದ ಅಸಂಗತ ವಿಷಯಗಳ ಪ್ರಭುವಾಗಿರುತ್ತಾನೆಯೇ ವಿನಾ ಪ್ರಜೆಯಾಗಿರುವುದಿಲ್ಲ. ಆದುದರಿಂದ ವಿನೋದದ ವಸ್ತುವಿನ ಮೇಲೆಯೇ ವಿನೋದದ ಗುಣ ಅವಲಂಬಿಸಿರುತ್ತೆಂದು ಭಾವಿಸುವುದು ತಪ್ಪಾಗುತ್ತದೆ. ಯಾವನು ಜನಮನೋಗುಣವನ್ನು ಮನಃಶಾಸ್ತ್ರಜ್ಞನಂತೆ ಅರಿಯಬಲ್ಲನೋ, ಸರ್ವ ವಿಷಯ ಸಮಗ್ರವಾದ ಮತ್ತು ಸರ್ವತೋಮುಖವಾದ ವಿನೋದವನ್ನು ಸರ್ವಜನಾದರಣೀಯವಾಗಿ ಮಾಡಬಲ್ಲನೋ, ರಚನಾತ್ಮಕ ಜಗದರಸನಾಗಿ ಕೀಳು ವಿಷಯವನ್ನಾಯ್ದರೂ ಕೂಡ ಅದಕ್ಕೆ ರಂಗುಹಾಕಿ, ಮೆರುಗುಕೊಟ್ಟು ಅದರ ಅಂತರಾತ್ಮ ಪ್ರವೇಶಿಸಿ ಒಳಗಡೆ ಇರುವ ಅಣುವಿನಂತಹ ಸತ್ವವನ್ನು ಬ್ರಹ್ಮಾಂಡದಂತೆ ಕಾಣಿಸಬಲ್ಲನೋ ಅವನೇ ಉತ್ತಮ ತರಗತಿಯ ವಿನೋದಗಾರ. ಅವನ ಮೇಲೆಯೇ ವಿನೋದದ ಗುಣ ತೂಗುವುದು. ವಿಷಯ ಸಂಗ್ರಹ, ಪ್ರದರ್ಶನ ಇವುಗಳು ವಿನೋದಗಾರನ ಸ್ವತಂತ್ರ ಭೂಮಿಗಳು. ಇದನ್ನರಿತೇ ಕವಿ ವಿನೋದಗಾರನಿಗೆ ಕಟ್ಟಪ್ಪಣೆ ಮಾಡಹೋಗುವುದಿಲ್ಲ.

ವಿನೋದಗಾರ, ಚತುರ ಇವರ ವಿಷಯ ಗುಣಗಳಿರುವಂತೆಯೇ ಸ್ವಲ್ಪಮಟ್ಟಿಗೆ ಮನೋಗುಣವೂ ಇರುತ್ತದೆ. ವಿನೋದಗಾರ ಚತುರನಿಗಿಂತಲೂ ದೃಢಮನಸ್ವಿಯೆಂದು ಹೇಳಬಹುದು. ಆದರೆ ಸಮಾಜದಲ್ಲಿ ಅವನಿಗೆ ಸ್ಥಾನವಿಲ್ಲ. ತನ್ನ ಕಾರ್ಯಕ್ಷೇತ್ರದಲ್ಲಿ ವಿನೋದಗಾರ ಕುರುಕ್ಷೇತ್ರದ ಪಾರ್ಥನಂತಿದ್ದರೂ ಸಮಾಜದಲ್ಲಿ ಕೌರವ ಸಭೆಯಲ್ಲಿನ ವಿಕರ್ಣನಂತೆಯೇ. ಚತುರನ ಸ್ಥಿತಿ ಬೇರೆ. ಚತುರನಿಗೆ ಸಮಾಜ ಮಹದಾನಂದದಿಂದ ಸ್ವಾಗತ ಬಯಸುತ್ತದೆ, ಅಲ್ಲದೆ ಚತುರತೆಯೇ ಸ್ವಾಗತವನ್ನು ಬರಮಾಡಿಕೊಳ್ಳುತ್ತದೆ. ಅದು ಹೀಗೆ ಅಭ್ಯಾಗತವಾಗಿ ಬಂದರೂ ಯಾವ ದೊಡ್ಡಸ್ತಿಕೆಯೂ, ಘನತೆಯೂ, ವಿದ್ಯೆಯೂ, ಗುಣದ ಗೌರವವೂ ಅದನ್ನು ಹೀಯಾಳಿಸಿ ತನ್ನ ಘನತೆಯನ್ನು ತೋರಿಸಬಾರದು. ಚತುರತೆ ಭೇದಭಾವನೆಗಳನ್ನೆಲ್ಲಾ ಸಮನಾಗಿಸಿ ಒಂದು ಬಗೆಯಲ್ಲಿ ಇಟಲಿಯ ಮುಸ್ಸೊಲಿನಿಯ ಪ್ರಭುತ್ವದಂತೆ

ನಿರಂಕುಶ ಪ್ರಭುತ್ವ ಮಾಡುತ್ತದೆ. ಇದರಿಂದ ಚತುರತೆ ಆಶ್ರಯಿಯೆಂದು ವ್ಯಕ್ತವಾಗುತ್ತದೆ. ವಿನೋದದ ರೀತಿಯಿಂತಲ್ಲ. ವಿನೋದದಲ್ಲಿ ಸ್ವಲ್ಪ ಅಹಂಭಾವವೂ ಉಂಟು. ವಿನೋದಗಾರ ಸ್ವತಂತ್ರನಾದುದರಿಂದ ತನ್ನ ಪ್ರೌಢಿಮೆಯನ್ನು ಸ್ಮರಿಸುತ್ತ ತಾನೇ ಇತರರ ಸಹಾಯ ಸಂಪರ್ಕಗಳಿಲ್ಲದೆ ಸಂತೋಷಿಸಬಲ್ಲ. ಚತುರನಿಗಿದು ಸಾಧ್ಯವಿಲ್ಲ. ಅವನ ಚಾತುರ್ಯವನ್ನನುಭವಿಸಲು ಯಾರಾದರೂ ಸಿದ್ಧವಾಗಿರಲೇಬೇಕು. ಆದುದರಿಂದ ಚತುರ ಅಸ್ವತಂತ್ರ, ವಿನೋದಗಾರ ಸ್ವತಂತ್ರ.

ಒಟ್ಟನಲ್ಲಿ ಸದಿಚ್ಛೆಯ ಅಪೂರ್ಣತ್ವವೇ ಎಲ್ಲಾ ನಗೆಚಾಟಿಕೆಯ ಮತ್ತು ವಿನೋದದ ಸಾರ. ಒಂದು ಕ್ರಿಯೆ ಮಾಡಲ್ಪಡುತ್ತದೆಂದು ಘಂಟಾಘೋಷವಾಗಿ ಕೇಳಿಬರುತ್ತಿದ್ದರೂ, ಪ್ರೇಕ್ಷಕರಿಗದು ಮಾಡಲ್ಪಡುತ್ತದೆಂದು ತೋರುತ್ತಿದ್ದರೂ ಅದರ ಮಾಡಲ್ಪಡದಿರುವಿಕೆಯೇ ವಿನೋದದ ರಹಸ್ಯ. ಅಪೂರ್ಣತ್ವಕ್ಕಿದೇ ಅಡಿಗಲ್ಲು. ಸಾಮಾನ್ಯವಾಗಿ ವಿನೋದ ವಿವೇಕದ ಆಶಾಭಂಗ, ನಿರರ್ಥಕವಾದ ಆಶೆ, ಜ್ಞಾನದಲ್ಲಿನ ಖಂಡತೆಯ ವಿಚ್ಛಿನ್ನತೆ ಇವುಗಳಿಂದುತ್ಪನ್ನವಾಗುತ್ತದೆ.

ಪಾಶ್ಚಾತ್ಯ ಮನಃಶಾಸ್ತ್ರಜ್ಞರು ವಿನೋದವನ್ನು ಅಂತಃಕರಣದ ಅಸ್ತಿಭಾರದ ಮೇಲೆ ರಚಿಸಲ್ಪಟ್ಟಿರುವ ಅಪಹಾಸ್ಯದ ಸಮ್ಮಿಳಿತ ಕಲ್ಪನೆಯೆಂದು ವರ್ಣಿಸುತ್ತಾರೆ. ಈ ಸ್ಥಿತಿಯ ಕಾರ್ಯಕ್ರಮ ಮಹತ್ತಾದ ವಿಷಯಗಳ ಅಲ್ಪತೆಯನ್ನೂ, ಅಲ್ಪ ವಿಷಯಗಳ ಮಹತ್ವವನ್ನೂ ಭೇದಭಾವರಾಹಿತ್ಯ ದೃಷ್ಟಿಯಿಂದ ನೋಡುವುದರಲ್ಲಡಗಿದೆ. ಅದು ಪರಸ್ಪರ ವಿರೋಧಿಗಳಾದ, ನಾನೇ ಹಿರಿಯನೆಂಬ ಭಾವನೆಯನ್ನು ಮೂಡಿಸುವ ವಿನಾಶಾತ್ಮಕವಾದ ಧಿಕ್ಕಾರ ನಗುವಿನ ಮತ್ತು ಇತರರ ಜೀವನ ರಂಗದೊಳಗೆ ಪ್ರವೇಶಿಸಿ ಅವರಂತರಾತ್ಮದ ಅಂಡಲೆಗಳನ್ನರಿತು ಅವರಿಗೆ ಅಂತಃಕರಣವನ್ನು ತೋರಿಸಿ ನಾವವರ ಹಿರಿಯರೂ ಅಲ್ಲ, ಕಿರಿಯರೂ ಅಲ್ಲ, ಸರಿಸಮರೆಂಬ ಭಾವನೆಯನ್ನು ಮೂಡಿಸುವ ರಚನಾತ್ಮಕವಾದ ನಗುವಿನ ಸಂಮಿಲಿತ ರಸವಾಗಿದೆ. ಈ ರಸಪ್ರಕಟಣೆ ಪ್ರತಿಯೊಂದು ಪದಾರ್ಥದಲ್ಲಿಯೂ ಸೌಂದರ್ಯ—ಕಾಂತಿ...ತೇಜಸ್ಸನ್ನು ಕಾಣುವ ಆಶಾವಾದಿಗೂ, (optimist) ಮತ್ತು ಎಲ್ಲಾ ವಸ್ತುಗಳಲ್ಲಿಯೂ ಕಾಳಿಕೆ—ಕುರೂಪ—ವಿಲುಪ್ತತೆಯನ್ನು ಕಾಣುವ ದುಃಖವಾದಿಗೂ (Pessimist) ಮಧ್ಯಮವರ್ತಿಯಾದ ನವೀನ ಮಾರ್ಗವೊಂದನ್ನು ಕಲ್ಪಿಸಿಕೊಂಡು ತನ್ಮೂಲಕ ನಿಸರ್ಗದ ಮತ್ತು ವಿಶ್ವಜೀವನದ ಮರ್ಮವನ್ನರಿಯಲು ಸಾಹಸಮಾಡುತ್ತದೆ. ಈ ಭಾವನೆ ಸ್ಥಿರವಾದುದಲ್ಲ, ಕೇವಲ ಕ್ಷಣಭಂಗುರವಾದದ್ದೆಂದು ಕೆಲವರು ವಾದಿಸುತ್ತಾರೆ.

ಅಪೂರ್ಣವನ್ನು ಪೂರ್ಣವಾಗೆಣಿಸುವುದರಿಂದ ನಗೆಯುತ್ಪನ್ನವಾಗುವುದಷ್ಟೆ. ಪಂಚಭೂತಾತ್ಮಕವಾದ ಈ ಜಡಜಗತ್ತಿನಲ್ಲಿ ಪೂರ್ಣವಾದ ಮತ್ತು ಪರಿಪಕ್ವವಾದ

ವಸ್ತು ಯಾವುದೂ ಇಲ್ಲ. ಹೀಗಿರುತ್ತಾ ಪರಿಪೂರ್ಣ ಪರಮಾತ್ಮನ ಸರಿಸಮ
ತಾನೆಂದು ಯಾವನಾದರೂ ಹೇಳಿಕೊಂಡರೆ ನಮ್ಮಲ್ಲಿ ಸ್ವಾಭಾವಿಕವಾಗಿ ನಗೆ
ಯುಂಟಾಗುವುದು. ವಿನೋದಗಾರ ಈ ಗುಂಪಿಗೆ ಸೇರಿದವನು. ಇತರರ ಜೀವನದ
ಮತ್ತು ನಡತೆಯ ಶಕ್ತಿ—ನಿಶ್ಯಕ್ತಿ, ಸತ್ಯ—ಲೋಪ ಮೊದಲಾದ ದ್ವಂದ್ವ ಗುಣ
ಗಳನ್ನು ಅವನು ಸೂಕ್ಷ್ಮರೀತಿಯಿಂದ ಗ್ರಹಿಸಿದ್ದರೂ ತನ್ನ ಅಪೂರ್ಣತ್ವದ ಪ್ರಜ್ಞೆಯೇ
ಅವನಿಗಿರುವುದಿಲ್ಲ. ಈ ಅಜ್ಞಾನವೇ ಅವನ ಆಸ್ತಿ. ಈ ಆಸ್ತಿಯ ಸೋಪಾನದ
ವ್ಯಯವೇ, ಇತರರನ್ನು ಹರ್ಷಗೊಳಿಸುವ ಮತ್ತು ಖೇದಗೊಳಿಸುವ ಅವನ ಸಾಧನ.
ಎಲ್ಲಿ ಈ ಪ್ರಜ್ಞೆ ವಿಕರ್ಷಣದಿಂದೊಡಗೂಡಿದೆಯೋ ಆಗದು **'ಅಪಹಾಸ್ಯದ ನಗೆ'**
ಯೆಂದೂ, ಎಲ್ಲಿ ವಿಕರ್ಷಣ ಮತ್ತು ಸ್ವಪ್ರತಿಷ್ಠೆ ಭಾವಗಳ ಭಾಂಡಾರದಿಂದೊಡಗೂಡಿ
ಯೇ ಆಗದು **'ಜಟಕರಣಿಯ ನಗೆ'**ಯೆಂದೂ, ಎಲ್ಲಿ ಮನೋವೇದನೆಯನ್ನುಂಟು
ಮಾಡದ ಸರಳ ಹೃದಯದ ಫಲಿತಾಂಶವಾಗಿಯೂ, ವಿಯುತಾರ್ಥಕವಲ್ಲದ ಉತ್ತಮಾ
ಕಾಂಕ್ಷೆಯ ವಿಡಂಬನವಾಗಿದೆಯೋ ಆಗದು **'ವಿನೋದದ ನಗೆ'**ಯೆಂದೂ ಹೆಸರು
ಪಡೆಯುತ್ತದೆ. ಈ ಮೂರು ವಿಭಾಗಗಳಲ್ಲಿ ಮೊದಲಿನೆರಡೂ ತುಚ್ಛತರಗತಿಯ ನಗೆ
ಗಳು. 'ಅಪಹಾಸ್ಯದ ನಗೆ'ಯಲ್ಲಿ, ಹಿಂಸೆಗೆ ತುತ್ತಾದ ಪ್ರಾಣಿಗಿಂತಲೂ ತಾನು
ಹಿರಿಯನೆಂಬ ಭಾವನೆ ಜನತೆಗೆ ಉತ್ಪನ್ನವಾಗುವುದಿಲ್ಲವಾದರೂ ವ್ಯಕ್ತಿಯ ಪರಿಸ್ಥಿತಿ
ಯನ್ನು ಕಂಡು ನಗುತ್ತಾರೆ. ಅಕಸ್ಮಾತ್ತಾಗಿ ಬೀದಿಯಲ್ಲಿ ಜಾರಿಬಿದ್ದು ಮೈಯೆಲ್ಲಾ
ತರೆದು ಹೋಗಿ ಬಟ್ಟೆಯೆಲ್ಲಾ ಕೆಸರಾಗುವವನ ಪಾಡನ್ನು ತೆಗೆದುಕೊಳ್ಳೋಣ.
ಜನತೆಯ ಹೃದಯದಲ್ಲಿ ಇತರರ ವಿಚಾರದಲ್ಲಿ ಮಮತೆಯನ್ನು ತೋರಿಸುವ ದೈವಿಕಾಂಶ
ವಿದ್ದ ಪಕ್ಷಕ್ಕೆ ಆ ಬಡ ಹಾದಿಗನ ವಿಚಾರದಲ್ಲಿ ಸಂಕಟವೂ ಅವರಿಗೆ ಹುಟ್ಟುತ್ತದೆ.
ನಾವು ನಿತ್ಯ ಕಾಣುವ ನೋಟದಲ್ಲಿ ಬೀದಿಹೋಕರ ಬಗ್ಗೆ ಕುತ್ಸಿತ ಭಾವನೆಯುತ್ಪನ್ನ
ವಾಗುವುದೇ ವಿನಾ, ಮಮತೆ ಹುಟ್ಟುವುದಿಲ್ಲ. 'ಜಟಕರಣಿಯ ನಗೆ'ಯಲ್ಲಿ ವ್ಯಂಗ್ಯ
ವನ್ನೂ, ಅಸಡ್ಡೆಯನ್ನೂ, ಇತರರ ಮನಸ್ಸನ್ನು ನೋಯಿಸುವ ದುಷ್ಟಾಕಾಂಕ್ಷೆಯನ್ನೂ
ಕಾಣುತ್ತೇವೆ. ಇಲ್ಲಿ ಎರಡು ಭಾವನೆಗಳಿವೆ. ಇತರರನ್ನು ಕೀಳಾಗಿ ಕಾಣುವುದೊಂದು ;
ತಾನೇ ತನ್ನ ವಿಚಾರದಲ್ಲಿ ದೊಡ್ಡದಾಗಿ ತಿಳಿಯುವುದೊಂದು. ವೇದಿಕೆಯನ್ನು ಹೊಸ
ದಾಗಿ ಹತ್ತುವ ಭಾಷಣಕಾರನನ್ನು ದೃಷ್ಟಾಂತವಾಗಿ ತೆಗೆದುಕೊಳ್ಳೋಣ. ಸಭಾ
ಕಂಪದ ದೆಸೆಯಿಂದ ಅಭ್ಯಸಿಸಿದ ಭಾಷಣವೆಲ್ಲಾ ಮರೆತುಹೋಗಿ, ತಬ್ಬಿಬ್ಬಾಗಿ
ಕಣ್ಣುತ್ತಲೆಯಿಟ್ಟುಕೊಂಡು ಬಂದು, ಮುಖದಿಂದ ಧಾರಾಕಾರವಾಗಿ ಬೆವರು ಸುರಿಸುತ್ತಾ
ತೊದಲು ತೊದಲು ಮಾತನಾಡುವ ಆ ವ್ಯಕ್ತಿಯನ್ನು ನೋಡಿ ಸಹಜವಾಗಿ ನಮಗೆ
ಮರುಕವುಂಟಾಗಬೇಕು. ಆದರೆ ಕೇವಲ ವ್ಯತಿರಿಕ್ತವಾಗಿ 'ಯಾಕಪ್ಪಾ, ಅಭ್ಯಾಸವಿಲ್ದೆ
ದೊಡ್ಡ ಸತ್ಯಮೂರ್ತಿ ಹಾಗೆ ಲೆಕ್ಚರ್ಕೊಡೋಕೆ ಬರ್ಬೇಕು ?–ನಾನಾಗಿದ್ರೆ ಹಾಗ್ಮಾಡ್ತಿದ್ನೆ

ಎಂಬ ಉದ್ಗಾರದ ವಿಚಾರಸರಣಿ ಜನತೆಯ ಮುಖಾರವಿಂದದಿಂದ ಹೊರಡುತ್ತದೆ.
'ವಿನೋದದ ನಗೆ'ಯಲ್ಲಿ ಉತ್ತಮಾದರ್ಶವಿರುವುದರಿಂದ ಇತರರ ಅಲ್ಪತೆಯೇ ಈ
ವಿನೋದದ ವಸ್ತುವಾದರೂ ಪ್ರದರ್ಶನದ ರೀತಿಯಲ್ಲಿ ಆ ಅಲ್ಪತೆಯ ನಾಯಕನೇ
ನಗುವಿನೊಡನೆ ಬೆರೆತು ನಲಿಯುವನು ; ತನ್ನ ನಡತೆಯನ್ನು ಸುಧಾರಿಸಿಕೊಳ್ಳಲು
ಪ್ರಯತ್ನಿಸುವನು. ಉದಾಹರಣೆಗಾಗಿ 'ಗುಂಡೂರಾಯರ' 'ಪೋಲಿಕಿಟ್ಟಿ' ನಾಟಕದ
ಎರಡನೆಯ ದೃಶ್ಯವನ್ನು ತೆಗೆದುಕೊಳ್ಳೋಣ. ಕಂಸಾವತಾರದ ಬೈಸಿಕಲ್ಲು ಸವಾರನ
ರಥಕ್ಕೆ ಸಿಕ್ಕಿ ನುಚ್ಚುನುರಿಯಾಗುತ್ತಿದ್ದ ಮಗುವಿನ ಪ್ರಾಣವನ್ನು ಕಾಪಾಡಿ, ಮಗು
ವಿನ ತಾಯಿಗೆ 'ಅಮ್ಮಾ! ಮಗೂನ್ನಾಯಿಸ್ಬೇಕೂ ಅಂದ್ರೆ ಮನೆಲ್ಲಾವಿಯಿಲ್ವೇ....
ಇಷ್ಟಸ್ತಿತಕೊಂಡು....ಇಲ್ಲಿಗೆತ್ಕೊಂಡ್ಬಂದು....ಬೀದೀಲ್ಬೋಗೋ ಬಂಡಿಗಳ್ಮುಂದೆ
ಹಾಕಿ....ಇಷ್ಟ್ಜನಕ್ಕೊಂದ್ರೆ ಬದ್ಲಾತ...ಮನೇಭಾವೀಜೇದಬ್ಬಿಟ್ರೆ ಎಲ್ರಿಗೂ ಸಲೀಸು!
....ನಿನ್ನಾಳ್ಮಗೂನ ಬಚಾಯ್ಸೊಗಲಾಟೇಲಿ....ನನ್ಮೈಬಟ್ಟೆಗಳೆಲ್ಲಾ ಕೆಸ್ರು !....ಈ
ಹಾಳಾದ್ದೆಂಗಸ್ರು....ಇರೋಕಡೇಯೆಲ್ಲಾ ಗೋಳೇ !' ಎಂದಂದು ಹೊರಟು ಹೋಗುವ
ಕಿಟ್ಟಿಯಲ್ಲಿ ಯಾರಿಗೆ ತಾನೇ ಆಗ್ರಹವಾದೀತು ? ಆ ಮಗುವಿನ ತಾಯಿಯ 'ನೀನೇನ್ಬೇ
ಕಾದ್ರೂ ಬೈಕೋ ನನ್ರಾಜ....ನನ್ಭಾಗಕ್ದೇವ್ರ್ಹಾಗ್ಬಂದು ನನ್ಕಂದನ್ನಾಪಾಡಿದ್ಯೆಲ್ಲ....
ಅಷ್ಟೇ ಸಾಕು....ನನ್ನನ್ಬೇಕಾದ್ರೂ ಅಂದ್ಕೊ' ಎಂಬ ಸ್ವಭಾವಜನ್ಯವಾದ ಕೃತಜ್ಞತಾ
ನುಡಿಗಳೇ ಎಲ್ಲರಿಂದಲೂ ಹೊರಬರುವುದಿಲ್ಲವೇ ? ನಗುವವನ ಮತ್ತು ನಗಿಸಿಕೊಳ್ಳುವ
ವನ ಹೃದಯವನ್ನು ಭೇದಿಸುವಂತಹ ನಗೆ. ಸ್ವಾಮಿ ಪುರಂದರವಿಠಲನ ಅಮೃತಪಾದ
ಗಳನ್ನು ಸೇವಿಸಿ ವಿಮುಕ್ತಿಯನ್ನು ಹೊಂದದೆ ಅರಿಷಡ್ವರ್ಗಗಳ ಬಲೆಗೆ ಸಿಲುಕಿ ನರಳುವ
ಮನುಷ್ಯರನ್ನು ಕಂಡು ಮರುಕ ಪಡುವ ನಗೆ. ನಗೆಗಾರನು ವಿಚಾರಪರನೂ ದೂರ
ದರ್ಶಿಯೂ ಆಗಿದ್ದ ಪಕ್ಷಕ್ಕೆ ಈ ತೆರನಾದ ಉನ್ನತ ನಗೆ ಪ್ರದರ್ಶಿಸಲು ಪ್ರಯತ್ನಿ
ಸುವನು.

ನಗೆಯಲ್ಲಿ ಆರು ಅಂತಸ್ತುಗಳಿವೆ. ಇವುಗಳಿಂದ ವಿನೋದಾಭಿನಯಗಾರ ಎಷ್ಟು
ಎಚ್ಚರಿಕೆಯಿಂದ ತನ್ನ ಪ್ರತಿಯೊಂದು ಹೆಜ್ಜೆಯನ್ನೂ ಇಡಬೇಕೆಂದೂ, ಸ್ವಲ್ಪ ತಪ್ಪಿ
ದರೂ ರಸಾಭಾಸವಾಗುತ್ತದೆಂಬುದೂ ವ್ಯಕ್ತವಾಗುತ್ತದೆ. ಪಾತ್ರದ ಮತ್ತು
ಸನ್ನಿವೇಶದ ಔಚಿತ್ಯವನ್ನರಿತು ಅದಕ್ಕನುಸಾರವಾದ ನಗೆಯನ್ನು ಪ್ರದರ್ಶಿಸಬೇಕಾಗು
ವುದು ಮತ್ತು ಸರಿಯಾಗಿ ನಗುವುದನ್ನು ಅಭ್ಯಾಸ ಮಾಡಬೇಕಾಗುವುದು.

(೧) **ಸ್ಮಿತಂ**—ಮುಗುಳ್ನಗೆ, ಕಣ್ಣುಗಳಲ್ಲಿಯೂ ತುಟಿಯಲ್ಲಿಯೂ ಕಿಂಚಿತ್ತಾದ
ವಿಶಾಲತೆ ಕಂಡುಬರುವುದೇ ಇದರ ಲಕ್ಷಣ.

(೨) **ಹಾಸಿತಂ**—ವಿಶಾಲನಗೆ, ಮೇಲೆ ತಿಳಿಸಿದ ಮುಖ ಲಕ್ಷಣದೊಂದಿಗೆ ದಂತಶ್ರೇಣಿ ಸ್ವಲ್ಪ ಈ ನಗೆಯಲ್ಲಿ ಕಂಡುಬರುತ್ತದೆ.

ಪ್ರಾಜ್ಞರಾದ ಜ್ಞಾನಿಗಳು ತಮ್ಮ ಆನಂದವನ್ನು ಸೂಚಿಸುವ ಬಗೆಯೇ ಇದು. ಎಳೆಯ ಮಕ್ಕಳ ನಗೆ 'ಸ್ಮಿತಂ' ಭಾವಕ್ಕೂ ಮಹಾತ್ಮಾ ಗಾಂಧಿಯವರ ಪ್ರೇಮ ಸೂಚಕ ನಗೆ 'ಹಾಸಿತಂ' ಭಾವಕ್ಕೂ ಉತ್ತಮ ಉದಾಹರಣೆಗಳಾಗಿವೆ.

(೩) **ವಿಹಾಸಿತಂ**—ಮೃದುನಗೆ. 'ಹಾಸಿತಂ' ಭಾವಕ್ಕೆ ಮಾರ್ದನಿಯೊಂದು ಸೇರುವುದರಿಂದ ಈ ನಗೆ ಉತ್ಪನ್ನವಾಗುತ್ತದೆ.

(೪) **ಅವಹಾಸಿತಂ**—ಗಟ್ಟಿಯಾದ ನಗೆ. ತಲೆ ಮತ್ತು ಭುಜಗಳು ಅಳ್ಳಾಡುತ್ತಾ ಬಾಯಿಯಿಂದ ನಿನಾದ ಹೊರಬರುವುದೇ ಇದರ ಲಕ್ಷಣ.

ಇವೆರಡೂ ತಿಳುವಳಿಕೆಯಲ್ಲಿ ವಿಶೇಷ ಪ್ರಾಜ್ಞತೆಯನ್ನು ಪಡೆಯದಿರುವ ಮಧ್ಯಮ ವರ್ಗಗಳ ಸೊತ್ತಾಗಿದೆ.

(೫) **ಅಪಹಾಸಿತಂ**—ಅಂಹತಿಯ ನಗೆ. ಮೇಲೆ ತಿಳಿಸಿದ ಲಕ್ಷಣಗಳೊಂದಿಗೆ ಕಣ್ಣಿಳಿಂದ ಧಾರಾಕಾರವಾಗಿ ನೀರು ಸುರಿಯುವುದೇ ಇದರ ರೀತಿ.

(೬) **ಅತಿಹಾಸಿತಂ**—ವಿಶೇಷ ನಗೆ. ದೇಹಾಂಗಗಳ ಶಿಸ್ತು ತಪ್ಪಿ ಅವುಗಳು ಅತ್ತಿತ್ತ ಮನಸ್ವೀ ಚಲಿಸಲಾರಂಭಿಸುವುದೇ ಇದರ ಲಕ್ಷಣ.

ಇವೆರಡೂ ಅಲ್ಪಜ್ಞರ ಆನಂದ ಸೂಚನೆಯ ಸಾಧನಗಳಾಗಿವೆ. ಪ್ರಪಂಚದ ಮತ್ತು ಅಶಿಕ್ಷಿತ ರಂಗಭೂಮಿಯ ವಿನೋದ ಈಗ ಇವೆರಡರ ಮೇಲೆ ನಿಂತಿದೆ. ತಮ್ಮ ಪ್ರೇಕ್ಷಕರ ಮುಖಲಕ್ಷಣಗಳನ್ನು ವಿನೋದಗಾರರು ಎಚ್ಚರಿಕೆಯಿಂದ ಗಮನಿಸಬೇಕು.

ಯಾವೊಂದು ರಸದತಿರೇಕವೂ ಮೂಲಕಾಂಕ್ಷೆಯನ್ನು ಹಿಮ್ಮೆಟ್ಟಿಸಿ ನಗೆಗೆ ತಂದೊಯ್ಯುವುದೆಂಬುದು ಸ್ವತಃಸಿದ್ಧವಾದ ಸಿದ್ಧಾಂತ. ಪಾತ್ರವೊಂದನ್ನು ಪ್ರದರ್ಶಿಸುತ್ತಿರುವ ಅಭಿನಯಗಾರ ಹಾಸ್ಯವಲ್ಲದ ಬೇರೆಯೊಂದು ರಸದಲ್ಲಿಯೇ ಪಾತ್ರವನ್ನು ನಿರ್ವಹಿಸುತ್ತಿರಬಹುದು. ಆದರೆ ಆ ರಸಪ್ರದರ್ಶನ ನೈಜದೆಲ್ಲೆಯನ್ನು ಮೀರದಿದ್ದರೆ ರಸಾಭಿಪ್ರಾಯ ಜನತೆಯ ಮನದಲ್ಲಿ ಮೂಡುವುದು, ಪಾತ್ರಾಭಿನಯದ ಉದ್ದೇಶ ಸಾರ್ಥಕವಾಗುವುದು. ಆದರೆ ಎಲ್ಲೆಯನ್ನು ಮೀರಿದರೆ ನಗೆಯನ್ನು ಹುಟ್ಟಿಸುವುದು. ಇದನ್ನು ಪದೇ ಪದೇ ನಮ್ಮ ರಂಗಭೂಮಿಯಲ್ಲಿ ಸಂಗೀತವನ್ನು ಹಾಡಿಕೊಂಡು ಅಳುವ ಅಭಿನಯಗಾರನಲ್ಲೂ, ಮಗನಾದ ಪ್ರಹ್ಲಾದನಲ್ಲಿ ಆಗ್ರಹವನ್ನು ತೋರಿದ ಹಿರಣ್ಯಕಶಿಪುವಿನಲ್ಲೂ, ಶಿಶುಪಾಲ, ಜರಾಸಂಧಾದಿ ಮಹಾವೀರರ ರುದ್ರಕೃಪಾಣಗಳ ತುದಿಗೆ

ಸಿಲುಕಿದ ಬಡಬ್ರಾಹ್ಮಣನ ಭೀತಿಯಲ್ಲೂ ಕಾಣಬಹುದು. ಇಂತಹ ನಗೆಯನ್ನು ಹುಟ್ಟಿಸುವ ಚಪಲವೇ ನಮ್ಮ ರಂಗಭೂಮಿಯ ಪತನಕ್ಕೆ ಮೂಲಹೇತುವಾದುದು.

ಆದುದರಿಂದ ನಗೆ ಆಕಾರದಲ್ಲಿ ವಿನಾಶಾತ್ಮಕವಾಗಿ ಕಂಡುಬರುತ್ತಿದ್ದರೂ ಜಗತ್ತಿನ ವ್ಯಾಖ್ಯಾನ ಕಾರ್ಯದಲ್ಲಿ ರಚನಾತ್ಮಕವಾದ ಕ್ರಿಯೆಯನ್ನು ತನ್ನ ಮೂಲತತ್ವವಾಗಿಟ್ಟುಕೊಂಡಿದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ನಮ್ಮ ರಂಗಭೂಮಿ ಅರ್ಧ ಕಟ್ಟಲ್ಪಟ್ಟಿರುವ ಅಪೂರ್ಣ ಸೌಧದಂತಿದೆ. ವಿನೋದದ ನೈಜ ಆದರ್ಶವನ್ನು ಸ್ಮೃತಿಪಥದಲ್ಲಿಟ್ಟುಕೊಂಡು ಆದರ್ಶಸಾಧನೆಗೆ ನಾವು ನಿಸ್ವಾರ್ಥ ಬುದ್ಧಿಯಿಂದ ಶ್ರಮಪಟ್ಟರೆ ಕೆಲಕಾಲದೊಳಗೆ ರಚನಾತ್ಮಕ ಕ್ರಿಯೆಯ ಫಲಿತಾಂಶವಾದೊಂದು ಭವ್ಯ ಮಂದಿರವನ್ನು ಕಾಣುತ್ತೇವೆ.

(ನಾಟಕ ಕಲೆ ಗ್ರಂಥದಿಂದ ಆಯ್ದುದು) ★

ಸ್ಫುರಣ-ಕಿರಣ

ಮಾತಾಜಿ

1. ತೆರೆದ ಹೃದಯ

ಒಂದು ಮಧ್ಯಾಹ್ನ; ಬಿಸಿಲ ದಗೆ. ಮಳೆಯ ಮುನ್ಸೂಚನೆ ನೀಡುತ್ತಿತ್ತು. ಬಸವ ಗಂಗೋತ್ರಿಯ ನಾವಿರುವ ಕಟ್ಟಡದ ಮುಂದಿನ ಕೋಣೆಯಲ್ಲಿ ಬಂದ ಸದ್ಭಕ್ತರೊಡನೆ ಮಾತನಾಡುತ್ತ ಕುಳಿತಿದ್ದೆವು. ಹೊರಗೆ ಗಾಳಿ ಬೀಸಿ ಗಿಡ ಅಲ್ಲಾಡುತ್ತಿದ್ದವು. ಒಳಗೆ ತುಂಬಾ ಸೆಕೆ ಎನಿಸುತ್ತಿತ್ತು. ಇದೇಕೆ ಎಂದು ನೋಡಿದಾಗ ಕಿಟಕಿಗಳು ಭದ್ರವಾಗಿ ಮುಚ್ಚಲ್ಪಟ್ಟದ್ದು ಕಂಡಿತು. ಹೊರಗಿನ ಕಿಟಕಿ ಗಾಜಿನಿಂದ ಕೂಡಿವೆ. ಒಳಗೆ ಮೆಷ್ ಹಾಕಿರುವ ಕಿಟಕಿಯ ಪಡಕಗಳಿವೆ. ಸುತ್ತಲೂ ಬಯಲು ಇರುವುದರಿಂದ ಸಂಜೆಯಾಗುತ್ತಲೇ ನೂರಾರು ಸೊಳ್ಳೆ, ಕ್ರಿಮಿ, ಕೀಟ, ದೀಪದ ಹುಳಗಳು ಒಳನುಗ್ಗುತ್ತಿದ್ದುದರಿಂದ, ಒಳಗಡೆ ಭಾಗಕ್ಕೆ ಮೆಷ್ ಹಾಕಿದ ಪಡಕ ಹಾಕಿಸಬೇಕಾಯಿತು.

ಗಾಜಿನ ಪಡಕಗಳಿರುವ ಕಿಟಕಿಗಳನ್ನು ತೆರೆದು, ತಂತಿ ಜಾಳಿಗೆಯ ಕಿಟಕಿ ಮುಚ್ಚುತ್ತಿದ್ದಂತೆಯೇ ಗಾಳಿ ಬಸ್ ಎಂದು ನುಗ್ಗಿ ಆಹ್ಲಾದವಾಯಿತು. ಆಗೊಂದು ವಿಚಾರ ಸ್ಫುರಿಸಿತು. ಹೊರಗೆ ಗಾಳಿ ಇದೆ. ಆದರೂ ನಾವಿರುವ ಕೋಣೆಗಳ ಕಿಟಕಿ ಮುಚ್ಚಿ ಕುಳಿತರೆ ಗಾಳಿಯ ಅನುಭವ ನಮಗಾಗದು. ಆದರೆ ಕಣ್ಣಿಗೆ ಮಾತ್ರ ಗಾಳಿ ಬೀಸಿ ಗಿಡ ಅಲ್ಲಾಡುವುದು ಕಂಡಾಗ, ಗಾಳಿ ಬೀಸುವುದನ್ನು ಅರಿಯುತ್ತೇವೆ. ಅದೇ ರೀತಿ ದೇವನ ಅನುಗ್ರಹದ ತಂಗಾಳಿ ಎಲ್ಲೆಡೆಯಲ್ಲಿ ಸುಳಿಯುತ್ತಿದ್ದರೂ, ನಮ್ಮ ಹೃದಯದ ಬಾಗಿಲನ್ನು ಮುಚ್ಚಿ ಕುಳಿತಾಗ ಅದರ ಅನುಭವವಾಗದು. ಅನೇಕ ಸಂತ, ಮಹಾಂತರ ಜೀವನವನ್ನು ಕಂಡಾಗ ಅಲ್ಲಿ ದೈವಾನುಗ್ರಹದ ಗಾಳಿ ಸುಳಿಯುವುದನ್ನು, ಅದು ಅವರ ಬದುಕನ್ನು ಪ್ರಗತಿಯತ್ತ ಒಯ್ಯುವುದನ್ನು ಕಾಣುತ್ತೇವೆ.

2. ಇನ್ನೊಂದು ಸ್ಫುರಣ

ಮೆಷ್ ಹಾಕಿರುವ ಕಿಟಕಿಯ ಪಡಕಗಳು ಒಳಗಿವೆ-ಗಾಜಿನ ಪಡಕಗಳ ಕಿಟಕಿ

ಗಳು ಹೊರಗಿವೆ. ಒಂದನ್ನು ಮುಚ್ಚಿಡಬೇಕು. ಇನ್ನೊಂದನ್ನು ತೆರೆದಿಡಬೇಕು. ಒಳಗಿನ ಪಡಕಗಳನ್ನು ಮುಚ್ಚಿ, ಹೊರಗಿನವನ್ನು ತೆರೆಯಬೇಕು. ಅಂದರೆ ಮಾತ್ರ ಗಾಳಿ ಬೆಳಕು ಚೆನ್ನಾಗಿ ಬರಲು ಸಾಧ್ಯ! ಅದರ ಬದಲಿಗೆ ಒಳಗಿನದನ್ನು ತೆರೆದು ಹೊರಗಿನದನ್ನು ಮುಚ್ಚಿದರೆ ಸೊಳ್ಳೆ, ಧೂಳಿನೊಡನೆ ಗಾಳಿಯೂ ಇಲ್ಲವಾಗುವುದು. ನಮಗೆ ಶುದ್ಧ ಹವೆ ಬೇಕು, ಧೂಳು ಕಸಕಡ್ಡಿ ಸೊಳ್ಳೆ ಬರಬಾರದು ಎಂದಿದ್ದರೆ ಹೊರಗಿನದನ್ನು ತೆರೆದಿಟ್ಟು ಒಳಗಿನದನ್ನು ಮುಚ್ಚಬೇಕು. ಅದೇ ರೀತಿ ಬಹಿರೀಂದ್ರಿಯಗಳು ಹೊರಗಿನ ಗಾಜಿನ ಕಿಟಕಿಗಳಿದ್ದಂತೆ; ಅವನ್ನು ತೆರದಿಡಲೇಬೇಕು. ಪಂಚೇಂದ್ರಿಯಗಳೆಂಬ ಕಿಟಕಿಗಳ ಮೂಲಕವೇ ಲೋಕಾನುಭವವೆಂಬ ಗಾಳಿ ಹೊರಬರಲು ಸಾಧ್ಯ. ಆದರೆ ಲೋಕಾನುಭವದ ಗಾಳಿಯೊಡನೆ ವಿಕಾರ, ದುರ್ವ್ಯಸನ, ದುರ್ವಿಚಾರ ಮುಂತಾದ ಸೊಳ್ಳೆ, ಕಸಕಡ್ಡಿ ಒಳಬರಬಾರದೆಂದಿದ್ದರೆ ಅಂತಃಕರಣಗಳೆಂಬ ಒಳಕಿಟಕಿಗಳಿಗೆ ದೈವೀನೆನಹೆಂಬ ಮೆಷ್ ಹೊಡೆಯಬೇಕು. ಅಂದರೆ ಅದು ಅವಶ್ಯಕವಾದ ತತ್ತ್ವವನ್ನು ಸೋಸಿ ಒಳಗೆ ಬಿಟ್ಟು, ಅನವಶ್ಯಕವಾದುದನ್ನು ಹೊರಗೇ ತಡೆಗಟ್ಟುತ್ತದೆ.

3. ದೈವಾನುಗ್ರಹದ ಕವಚ.

ದಿನಾಂಕ 19-8-1981 ರ ಸಂಜೆ. ಬರೆಯುತ್ತ ಕುಳಿತಿದ್ದೆ; ಹಲ್ಲಿಯ ಲೊಚಲೊಚ ಶಬ್ದ ಕೇಳಿತು. ಕಿಟಕಿಯ ಮೆಷ್ ಮೇಲೆ ಹರಿದಾಡುತ್ತಿತ್ತು ಆ ಹಲ್ಲಿ. ಅದು ಏನನ್ನೋ ಬೇಟೆಯಾಡುವ ಸಾಹಸದಲ್ಲಿತ್ತು. ಆ ತಂತಿ ಬಲೆಯ ಆಚೆಗೆ ಒಂದು ಹಸಿರು ಹುಳ ಹರಿದಾಡುತ್ತಿತ್ತು. ಇದಕ್ಕೆ ತನ್ನ ಕಣ್ಣೆದುರೇ ಹರಿದಾಡುವಂತೆ ಭಾಸವಾಗಿ ಅತ್ತಕಡೆ ಇರುವುದನ್ನರಿಯದೆ ವ್ಯರ್ಥ ಪ್ರಯಾಸ ಪಡುತ್ತಿತ್ತು. ತಂತಿಯ ಬಲೆ ಮಧ್ಯೆ ಇದ್ದುದರಿಂದ ಹಸಿರು ಜಿಟ್ಟೆ ಹಲ್ಲಿಯ ಕೈಗೆ ಸಿಗದಂತೆ ಇದ್ದು ಪಾರಾಗಿ ಹೋಯಿತು. ಇದನ್ನು ನೋಡುತ್ತ ಒಂದು ವಿಚಾರ ಸ್ಫುರಿಸಿತು. "ಕೂಡಲ ಸಂಗನ ರಾಜತೇಜದಲ್ಲಿಪ್ಪೆನಾಗಿ" ಎಂಬ ಬಸವವಾಣಿ ನೆನಪಿಗೆ ಬಂದಿತು. ಶರಣರು, ಜ್ಞಾನಿಗಳು ದೇವನ ಅನುಗ್ರಹದ ತೇಜದಲ್ಲಿರುತ್ತಾರೆ. ಅವರು ತಮ್ಮ ಕಣ್ಣೆದುರಿಗೇ ಇದ್ದಾರೆಂದು ಭಾವಿಸಿ ದುಷ್ಟರು, ಕುಹಕಿಗಳು, ಸ್ವಾರ್ಥಿಗಳು ಅವರಿಗೆ ಹಿಂಸೆ ಕೊಡಲು ಹೋಗುತ್ತಾರೆ. ಆದರೆ ಅವರು ದೈವೀಕಾರುಣ್ಯದ ಅದೃಶ್ಯ ಕವಚದಲ್ಲಿರುವ ಕಾರಣ ರಕ್ಷಿಸಲ್ಪಡುತ್ತಾರೆ. ದುರ್ಜನರ ಸಾಹಸ ವ್ಯರ್ಥವಾಗುತ್ತದೆ.

4. ಅಜ್ಞಾನಯುಕ್ತ ಅಹಂಕಾರ

ಹೇಮರೆಡ್ಡಿ ಮಲ್ಲಮ್ಮ ಗೋಶಾಲೆಯ ಒಳ್ಳೆಯ ಹಸು ನಾಗಲಾಂಬಿಕೆ ಕರು ಹಾಕಿತ್ತು. ನಾಗಲಾಂಬಿಕೆ ಭವ್ಯವಾದ ಆಕಾರ ಉಳ್ಳದ್ದು. ಮತ್ತು ಗುಣದಲ್ಲಿಯೂ ಅಷ್ಟೇ ಸಾತ್ವಿಕ; ತಲೆ ಎತ್ತಿ ನಿಂತರೆ ಏನೋ ಭವ್ಯತೆ ಮತ್ತು ಗಾಂಭೀರ್ಯ ಅದರಲ್ಲಿ. ಕಳೆದ ವರ್ಷ ಬರೀ ಗಂಡು ಕರುಗಳನ್ನೇ ಸಾಲಾಗಿ ನೀಡಿದ್ದ ಡೇರಿ, ಈ ವರ್ಷ ಬಸವ

ಜಯಂತಿಯಿಂದೀಚೆಗೆ ಉತ್ಕೃಷ್ಟ ತಳಿಯ ಹೆಣ್ಣು ಕರುಗಳನ್ನೇ ನೀಡುತ್ತಿದ್ದು, ತೀರಾ ಶುಭ ಲಕ್ಷಣವಾಗಿ ಎಲ್ಲರಿಗೂ ಸಂತೋಷ. ನಮ್ಮ ನಾಗಲಾಂಬಿಕೆ ಕೊಟ್ಟ ಕರುವೂ ಶುದ್ಧ ಕಪ್ಪು ಬಣ್ಣದ ಹೋಲ್‌ಸ್ಟೇನ್. ಹುಟ್ಟುತ್ತಲೇ ಕಸ್ತೂರಿ ಎಂದು ಹೆಸರಿಸಿದೆವು.

ಕಸ್ತೂರಿ ಮೂರು ದಿನಗಳಾದರೂ ತಾಯಿಯಂತೆಯೇ ಭವ್ಯಾಕಾರದವಳು. ಬಿಟ್ಟರೆ ಸಾಕು, ತಕತಕ ಕುಣಿದಾಡುವಳು. ಹೊರಗೆ ಬಿಟ್ಟರಂತೂ ಕೈಗೆ ಸಿಗುವುದಿಲ್ಲ ಎಂದುಕೊಂಡು, ಗೋಶಾಲೆಯ ಒಳಗಡೆಯೇ ಆಡಲು ಬಿಟ್ಟಿದ್ದರು. ನೆಲಕ್ಕೆ ಹಾಸುಗಲ್ಲು; ಹೊಸದಾಗಿ ಕಾಲು ಬಂದ ಉತ್ಸಾಹ ಸಿಕ್ಕಾಪಟ್ಟೆ ಕುಣಿದಾಡಿ ಕಾಲು ಉಳುಕಿಸಿಕೊಂಡು, ಕುಂಟ ತೊಡಗಿದಳು. ಅದೇ ದೊಡ್ಡ ಹಸುಗಳು ತುಂಬಾ ಎಚ್ಚರವಾಗಿ ಕಾಲಿಡುತ್ತವೆ. ಸಗಣಿ ಮೂತ್ರಾದಿಗಳು ಹರಿಯುವ ಮೋರಿಯಲ್ಲಿ ಅದು ಸಣ್ಣದೇ ಇದ್ದರೂ ಮರೆತೂ ಕಾಲಿಡುವುದಿಲ್ಲ. ಅವಕ್ಕೆ ಅನುಭವ ಜ್ಞಾನ ಇರುತ್ತದೆ. ಅನುಭವ ಜ್ಞಾನವಿಲ್ಲದೆ ಅತ್ಯುತ್ಸಾಹದಿಂದ ಕುಣಿದು ಕಾಲು ಉಳುಕಿಸಿಕೊಂಡ ಕಸ್ತೂರಿಗೆ ಅಯೋಡೆಕ್ಸ್ ಹಚ್ಚಿ ತಿಕ್ಕಿಸಬೇಕಾಯಿತು. ಆಗ ಒಂದು ವಿಚಾರ ಸ್ಫುರಿಸಿತು.

ಕೆಲವು ಸಾಧಕ-ಸಾಧಕಿಯರು, ಸನ್ಯಾಸಿಗಳು ಮಾತನಾಡಲು ಬಂದ ಹೊಸತರಲ್ಲಿ, ಅಥವಾ ಕೀರ್ತಿ ಬಂದ ಹೊಸತರಲ್ಲಿ ಅಜ್ಞಾನಯುಕ್ತವಾದ ಅಹಂನಿಂದ ಮತ್ತು (Over confidence) ಏನೇನೋ ಮಾಡಹೋಗಿ, ಪೆಚ್ಚಾಗಿ ಪಾಠ ಕಲಿಯುತ್ತಾರೆ. ಜೀವನಾನುಭವ ಪಕ್ವವಾದವರು ಗಂಭೀರವಾಗಿ, ಹಿಂದುಮುಂದಿನ ಆಲೋಚನೆಯಿಂದ ಕೆಲಸ ಮಾಡಿದರೆ, ಅನನುಭವಿ ಸಾಧಕರು ಹೊಸದಾಗಿ ರೆಕ್ಕೆ ಬಂದ ಪಕ್ಷಿ ಎಲ್ಲೆಲ್ಲೋ ಹಾರಿ ಬೀಳುವಂತೆ ದುಡುಕಿ ಪೆಟ್ಟುತಿನ್ನುವರಷ್ಟೆ. ಭವಿಷ್ಯತ್ತಿನ ಪರಿಣಾಮದ ಅರಿವೇ ಇಲ್ಲದೆ 'ಕಸ್ತೂರಿ'ಯಂತೆ ಕುಣಿದಾಡಿ ಕಾಲಿಗೆ ಪೆಟ್ಟು ಮಾಡಿಕೊಳ್ಳುವ ಜನರಿಗೆ ಕೊರತೆ ಏನಿರದು.

★

ಐಶ್ವರ್ಯದೊಡನೆ ವಿಶೇಷ ಸಂಬಂಧವನ್ನು ಇಟ್ಟುಕೊಳ್ಳಬಾರದು. ಕಾರಣವಿಷ್ಟೇ ! ಅದು ಹೋದಾಗ ನಮ್ಮ ಗೌರವ ಸಹ ಅದರೊಡನೆಯೇ ಹೋಗುವುದು. ಅದು ಇದ್ದಾಗ ಗೌರವವನ್ನು ಉಳಿಸಿಕೊಳ್ಳಲು ತುಂಬಾ ವ್ಯಯಮಾಡಬೇಕಾಗುತ್ತದೆ.

—ಚಾಣುಕ್ಯ

ಹಣದ ಹುಚ್ಚು ಹಿಡಿದವನಿಗೆ ಹಿರಿಯರಿಲ್ಲ, ಬಳಗವಿಲ್ಲ; ಕಾಮದ ಹುಚ್ಚು ಹಿಡಿದವನಿಗೆ ನಾಚಿಕೆ ಇಲ್ಲ, ಹೆದರಿಕೆ ಇಲ್ಲ; ಹಸಿವೆಯಿಂದ ಕಂಗಾಲಾದವನಿಗೆ ರುಚಿಯಾಗಲೀ, ಹದವಾಗಲೀ ಎಂಬುದಿಲ್ಲ, ಚಿಂತಾಕ್ರಾಂತನಾದವನಿಗೆ ಸುಖವಿಲ್ಲ.

—ವಿಕ್ರಮ ಚರಿತೆ

ಶ್ರೀ ಬಸವ ಭಾರತಿ ನೂತನ ಶಾಲಾ ಕಟ್ಟಡದ ಉದ್ಘಾಟನೆ

—ವರದಿ : ಪೂಜ್ಯ ಮಾತೆ ಗಂಗಾದೇವಿ

ಮಳೆಗಾಲದ ಮೋಡಗಳು ಅಂದು ಸರಿದು ಶುಭ್ರವಾದ ಆಗಸದ ಹಂದರವನ್ನು ಹಾಕಿದ್ದವು. ಆ ಹಂದರದಲ್ಲಿ ತೂಗುತ್ತಿದ್ದವು, ತೇಲುತ್ತಿದ್ದವು ಬಿಳಿಯ ಹಂಸಗಳಂತಹ ಮೇಘಗಳು. ಪಶ್ಚಿಮದ ದಿಶೆಯತ್ತ ಪಯಣಿಸುತ್ತಿದ್ದ ಶುಭ್ರ ಆದರೆ ಸಾತ್ವಿಕ ಗಳಂತಹ ಮೇಘಗಳು. ಪಶ್ಚಿಮದ ದಿಶೆಯತ್ತ ಪಯಣಿಸುತ್ತಿದ್ದ ಶುಭ್ರ ಆದರೆ ಸಾತ್ವಿಕ

ಭಾನು ತನ್ನ ಹೊಂಗಿರಣಗಳನ್ನು ಚೆಲ್ಲಿ ಬಸವಗಂಗೋತ್ರಿಯ ಗಿಡಮರಗಳನ್ನು, ನೆಲ ಜಲಗಳನ್ನು, ಹಸು-ಕರುಗಳನ್ನು ಹೊನ್ನಿನ ಧಾರೆಯಲ್ಲಿ ಮೀಯಿಸುತ್ತ ಜೀವಂತಿಕೆಯನ್ನು ವಿದ್ಯುದಾಲಿಂಗನದಿಂದ ತುಂಬಿದ್ದ. ಬಂದವರನ್ನು ಮುಗಿಲೆತ್ತರಕ್ಕೆ ಬೆಳೆದಿದ್ದ ನೀಲಗಿರಿ ವೃಕ್ಷಗಳು ಶರಣುಗೈದು ಸ್ವಾಗತಿಸುತ್ತಿದ್ದವು. ಒಳಬಂದವರಿಗೆ ಹರಡಿ ಬೆಳೆದಿದ್ದ ತೆಂಗಿನ ವೃಕ್ಷಗಳು ಚಾಮರ ಬೀಸುತ್ತಿದ್ದವು. ಮುಂದೆ ಬಂದಾಗ ಜುಳುಜುಳು ನಾದದೊಡನೆ ಹರಿವ ಬಸವ ಗಂಗಾವಾಹಿನಿ ಹಾಡಿ, ಹಾರೈಸುತ್ತಿದ್ದಳು. ಹೇಮರೆಡ್ಡಿ ಮಲ್ಲಮ್ಮ ಗೋಶಾಲೆಯ ಹಸು ಕರುಗಳು 'ಅಂಬಾ' ಎಂದೊರಲುತ್ತ ಜಯಘೋಷ ಮಾಡುತ್ತಿದ್ದವು. ಅಲ್ಲಲ್ಲೇ ಬೆಳೆದು ನಿಂತ ಹಸಿರು ಹುಲ್ಲಿನ ವಾರಾಶಿ ನೆಲಕ್ಕೆ ರನ್ನಗಂಬಳಿಯನ್ನು ಹಾಸಿತ್ತು.

ಸೋಮವಾರ, ದಿ. 17-8-1981 ರಂದು ಸಂಜೆ ವಿದ್ಯಾಸಚಿವ ಶರಣ ಜಿ.ಬಿ. ಶಂಕರರಾಯರು ವಾಹನದಲ್ಲಿ ಬಂದಿಳಿದಾಗ, ಬಸವಗಂಗೋತ್ರಿ ಇಂಥದೊಂದು ಸುಂದರ ಪರಿಸರದೊಡನೆ ಸ್ವಾಗತಿಸಿತು. ಶಾಲೆಯ ವಿದ್ಯಾರ್ಥಿ ವೃಂದ ಅಚ್ಚುಕಟ್ಟಾದ ಸಮವಸ್ತ್ರಧರಿಸಿ, ಗೌರವ ರಕ್ಷೆ ನೀಡಿ ಬರಮಾಡಿಕೊಂಡಿತು. ಶಾಲಾ ಮುಖ್ಯೋಪಾಧ್ಯಾಯ ಶರಣ ಮುರುಘೇಂದ್ರ ಸ್ವಾಮಿಯವರು ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ಶಾಲಾ ಮಕ್ಕಳ ಸಂದೋಹದೊಡನೆ ಮುಂದೆ ಬಂದ ಸಚಿವರು ಪೂಜ್ಯ ಗುರುದ್ವಯರ ದರ್ಶನ ಪಡೆದರು. ಎಲ್ಲರನ್ನೂ ಮಾರ್ಚ್‌ಫಾಸ್ಟಿನಲ್ಲಿ ಕರೆದೊಯ್ಯಲಾಯಿತು, ಸಭಾಮಂಟಪಕ್ಕೆ. ಶಾಲೆಯ ಕಟ್ಟಡದ ಆರಂಭೋತ್ಸವವನ್ನು ಟೇಪು ಬಿಚ್ಚಿ, ಪರದೆ ಎಳೆದು ನೆರವೇರಿಸಿದ ಸಚಿವರು, ಗುರುದ್ವಯರೊಡನೆ ವೇದಿಕೆಯನ್ನು ಅಲಂಕರಿಸಿದರು. ಶಾಲೆಯ ಮಕ್ಕಳು ಹೂಗುಚ್ಛಗಳನ್ನು ಹಿಡಿದು (Flower Drill) ಮಾಡಿ ತೋರಿಸಿದ್ದು ರಮಣೀಯ ದೃಶ್ಯವಾಗಿತ್ತು. ಮಕ್ಕಳ ಸಾಧನೆಯನ್ನು ನೋಡಿ ಆಗಮಿ

ಸಿದ್ದ ಅತಿಥಿಗಳೆಲ್ಲ ಅತೀವ ಆನಂದ ಮತ್ತು ತ್ವರಿತಗತಿಯಲ್ಲಿ ಸಾಧಿಸಿದ ಪ್ರಗತಿ ಕಂಡು ಆಶ್ಚರ್ಯಪಟ್ಟರು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಶ್ರೀಗಳು ಸಭೆಯ ಅಧ್ಯಕ್ಷತೆ ವಹಿಸಿದರು. ಉದ್ಘಾಟಕರಾಗಿ ಶರಣ ಜಿ. ಬಿ. ಶಂಕರರಾಯರು, ಮುಖ್ಯ ಅತಿಥಿಗಳಾಗಿ ಆರಕ್ಷಕ ಇಲಾಖೆಯ ಸೂಪರಿಂಟೆಂಡೆಂಟ್ ಆರ್. ಎಸ್. ಕಲ್ಯಾಣಶೆಟ್ಟರು, ಮುಖ್ಯ ಭಾಷಣಕಾರರಾಗಿ ಶಾಸಕ ಹೆಚ್. ಗಂಗಾಧರನ್ ವೇದಿಕೆಯನ್ನಲಂಕರಿಸಿದರು. ಸಾಮೂಹಿಕ ಪ್ರಾರ್ಥನೆಯೊಡನೆ ಪೂಜ್ಯ ಮಾತೆಯವರು ಕಾರ್ಯಕ್ರಮ ಆರಂಭಿಸಿದಾಗ, ಶಾಲೆಯ ಮಕ್ಕಳು ಹಿನ್ನೆಲೆಯ ದನಿಕೂಡಿಸಿದಾಗ ಹೊರಟ ನಾದ ಅಲೆಯಲೆಯಾಗಿ ಪರಿಸರವನ್ನು ತುಂಬಿತು. ಪ್ರಾರಂಭದ ಓಂಕಾರದ ಝೇಂಕಾರ ನರನರಗಳನ್ನೂ ಮೀಂಟಿ, ಪುಳಕಿತಗೊಳಿಸಿತು. ಶಿಸ್ತು, ಸ್ವಚ್ಛತೆ, ಪ್ರಾರ್ಥನೆಯ ಗಾಯನ, ವಿಧಾನ ಎಲ್ಲವೂ ಪರಿಣಾಮಕಾರಿಯಾಗಿದ್ದವು.

ಸ್ವಾಗತ ಭಾಷಣ ಮಾಡಿ ಎಲ್ಲರಿಗೂ ಮಾಲಾರ್ಪಣೆ ಮಾಡಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಘುರುಘೇಂದ್ರಸ್ವಾಮಿಯವರು. ವಿದ್ಯಾರ್ಥಿಗಳ ಪರವಾಗಿ ಕುಮಾರಿ ಶೋಭಾ ಸ್ವಾಗತಿಸಿದಳು. ವಿಶ್ವಕಲ್ಯಾಣ ಮಿರ್ಷ ವಿದ್ಯಾ ಸಂಸ್ಥೆಯ ಅಧ್ಯಕ್ಷೆ ಪೂಜ್ಯ ಮಾತಾಜಿಯವರು ಬಸವ ಗಂಗೋತ್ರಿ ಮತ್ತು ಬಸವ ಭಾರತಿ ಬೆಳೆದು ಬಂದ ಬಗೆಯನ್ನು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ವಿವರಿಸಿದರು. ಇಂಥದೊಂದು ಅಮೂಲ್ಯ ಜಾಗವನ್ನು ಕಡಿಮೆ ಬೆಲೆಗೆ ಕೊಟ್ಟ ಹಿಂದಿ ಸಿನಿಮಾ ನಟ ಅಶೋಕಕುಮಾರರ ಔದಾರ್ಯವನ್ನು ಸ್ಮರಿಸಿಕೊಂಡರಲ್ಲದೆ, ಈ ಜಾಗದ ಖರೀದಿಗೆ ಸಹಾಯಗೈದ ಮೈಸೂರು, ಮಂಗಳೂರು ಜನತೆಯನ್ನು ಮತ್ತು ಶಾಲಾ ಕಟ್ಟಡಕ್ಕೆ ವಿಶೇಷ ಧನಸಹಾಯ ಗೈದ ಬಳ್ಳಾರಿ, ದಾವಣಗೆರೆಯ ಜನರನ್ನೂ ಕೊಂಡಾಡಿದರು. ಅಂಥ ದಾನಿಗಳಿಗೆ ಅಕ್ಟೋಬರ್ 2 ನೇ ತಾರೀಖಿನಂದು ವಿಶೇಷ ಸತ್ಕಾರ ಮಾಡಲಿರುವುದಾಗಿ ನುಡಿದರು. ತಮ್ಮ ಸಂಸ್ಥೆಯ ಮುಂದಿನ ಯೋಜನೆಗಳನ್ನು ಕುರಿತು ಮಾತನಾಡಿದರು.

ಮುಖ್ಯ ಅತಿಥಿಗಳೂ, ಉದ್ಘಾಟಕರೂ ಆಗಿ ವೇದಿಕೆಯನ್ನಲಂಕರಿಸಿದ್ದ ವಿದ್ಯಾಮಂತ್ರಿ ಶರಣ. ಜಿ. ಬಿ. ಶಂಕರರಾಯರು ತುಂಬು ಹೃದಯದಿಂದ ಬಸವ ಭಾರತಿಯ ಪ್ರಗತಿಯನ್ನು ಬಣ್ಣಿಸಿದರು.

ಹಿಂದಿನ ವರ್ಷ ಶಾಲೆ ತೆರೆಯಲು ಒಪ್ಪಿಗೆ ನೀಡಿದುದನ್ನು ನೆನಪಿಸಿಕೊಂಡರು. "ಆಗಾಗ ಮೈಸೂರು ರಸ್ತೆಯಲ್ಲಿ ಹೋಗುವಾಗ ಇತ್ತ ಕಣ್ಣು ಹಾಕುತ್ತಿದ್ದೆ. ಇಲ್ಲಿಯ

ಭೂಮತೆ, ಭವ್ಯತೆ, ಒಳಗೆ ಬರದ ಹೊರತು ತಿಳಿಯದು. ಹೊರಗಿನಿಂದಲೇ 'ಎಷ್ಟು ಸಣ್ಣ ಜಾಗ! ಹೇಗೆ ನಡೆಸುತ್ತಿರಬಹುದು?' ಎಂದುಕೊಂಡು ಹೋಗುತ್ತಿದ್ದೆ. ಇಂಥ ಸುಂದರ ಪರಿಸರ, ಪೂಜ್ಯ ಗುರುಗಳು, ಪೂಜ್ಯ ಮಾತೆಯವರಂತಹ ಮಹಿಮಾನ್ವಿತರ ಮಾರ್ಗದರ್ಶನ ಸಿಕ್ಕಲು ಎಷ್ಟು ಪುಣ್ಯ ಬೇಕೋ! ಗುರುದ್ವಯರು ನಾಡಿನಾದ್ಯಂತ ಸಂಚರಿಸಿ ವಯಸ್ಕರಿಗೆ ಜ್ಞಾನದಾಸೋಹ ಮಾಡಿದುದನ್ನು ಭಾಗಿಯಾಗಿ ಅರಿತಿದ್ದೇನೆ. ಆದರೀಗ ಅವರ ಕ್ರಿಯಾಶೀಲತೆ ಕಂಡು ಬೆರಗಾಗಿದ್ದೇನೆ. ಇಷ್ಟು ಅಲ್ಪ ಅವಧಿಯಲ್ಲಿ ಅನೇಕ ರಾಜ್ಯಗಳ, ಅನೇಕ ಭಾಷೆಗಳ ವಿದ್ಯಾರ್ಥಿ ವೃಂದವನ್ನು ಆಕರ್ಷಿಸಿರುವ ಈ ಬಸವ ಗಂಗೋತ್ರಿ ವಿಶ್ವ ಗಂಗೋತ್ರಿಯಾಗಲಿ, ಎಂದು ಹೃದಯ ತುಂಬಿ ಹಾರೈಸಿದರು.

ಆರಕ್ಷಕ ಇಲಾಖೆಯ ಎಸ್. ಪಿ. ಯವರಾದ ಶರಣ. ಆರ್. ಎಸ್. ಕಲ್ಯಾಣ ಶೆಟ್ಟರು ವಿದ್ಯಾರ್ಥಿ ಸಂಘದ ಉದ್ಘಾಟನೆ ಮಾಡಿ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮತ್ತು ಕಳೆದ ವರ್ಷ ನಡೆದ ಪರೀಕ್ಷೆಯಲ್ಲಿ ತರಗತಿಗಳಲ್ಲಿ ಮೊದಲಿಗರಾಗಿ ತೇರ್ಗಡೆ

ಯಾದ 1. ಆರ್. ಎಂ. ಮೃತ್ಯುಂಜಯ (5ನೇ ತರಗತಿ ಕನ್ನಡ ಮಾಧ್ಯಮ)
2. ಸುಧೀರ್ ನಾಯರ್ (5ನೇ ತರಗತಿ ಇಂಗ್ಲಿಷ್ ಮಾಧ್ಯಮ)
3. ಕೆ. ಜಿ. ಶ್ರೀನಿವಾಸ (6ನೇ ತರಗತಿ ಕನ್ನಡ ಮಾಧ್ಯಮ)
4. ಜಿ. ಬಿ. ಮಹೇಶ (6ನೇ ತರಗತಿ ಇಂಗ್ಲಿಷ್ ಮಾಧ್ಯಮ)
5. ಬಿ. ಹೆಚ್. ರವೀಂದ್ರಕುಮಾರ್ (8ನೇ ತರಗತಿ ಕನ್ನಡ ಮಾಧ್ಯಮ)
6. ಜಿ. ಎನ್. ಉತ್ತಪ್ಪ (8ನೇ ತರಗತಿ ಇಂಗ್ಲಿಷ್ ಮಾಧ್ಯಮ)

ಅವರುಗಳಿಗೆ ಶ್ರೀ ಅಮರಾವತಿ ಗೋವಿಂದಶೆಟ್ಟಿ, ದಾವಣಗೆರೆ ಅವರ ಸ್ಮಾರಕ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿದರು. ದಾವಣಗೆರೆಯ ಗ್ರಂಥಿ ಅಂಗಡಿಯ ಶ್ರೀ ಅಮರಾವತಿ ಗೋವಿಂದಶೆಟ್ಟಿಯವರ ಅಪೇಕ್ಷೆಯಂತೆ ಅವರ ಹೆಸರಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಗುತ್ತಿದೆ. ದೂರದಿಂದಲೇ ವಿಶ್ವಕಲ್ಯಾಣ ಮಿರ್ಷನ ಮತ್ತು ಇದರ ಪ್ರಗತಿಯ ಬಗ್ಗೆ ತಿಳಿದಿದ್ದ ಅವರು ಪ್ರತ್ಯಕ್ಷವಾಗಿ ಇಲ್ಲಿ ನಡೆದಿರುವ ಅಗಾಧ ಕೆಲಸ ಕುರಿತು ವಿಸ್ಮಯ ವ್ಯಕ್ತಪಡಿಸಿದರು. "ಮಾನವ ಶಕ್ತಿಯಿಂದ ನಡೆದ ಕೆಲಸವಿದಲ್ಲ; ದೈವೀಶಕ್ತಿಯಿಂದ ನಡೆದಿರುವಂತಹುದು. ಸದ್ಗುರುಗಳ ಮತ್ತು ಮಾತೆಯವರ ದಿವ್ಯಶಕ್ತಿಯ ಬಲದಿಂದ ಜನಾಂಗ ನಿರ್ಮಾಣದ ಕೆಲಸ ನಡೆದಿದೆ. ಇದೊಂದು ಅಪರೂಪದ ಸಾಧನೆ" ಎಂದು ಸಂತೋಷಿಸಿದರು. ಅಪಾರ ವಾಗ್ಮಿಗಳು, ಜನಪ್ರಿಯ ಶಾಸಕರೂ ಆದ ಶರಣ. ಹೆಚ್. ಗಂಗಾಧರನ್ನರು ತಮ್ಮ ಅಸ್ಖಲಿತವಾಣಿಯಿಂದ ಹಿತವಚನ ನೀಡಿದರು. "ಪರಮ ಪೂಜ್ಯ ಸದ್ಗುರುಗಳನ್ನು ಮತ್ತು ಪೂಜ್ಯ ಮಾತಾಜಿಯವರನ್ನು ಹತ್ತಾರು ವರ್ಷಗಳಿಂದ ಕಂಡಿದ್ದೇನೆ, ಒಡನಾಡಿದ್ದೇನೆ. ವಿಶೇಷ

ವಾದ ಆತ್ಮ ಸಿದ್ಧಿ ಪಡೆದ ಮಹಾಂತರಿವರು. ಯಾವುದೇ ಮಠ-ಪೀಠ, ಆಸ್ತಿ-ಪಾಸ್ತಿ ಇಲ್ಲದೆ ದೈವೀದತ್ತ ದೇಣಿಗೆಯಾದ ವಾಗ್ಮಿತ್ವ ಮತ್ತು ಆತ್ಮ ಬಲದಿಂದಲೇ ಇಂಥ ದೊಂದು ಪವಾಡ ಸದೃಶ್ಯ ಸಂಸ್ಥೆ ಕಟ್ಟಿದ ಪುಣ್ಯಪುರುಷರು. ಇವರ ಸಾಧನೆ ಅಪೂರ್ವ. ಕರ್ನಾಟಕದ ನಾಲ್ಕು ವಿಶ್ವವಿದ್ಯಾಲಯಗಳು, ನೂರಾರು ಕಾಲೇಜುಗಳು ಕೂಡಿ ಕೊಡಲಾಗದಷ್ಟು ಉತ್ಕೃಷ್ಟ ಜ್ಞಾನವನ್ನು ಜನ ಸಾಮಾನ್ಯರಿಗೆ ಧಾರೆಯೆರೆದಿದ್ದಾರೆ. ಇವರ ಮುಕ್ತ ವಿಶ್ವವಿದ್ಯಾಲಯವಾದ (open university) ಪ್ರವಚನ ಒಂದು ಚಲಿ ಸುವ ವಿಶ್ವವಿದ್ಯಾಲಯ. ಸಾಮಾನ್ಯ ಅಕ್ಷರ ಜ್ಞಾನವೂ ಇಲ್ಲದವರಿಂದ ಹಿಡಿದು ವಿಶೇಷ ಪಂಡಿತೋತ್ತಮರ ವರೆಗೆ ಎಲ್ಲರೂ ಬಂದು ಕುಳಿತು ಅಧ್ಯಾತ್ಮದ ಅಮೃತಧಾರೆಯಲ್ಲಿ ಪುನೀತರಾಗುತ್ತಾರೆ. ತಮ್ಮ ಬದುಕಿನ ಬವಣೆಗಳನ್ನು ಕಳೆದುಕೊಂಡು, ಬನ್ನಗಳನ್ನು ತೊಡೆದುಕೊಂಡು ಪುನರ್ಜನ್ಮ ಹೊಂದಿದವರಾಗುತ್ತಾರೆ. ಇವರು ಶಾಲೆಯನ್ನು ಅಂದ ವಾಗಿ, ಅಚ್ಚುಕಟ್ಟಾಗಿ ನಡೆಸಿರುವುದೇನೋ ಪ್ರಶಂಸನೀಯ. ಆದರೆ ಎಲ್ಲಿ ಇದರಲ್ಲೇ ತೃಪ್ತರಾಗಿ ಬಯಲು ವಿಶ್ವವಿದ್ಯಾಲಯವಾದ ಪ್ರವಚನ ಕಾರ್ಯಕ್ರಮ ನಿಲ್ಲಿಸುವರೋ ಎಂಬ ಭಯ ಸದಾ ಕಾಡುತ್ತದೆ. ಅಂತಾಗಬಾರದೆಂದು ಆಗಾಗ ನಾನು ಎಚ್ಚರಿಸುವೆ. ಯಾರಿಗೂ ಭಾರವಾಗದೆ, ಭಾರ ಮಾಡದೆ ಸಹಸ್ರಾರು ಮುಮುಕ್ಷುಗಳಿಗೆ, ಜಿಜ್ಞಾಸು ಗಳಿಗೆ ಆತ್ಮಜ್ಞಾನ ನೀಡುವ ಇವರ ಕಾರ್ಯ ಅಮೂಲ್ಯವಾದುದು. ವರ್ಷಾಧಾರೆ ಯಾದಲ್ಲಿ ಭೂಮಿ ಹಸಿರಿನಿಂದ ನಗುವಂತೆ, ಇವರು ತಮ್ಮ ವಚನಾಮೃತ ಹರಿಸಿದಲ್ಲಿ ಜೀವಂತಿಕೆ, ಧರ್ಮ ಪ್ರಜ್ಞೆ ತುಂಬಿ ತುಳುಕುವುದು. ಅಂದಿನ ಅನುಭವಮಂಟಪ ನಾವು ಕಂಡಿಲ್ಲ; ಬಸವೇಶ್ವರರನ್ನು ಕಾಣಲಿಲ್ಲ. ಆದರೆ ತಮ್ಮ ಪ್ರವಚನಗಳಿಂದ ನಮ್ಮ ಹೃದಯದಲ್ಲಿ ಅನುಭವಮಂಟಪವನ್ನು ನಿರ್ಮಿಸಿ, ಬಸವೇಶ್ವರರನ್ನು ಪ್ರತಿಷ್ಠಾಪಿಸುವ ಈ ಜ್ಞಾನ ಶಿಲ್ಪಿಗಳಿಗೆ ಎಷ್ಟು ನಮನವನ್ನರ್ಪಿಸಿದರೂ ಅಲ್ಪವೆ! ವೀರ ವಿರಾಗಿಣಿ ಅಕ್ಕಮಹಾದೇವಿ, ಪ್ರಭುದೇವರು ಮುಂತಾದವರು ಕದಳೀಬನದಂತಹ ದುರ್ಗಮ ಪ್ರದೇಶಗಳನ್ನು ಹೊಕ್ಕರು. ಪುಣ್ಯಕ್ಕೆ ಈ ಪೂಜ್ಯ ಗುರುದ್ವಯರು ಹಾಗೆ ಮಾಡದೆ ಈ ನರವಿಂಧ್ಯದಲ್ಲಿದ್ದು ಇಲ್ಲಿನ ಜನತೆಯನ್ನು ಸುಧಾರಿಸುವ ಕಾರ್ಯಕ್ಕೈಗೊಂಡಿದ್ದು ನಮ್ಮೆಲ್ಲರ ಪುಣ್ಯ. ಇವರ ಕಾರ್ಯಸಾಧನೆಯ "ಬಸವ ಗಂಗೋತ್ರಿ". ಶಾಂತಿನಿಕೇತನ ದಂತೆ ಜಗತ್ಪ್ರಸಿದ್ಧವಾಗಲೆಂದು ಹಾರೈಸೋಣ, ಆತ್ಮ ಜ್ಞಾನದ ಕೇಂದ್ರವಾಗಿ, ಆತ್ಮ ಶಾಂತಿಯ ತಾಣವಾಗಿ ಇದು ಸರ್ವಾಂಗ ಸುಂದರವಾಗಿ ಬೆಳೆಯಲಿ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿ ಗಳವರು ತಮ್ಮ ಕಂಚಿನ ಕಂಠದಲ್ಲಿ ಆಶೀರ್ವಚನ ದಯಪಾಲಿಸುತ್ತ, "ರಾಷ್ಟ್ರವೆಂಬ ರೈಲು ಸುಭದ್ರವಾಗಿ ಓಡಬೇಕಾದರೆ ರಾಷ್ಟ್ರ ಪ್ರೇಮ ಮತ್ತು ಧರ್ಮಶ್ರದ್ಧೆ ಎಂಬ ಎರಡು ಹಳಿಗಳು ಅತ್ಯಾವಶ್ಯಕ. ಇವೆರಡನ್ನು ಬೆಳೆಸುವುದು ನಮ್ಮ ಇಂದಿನ ಆವಶ್ಯಕತೆ,

ಕಟ್ಟಬೇಕಾದರೆ ಜಾತಿ ವರ್ಣ ವರ್ಗರಹಿತವಾದ ಒಂದು ಆದರ್ಶ ಸಮಾಜವನ್ನು ಕಟ್ಟಬೇಕಾದರೆ. ಸದಾ ಬೇಕಾದ ಪಂಚ ಆಚಾರಗಳಾದ ಲಿಂಗಾಚಾರ (Religious democracy), ಸದಾ ಚಾರ (Economic stability), ಶಿವಾಚಾರ (social equality), ಗಣಾಚಾರ (Fighting capacity), ಮತ್ತು ಭೃತ್ಯಾಚಾರ (Service mentality) ಗಳನ್ನು ಇಂದು ಅಳವಡಿಸಬೇಕಾಗಿದೆ. ಬಸವ ಭಾರತಿ ವಿದ್ಯಾಲಯ ದೈಹಿಕ, ಬೌದ್ಧಿಕ ಪಟುತ್ವ ಗಳನ್ನು, ಆಧ್ಯಾತ್ಮಿಕ ಅಭೀಪ್ಸೆಯನ್ನು ಉತ್ತಮ ಶಿಕ್ಷಣದೊಡನೆ ನೀಡಬಯಸುತ್ತದೆ. ನೀರಿನ ಸಂಗ್ರಾಹಕದಲ್ಲಿ ಉತ್ತಮವಾಗಿ ಶೋಧಿಸಿದ ನೀರನ್ನು ಸಂಗ್ರಹಿಸಿದ್ದರೆ ಮಾತ್ರ ಜನತೆಗೆ ಒಳ್ಳೆಯ ನೀರು ಸಿಗುವಂತೆ, ಶಾಲೆ ಕಾಲೇಜುಗಳ ಮುಖಾಂತರ ಆದರ್ಶ ವಿದ್ಯಾರ್ಥಿಜನಾಂಗ ನಿರ್ಮಾಣವಾದರೆ ಮಾತ್ರ ಒಳ್ಳೆಯ ನಾಡನ್ನು ಕಟ್ಟಲು ಸಾಧ್ಯ. ಆ ಮನೀಷೆ ಹೊತ್ತು ಇಂದು ಬಸವ ಭಾರತಿ ವಿದ್ಯಾಲಯ ನಿರ್ಮಾಣ ಗೊಂಡಿದೆ" ಎಂದು ಶ್ರುತಪಡಿಸಿದರು.

ಶಿಕ್ಷಕ ಶಂಕರಪ್ರಸಾದರಿಂದ ಶರಣು ಸಮರ್ಪಣೆ ನೆರವೇರಿತು. ಅಕ್ಕಮಹಾದೇವಿ ವಿದ್ಯಾಲಯದ ನರ್ಸರಿ ಮತ್ತು ಲೋಯರ್ ಪ್ರೈಮರಿ ಮಕ್ಕಳಿಂದ ಮತ್ತು ಬಸವ ಭಾರತಿ ವಿದ್ಯಾಲಯದ ವಿದ್ಯಾರ್ಥಿ ವೃಂದದಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿ ದವು. ಪ್ರಬಂಧ ಸ್ಪರ್ಧೆ, ಆಶುಭಾಷಣ, ಚರ್ಚಾಸ್ಪರ್ಧೆ ಎಲ್ಲದರಲ್ಲಿಯೂ ಗೆದ್ದ ವಿದ್ಯಾರ್ಥಿ ವೃಂದಕ್ಕೆ ಬಹುಮಾನ ವಿತರಣೆ ಮಾಡಲಾಯಿತು.

ಆಗಮಿಸಿದ ಅತಿಥಿಗಳು ಬಸವ ಭಾರತಿ ವಿದ್ಯಾಲಯದ ಶಾಲಾಕಟ್ಟಡ, ವಸತಿ ನಿಲಯ, ಪ್ರಸಾದ ನಿಲಯ, ಗೋಶಾಲೆ, ನಿಸರ್ಗ ಸಂಪತ್ತು ಎಲ್ಲ ಕಂಡು ಹರ್ಷಿಸಿದರ ಲ್ಲದೆ ಅಲ್ಪಾವಧಿಯಲ್ಲಿ ಸಾಧಿಸಿದ ಪ್ರಗತಿಯನ್ನು ಕಂಡು ಮೆಚ್ಚುಗೆ ವ್ಯಕ್ತ ಪಡಿಸಿದರು.

ದಾನಿಯು ಕೆಲವೊಮ್ಮೆ ಕೀಳು ಜಾತಿಯವನಿದ್ದರೂ ಜನರು ಅವನನ್ನು ಆಶ್ರ ಯಿಸುವರು ಕೃಪಣನು ಉತ್ತಮ ಜಾತಿಯವನಿದ್ದರೂ ಅವನನ್ನು ಎಲ್ಲರೂ ತೊರೆ ಯುವರು ನೀರಡಿಸಿದವನು ಹಿರಿದಾದ ಸಾಗರವನ್ನು ಬಿಟ್ಟು, ಕಿರಿದಾದ ಭಾವಿಯನ್ನಾ ಶ್ರಯಿಸುವುದಿಲ್ಲವೇ.

—ಶಾರ್ಙ್ಗಧರ ಪದ್ಧತಿ

ಅಭಾವ ವೈರಾಗ್ಯ

ಅಶಕ್ತನು ಯಾವಾಗಲೂ ಸಾಧುವಾಗಿರುತ್ತಾನೆ; ಕುರೂಪಿ ಸ್ತ್ರೀಯು ಪತಿವ್ರತೆ ಯಾಗಿರುತ್ತಾಳೆ. ರೋಗಿಷ್ಟನು ಹೆಚ್ಚು ದೈವಭಕ್ತನಾಗಿರುತ್ತಾನೆ. ಹಣವಿಲ್ಲದ ಬಡವನು ಅವಿವಾಹಿತನಾಗಿರುತ್ತಾನೆ.

—ಹಿತೋಪದೇಶ

ಸದ್ಗುರು ಶ್ರೀ ಲಿಂಗಾನಂದ ಸ್ವಾಮೀಜಿ

ಮಮತೆಯ ಮಕ್ಕಳೇ,

ಶ್ರಾವಣ ಮಾಸ ಬಂತೆಂದರೆ ಹಬ್ಬಗಳ ಸರಮಾಲೆ. ಸಿಹಿ ತಿನ್ನಲು ವಿಪರೀತ ಅವಕಾಶ, ಈ ಅಭಾವದ ಕಾಲದಲ್ಲಿ ಸಕ್ಕರೆಯನ್ನು ಹೇಗಾದರೂ ದೊರಕಿಸಿಕೊಂಡರೆ ಮಾತ್ರ. ಭಾದ್ರಪದ ಶ್ರಾವಣದ ಬೆನ್ನಿಗಂಟೆ ಬರುತ್ತಿದ್ದಂತೆಯೇ ನಿಮಗೆಲ್ಲ ಕಡುಬು, ಕಜ್ಜಾಯ. ಇನ್ನೊಂದು ಕಡೆ ಕಿವಿ ಕೊರೆತ. ಓಣಿಗೊಂದು ಕೇರಿಗೊಂದು ಮೈಕನ್ನು ಹಚ್ಚಿ ಹುಡುಗರು, ಯುವಕರು, ಮುದುಕರು ಗಣೇಶೋತ್ಸವ ಆಚರಿಸುವುದರಿಂದ ಹಬ್ಬ ಗಳ ಬಗ್ಗೆ ಇರಬೇಕಾದ ಪೂಜ್ಯ ಭಾವ, ಪಾವಿತ್ರ್ಯತೆ, ಗಾಂಭೀರ್ಯ ಇಲ್ಲವಾಗಿ ಇದೊಂದು ದುಡ್ಡೆತ್ತುವ ತಂತ್ರವಾಗುತ್ತಿದೆ. ಇದು ಹೀಗಾಗದೆಯೇ ಹಬ್ಬಗಳಂದು ಮಹಾತ್ಮರ, ಪುಣ್ಯಪುರುಷರ ಜೀವನ, ಸಾಧನೆ, ಸಂದೇಶ ಕುರಿತು ಚಿಂತಿಸಬೇಕು.

ಗಣೇಶ ಚತುರ್ಥಿಯಂದು ಪರಮ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾ ಸ್ವಾಮಿಗಳ ಹುಟ್ಟು ಹಬ್ಬ. 14-9-1931 ರಂದು ಹುಟ್ಟಿದ ಪೂಜ್ಯ ಸ್ವಾಮೀಜಿ ಯವರಿಗೆ ಇದೇ 3-9-1981 ಕ್ಕೆ ಐವತ್ತು ವರ್ಷಗಳು. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಹುಟ್ಟುಹಾಕಿದ ಪೂಜ್ಯ ಸ್ವಾಮೀಜಿಯವರು ಕ್ರಾಂತಿ ಪುರುಷರು. ಪೂಜ್ಯ ಗುರೂಜಿಯವರು ಹುಟ್ಟಿದ ತಾಣ, ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೋಕಿನಲ್ಲಿರುವ ಮನಗೂಳಿ. ತಂದೆ ಮಲ್ಲಪ್ಪ ಕಪ್ಪರದ, ತಾಯಿ ಕಲ್ಲಮ್ಮ. ತಾಯಿತಂದೆ ಇಟ್ಟ ಹೆಸರು ಸಂಗಮೇಶ.

ಶಿಶುವಾಗಿ ಸಂಗಮೇಶ ಬಹಳ ಮುದ್ದಾಗಿದ್ದ. ಚೊಚ್ಚಲ ಮಗುವಾಗಿದ್ದುದರಿಂದ ತಾಯಿತಂದೆಯರ ಮಮತೆಯ ಅಧಿಕ ಪಾಲನ್ನು ಪಡೆದು ಬೆಳೆದ. ಚುರುಕು ಬುದ್ಧಿ, ಗುಣವಂತಿಕೆ, ಮುಂದಾಳುತ್ವದ ಗುಣಗಳನ್ನು ಹೊಂದಿದ್ದ ಬಾಲಕ ಅತ್ಯಂತ ಪ್ರಿಯ, ತನ್ನ ಶಿಕ್ಷಕರು ಮತ್ತು ಸಹಪಾಠಿಗಳಿಗೆ. ತಕ್ಕಮಟ್ಟಿಗೆ ಅನುಕೂಲವಾಗಿದ್ದ ಆರ್ಥಿಕ ಸ್ಥಿತಿ ಹೊಂದಿದ್ದ ತಂದೆ ಮಲ್ಲಪ್ಪನವರು ವ್ಯಾಪಾರದಲ್ಲಿ ಸೋಲನ್ನನುಭವಿಸಿದರು. ವ್ಯಾಪಾರವನ್ನು ಮುಖ್ಯ ವೃತ್ತಿಯನ್ನಾಗಿರಿಸಿಕೊಂಡಿದ್ದ ಅವರು ಗಿರಾಕಿಗಳಿಗೆ ಔದಾರ್ಯ ದಿಂದ ಉದ್ದರಿಯಾಗಿ ಸಾಮಾನು ಕೊಡುವುದು; ವಾಪಸ್ಸು ಪಡೆಯಲು ಒತ್ತಾಯಿಸ ದಿರುವುದು. ಇದರಿಂದಾಗಿ ಹಣವು ಸರಿಯಾಗಿ ಸಂದಾಯವಾಗದೆ ಹೋಯಿತು.

ಇಂಥ ವ್ಯವಹಾರಿಕ ಪ್ರಜ್ಞೆಯೊಡನೆ ಮೂಢ ನಂಬಿಕೆ ಬೇರೆ ಚೆನ್ನಾಗಿ ಬೇರೂರಿತ್ತು. ಸುಗ್ಗಿಯ ಕಾಲದಲ್ಲಿ ಕಣಮಾಡಿದಾಗ, ಧಾನ್ಯ ಮಾರಿದಾಗ ಗಿರಾಕಿಗಳಿಂದ ಹಣವನ್ನು ಪಡೆಯಲು ಹೋಗಬೇಕಾಗುತ್ತಿತ್ತು. ಆಗೆಲ್ಲ ದಾರಿಯಲ್ಲಿ ಶಕುನ ನೋಡುತ್ತಿದ್ದರು. ಅಪಶಕುನವಾದರೆ ಮನೆಯಿಂದ ಹೊರಡುತ್ತಲೇ ಇರಲಿಲ್ಲ; ಹೊರಟವರೂ ವಾಪಸ್ಸಾ ಗುತ್ತಿದ್ದರು. ಹೀಗಾಗಿ ಬಹಳಷ್ಟು ಹಣ ವಸೂಲಾಗದೇ ಉಳಿಯಿತು, ಮತ್ತು ನಷ್ಟ ವಿಪರೀತವಾಗತೊಡಗಿತು. ಆರ್ಥಿಕ ತೊಂದರೆಯೊಡನೆ, ಮಕ್ಕಳ ಸಂಖ್ಯೆಯೂ ಬೆಳೆದು ಮಾನಸಿಕವಾಗಿ ಹತಾಶರಾಗತೊಡಗಿದರು.

ಇಂಥ ತೊಂದರೆಯ ಮಧ್ಯದಲ್ಲಿಯೂ ದೇವರು ಕೊಟ್ಟಿದ್ದ ವರವೆಂದರೆ ಸಂಗಮೇಶನ ಬೌದ್ಧಿಕ ಪಟುತ್ವ. ತನ್ನ ಬುದ್ಧಿವಂತಿಕೆ ಮತ್ತು ಉತ್ತಮ ವ್ಯಾಸಂಗ ದಿಂದಾಗಿ ಸ್ಕಾಲರ್‌ಷಿಪ್ ಪರೀಕ್ಷೆಯಲ್ಲಿ ಬಿಜಾಪುರ ಜಿಲ್ಲೆಗೇ ಮೊದಲಿಗನಾಗಿ ತೇರ್ಗಡೆ ಯಾದ ಸಂಗಮೇಶ, ವಿದ್ಯಾರ್ಥಿವೇತನವನ್ನು ಪಡೆದುದೇ ಅಲ್ಲದೆ ವಾರಾನ್ನವನ್ನುಂಡು ಓದು ಮುಂದುವರಿಸಿದ. ಉಳ್ಳವರಿಂದ ಬೇಡಿ ಪರೀಕ್ಷೆಗಾಗಿ ಹಣ ಸಂಗ್ರಹಿಸಿ, ಕೆಲವೊಮ್ಮೆ ಫ್ರೀ ಬೋರ್ಡಿಂಗ್‌ಗಳಲ್ಲಿ ಓದುತ್ತ, ಸಾರ್ವಜನಿಕ ನಲ್ಲಿಯಲ್ಲಿ ಸ್ನಾನ ಮಾಡುತ್ತ, ಸಾರ್ವಜನಿಕ ವಿದ್ಯುದ್ದೀಪಗಳ ಕೆಳಗೆ ಅಧ್ಯಯನಿಸುತ್ತ, ಎಲ್ಲ ಅನುಕೂಲತೆಗಳನ್ನು ಪಡೆದು ಓದುತ್ತಿದ್ದ ಶ್ರೀಮಂತರ ಮಕ್ಕಳನ್ನು ವಿದ್ಯಾಭ್ಯಾಸದಲ್ಲಿ ಹಿಂದಕ್ಕೆ ಹಾಕಿ ತೇರ್ಗಡೆಯಾಗುತ್ತಿದ್ದನು.

ಸಂಗಮೇಶನಿಗೆ ಆಟಪಾಟ, ಭಾಷಣ-ಆಶುಭಾಷಣ, ಪ್ರಬಂಧ ರಚನೆ-ಚರ್ಚಾ ಗೋಷ್ಠಿ ಎಲ್ಲದರಲ್ಲೂ ಮೀಸಲಿಟ್ಟ ಸ್ಥಾನ. ಇಂಥ ಸಾಹಸ ಪ್ರವೃತ್ತಿಯ ಜೊತೆಗೆ ಅಪಾರ ದಯಾಶೀಲತೆ. ರಜಾ ಕಾಲದಲ್ಲಿ ಮನೆಗೆ ಹೋಗಿ ಬರುವಾಗ, ಅಥವಾ ಊರಿನವರು ಯಾರಾದರೂ ಬರುವಾಗ ತಾಯಿ ಕೊಟ್ಟ ರೊಟ್ಟಿ-ಚಟ್ನಿಗಳನ್ನೇ ಅನ್ಯ ರೊಡನೆ ಹಂಚಿಕೊಂಡುಣ್ಣುವ ಔದಾರ್ಯ. ತಾನು ಭಿಕ್ಷೆ ಎತ್ತಿ ಸಂಗ್ರಹಿಸಿದ ಮೊತ್ತವು ಜಾಸ್ತಿ ಉಳಿದರೆ ಅದರಲ್ಲೇ ಇನ್ನೋರ್ವ ಬಡಬಾಲಕನಿಗೆ ಪರೀಕ್ಷಾ ಶುಲ್ಕ ನೀಡುವ ಸಹೃದಯತೆ.

ಅಡೆತಡೆಗಳ ಓಟ (Hurdle race) ದ ಸ್ಪರ್ಧೆಗಳಲ್ಲಿ ಯಶಸ್ವಿಯಾಗಿ ಜಯಶೀಲ ನಾಗುತ್ತಿದ್ದ ಸಂಗಮೇಶ ಬದುಕಿನ ತಾಡನಗಳ ಮಧ್ಯದಲ್ಲಿಯೂ ಜಯಶೀಲನಾಗು ತ್ತಿದ್ದ ಕಾಠಿಣ್ಯದ ಕಾರ್ಪಣ್ಯದ ಬದುಕಿನ ಮಧ್ಯದಲ್ಲಿಯೂ ಎದೆಗೆಡದೆ ಮುನ್ನಡೆವ ಉತ್ಸಾಹ, ಕುಗ್ಗದ ಧೈರ್ಯ! ವಿಜಾಪುರ, ಬಾಗಿಲುಕೋಟೆಗಳಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿ, ಹೆತ್ತವರಿಂದ ಯಾವ ಸಹಾಯವನ್ನೂ ನಿರೀಕ್ಷಿಸದೆ ಸ್ವಂತ ಪರಿಶ್ರಮದ ಮೇಲೆಯೇ ಕಾಲೇಜಿನ ಕಲಿಕೆಯಲ್ಲೂ ತೊಡಗಿದ. ಕಾಲೇಜು

ವಿದ್ಯಾಭ್ಯಾಸಕ್ಕೆ ಬೆಳಗಾಂವಿಗೆ ಹೋದುದಾಯಿತು. ತತ್ತ್ವಜ್ಞಾನ ಮುಖ್ಯ ವಿಷಯ
ದೊಡನೆ ಬಿ. ಎ. ಆನರ್ಸ್ ಓದಲು ಆರಂಭಿಸಿದ ಸಂಗಮೇಶ. ಬಾಳಿನ ಬನ್ನಗಳು
ಅಧಿಕಗೊಂಡಂತೆ, ಪರಿಸರದ ಕಷ್ಟ-ಕಾರ್ಪಣ್ಯಗಳನ್ನು ಕಂಡಂತೆ, ಧರ್ಮ-ದೇವರುಗಳ
ಬಗ್ಗೆ ಜಿಗುಪ್ಸೆ, ರೋಷ ಮೊಳೆಯತೊಡಗಿದವು. ಬಡತನದ ವಿರುದ್ಧ ಹೋರಾಟ,
ಬಡವರ ಬಗ್ಗೆ ಅನುಕಂಪ ಅಧಿಕಗೊಂಡಂತೆಲ್ಲ ಕಾರ್ಲ್‌ಮಾರ್ಕ್ಸ್‌ಪ್ರಿಯನಾಗಿ,
ನಾಸ್ತಿಕವಾದ ನೆಲೆಯೂರಿತು ಸಂಗಮೇಶನಲ್ಲಿ. ಇಂಥ ಪ್ರಸಂಗದಲ್ಲೇ ತತ್ತ್ವಜ್ಞಾನದ
ಅಧ್ಯಾಪಕರಾದ ಶ್ರೀ ರಾಜಗೋಪಾಲರಿಂದ ಸಂಗಮೇಶನ ವಿಚಾರಧಾರೆಗೊಂದು ತಿರುವು
ಬಂದಿತು. ತತ್ತ್ವಜ್ಞಾನ ಪ್ರಾಚಾರ್ಯರಾದ ಶ್ರೀ ರಾಜಗೋಪಾಲರು ಕೇವಲ ಪಾಠ
ಮಾಡಲಿಕ್ಕಷ್ಟೇ ಅಲ್ಲ; ವಾದವಿವಾದಕ್ಕನಿತೇ ಅಲ್ಲ ನಿಜಜೀವನದಲ್ಲಿಯೂ ಅಧ್ಯಾತ್ಮ
ಶ್ರದ್ಧೆಯುಳ್ಳವರು, ತತ್ತ್ವಜ್ಞಾನಿಗಳು. ಒಮ್ಮೆ ಶ್ರೀ ರಾಜಗೋಪಾಲರೊಡನೆ
ದೇವರಿಲ್ಲವೆಂದು ಚರ್ಚೆಗಿಳಿದ ಸಂಗಮೇಶನ ನಾಸ್ತಿಕ ವಿಚಾರಧಾರೆ ನುಚ್ಚುನೂರಾ
ಯಿತು. ಪ್ರಾಧ್ಯಾಪಕರು ಪ್ರತ್ಯಕ್ಷ, ಅನುಮಾನ, ಅನುಭವ ಪ್ರಮಾಣಗಳಿಂದ
ದೈವೀತತ್ತ್ವವನ್ನು ಮನಗಾಣಿಸಿದಾಗ ಬುದ್ಧಿ ಒಪ್ಪಿತು; ಮನವು ಅನುಮೋದಿಸಿತು.
ದೇವರು-ಧರ್ಮದತ್ತ ಮನ ವಾಲಿತು. ಬುದ್ಧಿಯು ಅಧ್ಯಯನದಲ್ಲಿ ತೊಡಗಿತು.
ಬಸವಣ್ಣನವರ ತತ್ತ್ವಜ್ಞಾನದ ಕಡೆಗೆ ಮನಸ್ಸು ಹರಿಯತೊಡಗಿತು. ಕಾರ್ಲ್
ಮಾರ್ಕ್ಸ್‌ನ ವಿಚಾರಧಾರೆಯು ಕಂಡ ಸಾಮ್ಯವಾದೀ ಸಮಾಜದ ಕನಸು, ಧರ್ಮ,
ದೇವರುಗಳ ತಳಹದಿಯ ಮೇಲೆ ಬಸವಣ್ಣನವರ ವಿಚಾರಧಾರೆಯಲ್ಲಿ ನನಸಾದುದನ್ನು
ಕಂಡ ಸಂಗಮೇಶ ಬಸವಣ್ಣನವರ ವಚನಗಳ ಅಧ್ಯಯನದಲ್ಲಿ ತೊಡಗಿದ. ಬಸವಣ್ಣ
ನವರ ಭಾವಚಿತ್ರ ಗೋಡೆಯ ಮೇಲೆ ಅಲಂಕೃತವಾಗುವುದರೊಡನೆ, ಹೃದಯ
ಭಿತ್ತಿಯ ಮೇಲೆ ಪ್ರತಿಷ್ಠಾಪನೆಗೊಂಡಿತು. ಇಂತಹ ಘಟ್ಟದಲ್ಲೇ ಬಿ. ಎ. ಆನರ್ಸ್
ಪರೀಕ್ಷೆಯನ್ನು ಪೂರೈಸಿದುದಾಯಿತು.

ಈ ಮಧ್ಯದಲ್ಲಿ ತಾಯಿ-ತಂದೆಯವರಿಂದ ಮದುವೆಯಾಗಲು ಒತ್ತಡ ಬರುತ್ತಿತ್ತು.
ವೈವಾಹಿಕ ಬಂಧನಕ್ಕೆ ಸಿಕ್ಕಿಬೀಳದೆ ಮುಂದೆ ಓದುವ ಆಕಾಂಕ್ಷೆ ಬಲವಾಗಿತ್ತು. ಆದರೆ
ಅದಕ್ಕೆ ಅನುವೆಲ್ಲಿ? ಕಠೋರವಾದ ಬಡತನದ ಹಿಡಿತದಲ್ಲಿ ಸಿಕ್ಕಿದ್ದ ಹೆತ್ತವರಿಂದ
ಓದಲು ಸಹಾಯ ಬಯಸುವುದೇ ಒಂದು ಅಪರಾಧವೆನಿಸುತ್ತಿತ್ತು. ನೌಕರಿಯೊಂದನ್ನು
ಆಶ್ರಯಿಸಿ ಅವರನ್ನಿನ್ನು ಸಾಕಬೇಕಾದುದು ಕರ್ತವ್ಯವಾಗಿತ್ತು. ಈ ದಿಶೆಯಲ್ಲಿ
ಚಿಂತನಧಾರೆ ಸಾಗುತ್ತಿರುವಾಗಲೇ ಜೀವನದಲ್ಲೊಂದು ವಿಶೇಷ ಪ್ರಸಂಗ ಜರುಗಿತು.

ಬಸವ ಜಯಂತಿಯಂದು ಸಂಗಮೇಶ ಸುಪ್ರಭಾತದಲ್ಲಿ ಎದ್ದು, ಸ್ನಾನಮುಗಿಸಿ
ಚಿಂತನಾಮಗ್ನನಾಗಿ ಕುಳಿತಿರುವಾಗಲೇ ಒಂದು ಬೆಳಕು ಮೂಡಿತು. ಅದು ಬಂದು

ದೆಲ್ಲಿಂದ ಎಂದು ಅಚ್ಚರಿಪಡುವಾಗಲೇ ಬಸವಣ್ಣನ ಭಾವಚಿತ್ರ ಅದರ ಉಗಮ ಬಿಂದು
ವಾಗಿತ್ತು. ಆ ತಂದೆಯ ರೂಪು ಜೀವಂತಿಕೆ ತಳೆದಿತ್ತು; ಪ್ರಸನ್ನ ಮುಖಮುದ್ರೆ
ಹೊತ್ತು ಕರೆಯುತ್ತಿತ್ತು. "ಮಗು ಸಂಗಮೇಶ, ನೀನು ನನ್ನ ಸೇವೆಗಾಗಿ ಹುಟ್ಟಿ
ಬಂದವನು. ನಾ ನಿನ್ನ ಆರಿಸಿಕೊಳ್ಳಬಯಸಿರುವೆ. ನನ್ನ ಸೇವೆಗೆ ಬಾ."

ವಿಚಿತ್ರ ಸನ್ನಿವೇಶ, ದಿಗ್ಭ್ರಾಂತಿ, ನಿರಾಕರಣೆ. "ಇಲ್ಲ ಸಾಧ್ಯವಿಲ್ಲ; ಮಾತಾ
ಪಿತೃಗಳು ಅನಂತ ಭರವಸೆಗಳನ್ನು ಹೊತ್ತು, ನಾನು ನೌಕರಿ ಪಡೆಯುವುದನ್ನು
ಕಾಯುತ್ತ ಕುಳಿತಿರುವಾಗ,ಅವರನ್ನು ಸಾಲದ ಪ್ರವಾಹದಲ್ಲಿ ನಡು ನೀರಲ್ಲಿ ಕೈ ಬಿಡಲೆ?"

"ನಾನೂ ನಿನ್ನ ತಂದೆಯಲ್ಲವೆ? ನನ್ನ ತತ್ತ್ವಪ್ರಸಾರವೂ ಹಿರಿದಾದ
ಕರ್ತವ್ಯವೇ! ಒಪ್ಪಿಗೆ ನೀಡು." ಬಸವಣ್ಣನಿಗೆ ಸಮ್ಮತಿ ನೀಡಿದಾಗ ಅಭಯರಕ್ಷೆ
ನೀಡಿ, ಅವನು ಕಣ್ಮರೆಯಾದ. ತನ್ನರಿವಿಲ್ಲದೆ ಒಪ್ಪಿಗೆ ನೀಡಿದ ಸಂಗಮೇಶ
ದಿಙ್ಮೂಢನಾಗಿ ಕುಳಿತಿದ್ದು, ನಂತರ ಕೋಣೆಯನ್ನು ಬಿಟ್ಟು ಹೊರಬಂದಾಗ ಸಾರ್ವ
ಜನಿಕ ಸಭೆಯೊಂದು ನಡೆಯುವುದನ್ನು ಕಂಡ. ಅಂದು ಬಸವ ಜಯಂತಿ, ಯಾರೋ
ಕಾರ್ಯಕ್ರಮ ನಡೆಸುತ್ತಿದ್ದರು. ಅಂತಃಪ್ರೇರಣೆಯಂತೆ ಮುಂದೆ ಸಾಗಿ ವ್ಯವಸ್ಥಾಪಕ
ರನ್ನು ಕೇಳಿದಾಗ ಅವರು ಭಾಷಣಕ್ಕೆ ಅವಕಾಶ ನೀಡಿದರು. ಮೊಟ್ಟಮೊದಲಬಾರಿಗೆ
ಬಸವಣ್ಣನನ್ನು ಕುರಿತು ನಿರರ್ಗಳವಾದ, ಅಸ್ಖಲಿತವಾಣಿಯಿಂದ ಮಾತನಾಡಿದಾಗ
ಎಲ್ಲರಿಗೂ ಆಶ್ಚರ್ಯ! ಸಂಗಮೇಶನಿಗೂ ಅಷ್ಟೆ! ಯಾವುದೋ ಶಕ್ತಿ ಎತ್ತೆತ್ತಲೋ
ಎಳೆದೊಯ್ದಂತೆ ಭಾಸ!

ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ತೇರ್ಗಡೆಯಾದುದಾಯ್ತು. ಓದನ್ನು
ಮುಂದುವರಿಸುವ ಹಂಬಲ; ಆದರೆ ಆರ್ಥಿಕ ಅನಾನುಕೂಲತೆ. ತಾಯಿತಂದೆಯರ
ಸಂಕಷ್ಟ ಕೊಂಚ ಕಡಿಮೆ ಮಾಡಲೋಸುಗ ನೌಕರಿ ಹಿಡಿದುದಾಯಿತು. ಅದೂ
ಬಿಜಾಪುರ ಸರ್ಕಾರಿ ಶಾಲೆಯಲ್ಲಿ ಶಿಕ್ಷಕ ಹುದ್ದೆ. ಅದೇ ಸಮಯದಲ್ಲಿ ಗದುಗಿನ ಪೂಜ್ಯ
ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಯವರಿಂದ ಲಿಂಗದೀಕ್ಷೆ. ಬಸವಣ್ಣನಿಗೆ ಕೊಟ್ಟ
ಮಾತನ್ನು ಪೂರೈಸಬೇಕಾದರೆ ಇನ್ನಷ್ಟು ಶಿಕ್ಷಣ ಪಡೆಯುವುದೊಳ್ಳಿತು ಎಂದು
ತತ್ತ್ವಜ್ಞಾನ ಎಂ. ಎ. ಯನ್ನು ಓದಲಾರಂಭಿಸಿದ ಸಂಗಮೇಶ. ಹಣದ ಅಡಚಣೆ
ತೀವ್ರವಾಯಿತು. ಜೊತೆಗೆ ಆಂತರಂಗಿಕ ಮೊರೆತವೂ ಉತ್ಕಟವಾಯಿತು. ಪದವಿ
ಯನ್ನು ಹೊಂದುವ ಆಸೆ ಬತ್ತತೊಡಗಿತು; ಧರ್ಮಪ್ರಚಾರಕ್ಷೇತ್ರಕ್ಕೆ ಮುಂಸಾಗುವ
ಆಕಾಂಕ್ಷೆ ಬಲವತ್ತರವಾಯಿತು. ಸೋಮವಾರ ದಿನಾಂಕ 19 ನವೆಂಬರ್ 1956
ರಂದು ಸುಪ್ರಭಾತದಲ್ಲಿ ಧಾರವಾಡದ ಹೊರಗಿನ ಒಂದು ಗುಡ್ಡದ ಮೇಲೆ ಸಂಗಮೇಶ
ಧ್ಯಾನಾಸಕ್ತನಾದ. ತನ್ನ ಇಡೀ ಬದುಕಿನ ಸಿಂಹಾವಲೋಕನ ಮಾಡಿಕೊಂಡ.

ತಾಯಿತಂದೆ ಜನ್ಮಕ್ಕೆ ಕಾರಣೀಭೂತರು ನಿಜ; ಅವರ ಸೇವೆ ಮಾಡಬೇಕಾದುದೂ ನಿಜ. ಆದರೆ ಅದಕ್ಕೂ ಮಿಗಿಲಾದ ಕರ್ತವ್ಯ ಧರ್ಮಪ್ರಚಾರ. ಹೆತ್ತವರನ್ನಷ್ಟೇ ಏಕೆ ತಾಯಿತಂದೆ ಎಂದು ಭಾವಿಸಬೇಕು? ಸಮಾಜದ ಜನತೆಯೂ ತಾಯಿತಂದೆಯಲ್ಲವೆ? ಮನಸ್ಸು ಗಟ್ಟಿಗೊಂಡಿತು. ಅಂತರ್‌ಪ್ರೇರಣೆಯಂತೆ, ಬಸವಣ್ಣನೇ ತನ್ನ ನಿಜ ಗುರುವೆಂದು, ಸ್ವತಃ ಅವನೇ ಅನುಗ್ರಹ ನೀಡುವಂತೆ ಭಾವಿಸಿಕೊಂಡು ಕಾಷಾಯ ವಸ್ತ್ರಗಳನ್ನು ಧರಿಸಿದ ಸಂಗಮೇಶ ಪುನರ್ಜನ್ಮಹೊಂದಿ ಅಂದು ಸ್ವಾಮಿ ಲಿಂಗಾನಂದರಾದರು. ನವ ಕಲ್ಯಾಣ ಮಠದ ಶ್ರೀ ಕುಮಾರಸ್ವಾಮಿಗಳು ಸೂಚಿಸಿದ್ದ ಈ ಹೆಸರು ಸಂಗಮೇಶನಿಗೆ ತುಂಬಾ ಪ್ರಿಯವಾಗಿತ್ತು. ಕಾಷಾಯ ವಸ್ತ್ರಗಳನ್ನು ಧರಿಸಿ ಕಾಲೇಜ್ ಹಾಸ್ಟೆಲಿಗೆ ತರುಣ ವಟು ಹೋದಾಗ, ಸಹಪಾಠಿಗಳಿಂದ ಉದ್ಗಾರ. "ಇದೆಂಥಾ ಕೆಲಸ ಮಾಡಿಬಿಟ್ಟೆ?" ಸಾಹಸೀತರುಣ, ಕ್ರೀಡಾಪಟು, ಯುವನಾಯಕ. ಉತ್ಸಾಹೀ ವಿದ್ಯಾರ್ಥಿ ಹೀಗಾಗುವನೆಂದು ಯಾರೂ ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ತಮ್ಮಲ್ಲಿದ್ದ ದಿನನಿತ್ಯದ ಉಡುಪು, ಗಡಿಯಾರ, ಪುಸ್ತಕ ಎಲ್ಲವನ್ನೂ ಹಂಚಿ ಕಾಷಾಯ ವಸ್ತ್ರ ಧರಿಸಿದ್ದ ಸ್ವಾಮೀಜಿ ಹೊರಟುಬಿಟ್ಟದ್ದರು, ವಿದ್ಯಾಭ್ಯಾಸಕ್ಕೆ ತಿಲಾಂಜಲಿ ನೀಡಿ.

ಮುಂದೆ ಸದಾ ಸಂಚಾರ. ಮಗನು ಸನ್ಯಾಸ ಸ್ವೀಕರಿಸಿದ ಸುದ್ದಿ ಕೇಳಿ ತಾಯಿ ಹೃದಯಾಘಾತಕ್ಕೆ ಒಳಗಾದರು; ಪತ್ನಿಯ ಅಗಲಿಕೆಯಿಂದ ಕುಂದಿದ ತಂದೆ ಮಲ್ಲಪ್ಪನವರು ಲಿಂಗೈಕ್ಯರಾದರು. ಸ್ವಾಮೀಜಿ ಎಲ್ಲ ವ್ಯಾಮೋಹದ ಸಂಕೋಲೆ ಕಡಿದುಕೊಂಡು ವಿಶ್ವಕುಟುಂಬಿಯಾಗಿದ್ದರು. ನಿರ್ಲಿಪ್ತರಾಗಿ ಧರ್ಮಪ್ರಸಾರ ಮತ್ತು ಸಮತಾವಾದಿ ಆಂದೋಳನಕ್ಕೆ ಕೈಹಾಕಿದರು. ಜಾತ್ಯತೀತ ಧೋರಣೆಯ, ಗುಣೈಕ ಸಮಾಜ ನಿರ್ಮಾಣಗೈವ ಬಸವತತ್ತ್ವ ಸಂಪ್ರದಾಯನಿಷ್ಠರ ಕೈಯಲ್ಲಿ ಸಿಕ್ಕಿಬಿದ್ದುದನ್ನು ಬಿಡಿಸಿ ಶ್ರೀಸಾಮಾನ್ಯರ ಹೃದಯಭೂಮಿಕೆಗೆ ಹರಿಸುವ ಕ್ರಾಂತಿಯನ್ನು ಕೈಗೊಂಡರು. ಜ್ಞಾನಸನ್ಯಾಸವನ್ನು ಸ್ವೀಕರಿಸಿ ಸ್ವಯಂಪ್ರತಿಭಾವಂತರಾಗಿ ಬೆಳೆದ ಸ್ವಾಮೀಜಿ ವಿದ್ಯುಕ್ತವಾದ ಕ್ರಿಯಾಸನ್ಯಾಸವನ್ನು ಅಂದರೆ ಜಂಗಮ ದೀಕ್ಷೆಯನ್ನು 1961ರಲ್ಲಿ ದಿನಾಂಕ 7 ಆಗಸ್ಟ್ ಸೋಮವಾರದಂದು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರಿಂದ ಸ್ವೀಕರಿಸಿದರು.

ಪೂಜ್ಯರ ಸಂಚಾರ ಬಹು ವ್ಯಾಪಕವಾಗಿದೆ. ಕರ್ನಾಟಕದ ಕಿರೀಟದಂತಿರುವ ಬೀದರಿನಿಂದ ಹಿಡಿದು ಗಡಿ ನಾಡುಗಳನ್ನು ವ್ಯಾಪಿಸಿಕೊಂಡು, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕಗಳನ್ನೂ ಬಳಸಿಕೊಂಡಿದೆ. ವಿಶ್ವ ಕಲ್ಯಾಣ ಮಿಷನ್ ಎಂಬ ಧರ್ಮ ಪ್ರಸಾರಕ ಸಂಸ್ಥೆಯ ಆದರ್ಶಗಳನ್ನು ಹುಟ್ಟುಹಾಕಿದ ಸಂಸ್ಥಾಪಕರು ಅವರು. ಗುರುಕುಲ ಮಾದರಿಯ ರೆಸಿಡೆನ್ಷಿಯಲ್ ಶಾಲೆಯನ್ನು ತೆರೆದು ವಿದ್ಯಾರ್ಥಿಗಳನ್ನು ಆದರ್ಶ

ವಂತ ಪ್ರಜೆಗಳನ್ನಾಗಿ ರೂಪಿಸಬೇಕೆಂಬ ಮನೀಷೆಯ ಕನಸನ್ನು ಕಟ್ಟಿದವರೇ ಪೂಜ್ಯ ಸ್ವಾಮೀಜಿ. ಅದನ್ನು ನನಸಾಗಿಸಲು ರೂಪಿಸುತ್ತಿರುವರೇ ಅವರು. ಅವರ ಸಾಧನೆಯ ಫಲವೇ ಬಸವಗಂಗೋತ್ರಿ ಮತ್ತು ಬಸವ ಭಾರತಿ ವಿದ್ಯಾಲಯ.

ಸಂಗನ ಬಸವಣ್ಣ–ಬಸವಣ್ಣನ ಸಂಗಮೇಶ

ದೇವರ ಮಗ (Son of God) ಎಂದು ಹೇಳುವ 'ಸಂಗನ ಬಸವಣ್ಣ' ಎಂಬ ಪ್ರಯೋಗ ಬಸವಣ್ಣನವರು ದೇವರಕರುಣೆಯ ಕಂದರು ಎಂಬುದನ್ನು ಚಿತ್ರಿಸುವುದಷ್ಟೆ.

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶಿವಶರಣನ!

ಎಂಬ ಮಡಿವಾಳ ಮಾಚಿದೇವರ ಉಕ್ತಿಯೇ ನನ್ನ ಹೇಳಿಕೆಗೆ ಸಾಕ್ಷಿ. ಇದೇ ಉಕ್ತಿಯನ್ನು ನಾವು ಪೂಜ್ಯ ಗುರೂಜಿಯವರ ವಿಷಯದಲ್ಲಿ ಹೀಗೆ ಹೇಳಬಹುದು:

ಬಸವ ತತ್ತ್ವದ ಶ್ರೇಷ್ಟತೆಯ ಮನಗಾಣಿಸಲೆಂದು
ಬಸವಣ್ಣನಟ್ಟಿದನಯ್ಯಾ ಸ್ವಾಮಿ ಲಿಂಗಾನಂದರ!

ಹೀಗಾಗಿ ಬಸವಣ್ಣನವರು ಸಂಗನ ಕಂದನಾದಂತೆ, ಪೂಜ್ಯ ಗುರೂಜಿಯವರು ಬಸವಣ್ಣನ ಕಂದರು! ಬಸವಣ್ಣನ ದಿವ್ಯಾನುಗ್ರಹ ಅವರ ಮೇಲೆ ಅಪಾರ. ಇದಕ್ಕೆ ಸಾಕ್ಷಿ ಒಂದಲ್ಲ ಎರಡಲ್ಲ.

ಸಂಗಮದಲ್ಲಿ ಸಗುಣ ಸಾಕ್ಷಾತ್ಕಾರ

ಪೂಜ್ಯ ಗುರೂಜಿಯವರು ತಮ್ಮ ಪ್ರಖರವಾಣಿ, ತೇಜಸ್ಸಿನಿಂದ ಜನರನ್ನು ಮಂತ್ರಮುಗ್ಧರನ್ನಾಗಿಸಿ, ತಮ್ಮ ಸಿಂಹಗರ್ಜನೆಯಿಂದ ಜನತೆಯ ವಿಚಾರಶೀಲತೆಯನ್ನು ಬಡಿದೆಬ್ಬಿಸುತ್ತಿದ್ದ ಕಾಲವದು. ಪ್ರತಿ ಊರಿನಲ್ಲಿಯೂ ಪ್ರಚಂಡ ಯಶಸ್ಸು! ಬೆಲ್ಲಕ್ಕೆ ಇರುವೆ ಮುತ್ತುವಂತೆ ಪ್ರವಚನಕ್ಕೆ ಧಾವಿಸಿ ಬರುತ್ತಿದ್ದ ಜನಸಂದಣಿ. ಜಾತಿಯ ಬಲದಿಂದಲ್ಲದೆ ಅರ್ಹತೆಯ. ಬಲದಿಂದಲೇ ಜನರನ್ನು ತಮ್ಮೆಡೆಗೆ ಆಕರ್ಷಿಸುತ್ತಿದ್ದ ದೈವೀ ತೇಜಸ್ಸು. ಆಗ ಮತ್ಸರಿಗರ ಕಾಟ ಬಹಳವಾಯಿತು ಜನಪ್ರವಾಹ ಒಂದೆಡೆಗೆ–ಸಂಪ್ರದಾಯ ವಿಚಾರಧಾರೆಯ ಜಾತಿವಾದಗಳ ಎಳೆತ ಇನ್ನೊಂದೆಡೆಗೆ. ಸುಂದರ ತುರುಬಿದ್ದವಳನ್ನು ಕಂಡು ಕೂದಲಿಲ್ಲದ ಹೆಣ್ಣು ಮತ್ಸರಿಸುವುದು ಸಹಜವಾದಂತೆ, ವಿನಾ ಕಾರಣ ಕೆಲವರ ಕಿರುಕುಳ–ಮತ್ಸರ. "ಎಲ್ಲರೂ ತಮ್ಮನ್ನು ಪ್ರೇಮಿಸಬೇಕು, ಗೌರವಿಸಬೇಕು" ಎಂಬ ನಂಬುಗೆಯೇ ಮೊದಲ ತಪ್ಪು. ಜೂಜುಗಾರ ಜೂಜಾಡದವನನ್ನೂ ಎಂದೂ ಮನ್ನಿಸಲಾರ. ಸಂಪ್ರದಾಯ ನಿಷ್ಠನು ಸಮತಾವಾದಿ

ಯನ್ನು ಎಂದೂ ಒಪ್ಪಲಾರರು. ಇದು ಲೋಕದ ಸಹಜ ನಡೆ! ಆದರೆ ಕಾರುಣ್ಯದ ಹುಮ್ಮಸ್ಸಿನ ಸ್ವಾಮೀಜಿಗೆ ಇದು ಅರ್ಥವಾಗದ ನಡೆ. "ನಾನು ಹೇಳುವುದು ಒಳ್ಳೆಯದನ್ನು, ಸಮತಾವಾದವನ್ನು, ಲೋಕೋದ್ಧಾರದ ಸೂತ್ರವನ್ನು. ಆದರೂ ಏಕಿಂತು ಕೆಲವರು ಒಪ್ಪರು? ಈ ವಿಚಾರವನ್ನು ಏಕೆ ವಿರೋಧಿಸುವರು?" ಇದೇ ಚಿಂತೆಯಿಂದ ತಮ್ಮ ಮನದಳಲನ್ನು ತೋಡಿಕೊಂಡರು ಒಂದು ದಿನ. ಬಳ್ಳಾರಿ ಸದ್ಭಕ್ತರೊಡನೆ ಒಮ್ಮೆ ಸಂಗಮಕ್ಕೆ ಹೋಗಿದ್ದರು. ಬಸವಣ್ಣನವರ ಐಕ್ಯ ಮಂಟಪದಲ್ಲಿ ಕುಳಿತು ಮೌನಧ್ಯಾನದಲ್ಲಿ ತೊಡಗಿದರು. ಸದ್ಭಕ್ತರೆಲ್ಲರೊಡನೆ ಸಾಮೂಹಿಕ ಪ್ರಾರ್ಥನೆ ಮಾಡಿ ಧ್ಯಾನೋನ್ಮುಖರಾದರು. ಸಮಾಜದ ದುರವಸ್ಥೆ, ರಾಷ್ಟ್ರದ ಹಿನ್ನಡೆ, ಜನರಲ್ಲಿನ ಅಜ್ಞಾನ, ವೈಯಕ್ತಿಕ ಜೀವನದಲ್ಲಿ ಜಾತಿವಾದಿಗಳಿಂದ ಬರುತ್ತಿದ್ದ ಕಿರುಕುಳ, ಈ ಎಲ್ಲವುಗಳಿಂದ ನೊಂದು ಧ್ಯಾನಾಸಕ್ತರಾಗಿ ಕುಳಿತಾಗಲೇ ರೋಮಾಂಚನಗೊಳಿಸುವ ಅನುಭವ. ಸ್ವಾಮೀಜಿಯವರ ನೆತ್ತಿಯ ಮೇಲೆ ವಿದ್ಯುತ್ ಪ್ರಭೆಯ ಹಸ್ತಗಳು. ಪುಳಕಿತಗೊಂಡು ಕಣ್ತೆರೆದರೆ ಶುಭ್ರಶ್ವೇತ ವಸನ ಧರಿಸಿದ ಬಸವ ಮೂರ್ತಿ. ಕೆಳಗೆ ಜೋಡಿಸಲ್ಪಟ್ಟ ಚರಣ ಕಮಲ. ಸಂಭ್ರಾಂತರಾಗಿ ಮೌನವಾಂತರು. "ಮಗೂ, ಲಿಂಗಾನಂದ, ನಿನ್ನ ಮೇಲೆ ನನ್ನ ಭದ್ರ ರಕ್ಷಾಕವಚವಿದೆ. ಅಂಜಿಕೆ ಏಕೆ? ಸಂಪ್ರದಾಯದ ಸೆಳವಿನ ವಿರುದ್ಧ ಹೊರಟವರಿಗೆ ಇದು ಸ್ವಾಭಾವಿಕ. ಅಂಜದಿರು, ಅಳುಕದಿರು." ಸ್ವಾಮೀಜಿಯವರ ಆನಂದದ ಕಟ್ಟೆಯೊಡೆಯಿತು. ಬಹುಕಾಲದಿಂದ ತಾಯಿಯ ಬರವಿಗೆ ನಿರೀಕ್ಷಿಸಿದ ಕೂಸು ತಾಯಿಯನ್ನು ಕಾಣುತ್ತಲೇ ಬಿಗಿದಪ್ಪುವಂತೆ, ಬೆಳಗುತ್ತಿದ್ದ ಬಸವ ಪಾದದ ಮೇಲೆ ತಲೆ ಇಟ್ಟು ಆನಂದದ ಧಾರೆಯನ್ನು ಹರಿಸಿ, ಅಭಿಷೇಕ ಮಾಡಿದರು. ಈ ವಿದ್ಯುದನುಭವದಿಂದ ಸಮ್ಮೋಹನಕ್ಕೊಳಗಾದರು. ಎಚ್ಚರಗೊಂಡಾಗ ಕೃಷ್ಣೆ–ಮಲಾಪಹಾರಿಯರ ಜುಳು ಜುಳುನಾದ ಮಾತ್ರ ಮೊರೆಯುತ್ತಿತ್ತು. ಸುತ್ತಲಿನ ಭಕ್ತರೆಲ್ಲ ಮೌನವಾಂತು ಕುಳಿತಿದ್ದರು. ಯಾವುದೋ ಕನಸಿನಿಂದ ಎಚ್ಚರವಾದಂತೆ ಸ್ವಾಮೀಜಿ ಬಹಿರ್ಪ್ರಪಂಚಕ್ಕೆ ಬಂದು, ಗಡಿಯಾರವನ್ನು ನೋಡಿಕೊಂಡಾಗ ಗಡಿಯಾರದ ಮುಳ್ಳು ಗಂಟೆ ಒಂದು ಸರಿದುದನ್ನು ಸೂಚಿಸುತ್ತಿತ್ತು: ಬೆಳಗಿನ ಹತ್ತುಗಂಟೆಗೆ ಬಂದು ಕುಳಿತು ಅಲ್ಲಿ ಧ್ಯಾನಾಸಕ್ತರಾದವರಿಗೆ ಎಚ್ಚರವಾದುದು ಒಂದು ಗಂಟೆಗೆ! ಈ ಘಟನೆ ಬಸವಣ್ಣನವರ ಭದ್ರ ರಕ್ಷಾಕವಚ ಅವರ ಮೇಲಿದೆ ಎಂಬುದನ್ನು ಸ್ಥಿರೀಕರಿಸುತ್ತದೆ.

1975 ಅಕ್ಟೋಬರ್ 7 ರಂದು ಯಾದಗಿರಿಯ ಬಳಿಯಲ್ಲಿ ನಡೆದ ಭೀಕರ ಅಪಘಾತದಲ್ಲಿ ಸ್ವಾಮೀಜಿ ಉಳಿದುದು ಇನ್ನೊಂದು ಸಾಕ್ಷಿ. ಕಾರು ನುಚ್ಚು ನೂರಾದ ಬಗೆ, ಇಪ್ಪತ್ತೈದು ಅಡಿ ಕೆಳಗೆ ಸೇತುವೆಯನ್ನು ಕುಟ್ಟಿ ಪುಡಿಮಾಡಿ ಬಿದ್ದು, ಅಲ್ಲಿಂದ

ಸ್ವಾಮೀಜಿ ಪಾರಾದುದು ಒಂದು ಪವಾಡವೇ ಸರಿ! ಎಡಗೈ ಮುರಿದಿತ್ತು. (ಈಗ ಸರಿಯಾಗಿದೆ). ಒಂದೇ ಕೈಯಿಂದಲೇ ಮುರಿದ ಎಡಗೈಗೆ ಆಸರೆಕೊಟ್ಟು, ಕಾರಿನ ಇನ್ನೊಂದು ಬಾಗಿಲಿನಿಂದ ಹೊರಬಂದು ನಿಂತು, ಸಹಾಯಕ್ಕಾಗಿ ಕರೆದರು. ಮುಂದೆ ಕಲಬುರ್ಗಿಯ ಆಸ್ಪತ್ರೆಯಲ್ಲಿ ಕೈಯ ಶಸ್ತ್ರಚಿಕಿತ್ಸೆ ಮಾಡಲು ಅರಿವಳಿಕೆ ಕೊಟ್ಟರಂತೆ. ಆಗ ವೈದ್ಯರು ಅರಿವಳಿಕೆ ಕೊಡುವ ಮುನ್ನ 'ಶ್ರೀಗುರು ಬಸವಲಿಂಗಾಯ ನಮಃ' ಎಂದು ಜಪಿಸಲಾರಂಭಿಸಿದವರು ಆಪರೇಷನ್ ಮಾಡುವ ಐದು ಗಂಟೆಗಳ ಕಾಲ ಅದನ್ನೇ ಪಠಿಸುತ್ತಿದ್ದುದಲ್ಲದೇ, ಅರಿವಳಿಕೆಯ ಪ್ರಭಾವ ಕುಂದಿ ಎಚ್ಚರವಾಗುವ ತನಕ ಹಾಗೆಯೇ ಪಠಿಸುತ್ತಿದ್ದರಂತೆ! ಹೀಗೆ ಬಸವಣ್ಣನವರನ್ನು ತಮ್ಮ ಉಸಿರಾಗಿ, ಪ್ರಾಣವಾಗಿ ಮಾಡಿಕೊಂಡ ಗುರೂಜಿಯವರು ಬಸವಣ್ಣನವರ ಉಸಿರು ಎಂದರೆ ಅತಿಶಯೋಕ್ತಿಯಲ್ಲ. ಅಂತೆಯೇ ಬಸವಣ್ಣನು ಪವಾಡ ಸದೃಶ್ಯ ರೀತಿಯಲ್ಲಿ ಅವರನ್ನು ರಕ್ಷಿಸುತ್ತಾನೆ.

ಮೇ 29, 1981 ರಂದು ಬಸವಗಂಗೋತ್ರಿಯಲ್ಲಿದ್ದಾಗ ಕಟ್ಟಡಕ್ಕೆ ಸಿಡಿಲೆರಗಿ, ಛಾವಣಿ ಕುಸಿದು ಬಿದ್ದಾಗ, ಎರಡು ನಿಮಿಷಗಳ ಮೊದಲು ಮಾತ್ರವೇ ಅಲ್ಲಿಂದ ಹೋಗಿ ವಿಪತ್ತಿನಿಂದ ಗುರೂಜಿಯವರು ಪಾರಾದುದು ಬಸವಾನುಗ್ರಹ ರಕ್ಷೆ ಗುರೂಜಿಯವರ ಮೇಲೆ ಹೇಗಿದೆ ಎಂಬುದನ್ನು ಸ್ಥಿರೀಕರಿಸುತ್ತದೆ.

ಈ ಅಧಿಭೌತಿಕ ವಿಘ್ನಕ್ಕಿಂತ ಮಿಗಿಲಾದ, ನಿಸರ್ಗಕ್ಕಿಂತಲೂ ಭಯಂಕರರಾದ ಸ್ವಾರ್ಥಿಗಳ ಕುತಂತ್ರದಿಂದ ಮೇ ತಿಂಗಳಲ್ಲಿ ಜರುಗಬೇಕಾಗಿದ್ದ ಮತ್ತೊಂದು ವಿಪತ್ತು ಒಂದೇ ಒಂದು ದಿನದ ಅವಧಿಯಲ್ಲಿ ಬಸವಾನುಗ್ರಹದಿಂದ ತಪ್ಪಿಹೋಯಿತು. ವಂಚಕರು, ಸ್ವಾರ್ಥಿಗಳೊಡ್ಡಿದ ಒಂದು ಕುತಂತ್ರದ ಮಹಾನ್ ಜಾಲದಿಂದ ಆಕಸ್ಮಿಕವಾಗಿ ಪಾರಾದ ನಂತರವೇ, ಆ ಕುತಂತ್ರದ ಕಮರಿ ಎಷ್ಟು ಭಯಾನಕವಿದ್ದಿತು; ಅದರಿಂದ ಪಾರಾದುದು ಎಂತಹ ದೈವೀ ಘಟನೆ ಎನಿಸಿತು. ಮಂಗಳೂರಿನಲ್ಲಿ ಅಪಘಾತಕ್ಕೀಡಾದ ವಿಮಾನವೊಂದರಿಂದ ವಿಚಿತ್ರ ರೀತಿಯಲ್ಲಿ ಪಾರಾದ ಶ್ರೀ ವೀರಪ್ಪ ಮೊಯಿಲಿ ಮತ್ತು ಸಹಪ್ರಯಾಣಿಕರಿಗೆ ಎಷ್ಟು ಆನಂದ, ಆಶ್ಚರ್ಯ, ದಿಗ್ಭ್ರಾಂತಿ, ಮತ್ತು ದೇವರ ಬಗ್ಗೆ ಕೃತಜ್ಞತೆ ಸಂಭವಿಸಿರಬಹುದೋ ಅಂಥದೊಂದು ಅನುಭವ ನಮಗಾಯಿತು, ಹಿರಿದಾದೊಂದು ವಿಪತ್ತಿನಿಂದ ಪಾರಾದಾಗ! ಇದರಿಂದಾಗಿ 'ಪೂಜ್ಯ ಗುರೂಜಿಯವರ ಬಗ್ಗೆ ಬಸವಣ್ಣನ ಶ್ರೀರಕ್ಷೆ ಎಷ್ಟು ಅಗಾಧವಾಗಿದೆ? ಅವರನ್ನೆಷ್ಟು ಚೆನ್ನಾಗಿ ಜೋಪಾನ ಮಾಡುತ್ತಾನೆ' ಎಂದು ಅವರ ಬಗೆಗಿದ್ದ ಭಕ್ತಿ ನೂರ್ಮಡಿಸಿತು. ಹೀಗೆ ಬಸವಣ್ಣನ ಕರುಣೆಯ ಕಂದರು ಸ್ವಾಮೀಜಿಯವರು.

ಪೂಜ್ಯ ಸ್ವಾಮೀಜಿ ಛಲವಾದಿ; ತಾವು ಕೈಗೊಂಡ ವ್ರತವನ್ನು ಸಡಲಿಸರು. ಇಟ್ಟ ಗುರಿಯಿಂದ ದೃಷ್ಟಿ ತೆಗೆಯರು, ಎಡರುಗಳಿಂದ ಎದೆಗೆಡರು; ಅವರ ಆಧ್ಯಾತ್ಮ ಸಾಧನೆಯ ಅಧ್ಯಾಯ ಅಷ್ಟೇ ತೀವ್ರತರವಾದುದು. ಓರ್ವ ಶ್ರೀಸಾಮಾನ್ಯನು ಕೂಲಿನಾಲಿ ಮಾಡುತ್ತ ತನ್ನ ಕಾಯಕ ಆರಂಭಿಸಿ, ತನ್ನ ಬುದ್ಧಿವಂತಿಕೆ, ಸತ್ಸಾಧನೆ, ಪ್ರಾಮಾಣಿಕತೆ, ಕಾಯಕ ನಿಷ್ಠೆಗಳಿಂದ ಸಿರಿವಂತನಾಗಿ, ತನ್ನ ಗುಡಿಸಲನ್ನು ವಿಸರ್ಜಿಸಿ ಉತ್ತಮ ಮನೆ ಆಶ್ರಯಿಸುವನು. ನಂತರ ಹುಟ್ಟಿದ ಮಕ್ಕಳಿಗೆ ತಮ್ಮ ತಂದೆಯ ಸಾಧನೆಯ ಮಹತ್ವವಾಗಲೀ, ಗಳಿಕೆಯ ಕಷ್ಟವಾಗಲೀ, ಅವನು ಪರಿಶ್ರಮದಿಂದ ಗಳಿಸಿದ ಸಂಪತ್ತಿನ ಬೆಲೆಯಾಗಲೀ ತಿಳಿದುಬರುವುದು ಅಪರೂಪ. ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಅನೇಕ ಶೂರರ – ವೀರರ, ತ್ಯಾಗಿಗಳ ಮಹೋನ್ನತ ತ್ಯಾಗದ ಅರಿವು-ಮಹತ್ವ ಇಂದಿನ ಅನೇಕ ತರುಣರಿಗಾಗದು. ಹಾಗೆಯೇ ಓರ್ವ ವ್ಯಕ್ತಿ ಹಿರಿಯ ನಿಲುವು ಗಳಿಸಿಕೊಳ್ಳಬೇಕಾದರೆ ಎಷ್ಟೊಂದು ಸಾಧನೆ ಮಾಡಿರಬೇಕು ಎಂಬುದರ ಅರಿವೂ ಬಹಳಷ್ಟು ಜನರಿಗಾಗದು.

ಪೂಜ್ಯ ಸ್ವಾಮೀಜಿ ಸನ್ಯಾಸವನ್ನು ಧರಿಸಿದಾಗ ವಯಸ್ಸು 25; ಜ್ಞಾನ ಸನ್ಯಾಸವನ್ನು ಸ್ವಯಂ ಪ್ರೇರಣೆಯಿಂದ ಸ್ವೀಕರಿಸುತ್ತಿದ್ದಂತೆಯೇ ತಾವು ಎಂ. ಎ. ಓದುತ್ತಿದ್ದುದಕ್ಕೆ ತಿಲಾಂಜಲಿ ಇತ್ತು ಧಾರವಾಡದಿಂದ ಚರಜಂಗಮರಾಗಿ ಹೊರಟುಬಿಟ್ಟರು. ಅನ್ಯರಿಗೆ ಜ್ಞಾನವನ್ನೀಯುವ ಮೊದಲಿಗೆ ತಾವು ಆತ್ಮಸಾಧನೆಯಲ್ಲಿ ತೊಡಗಬಯಸಿದರು. ಎಂಟು ವರ್ಷಗಳ ಕಾಲ ಕಠಿಣ ಸಾಧನೆ ಮುಂದುವರಿಯಿತು. ಬೈಲಹೊಂಗಲದ ಬಳಿಯ ಸೊಗಲ ಸೋಮೇಶ್ವರ, ಬಸವ ಕಲ್ಯಾಣ, ಮೈಸೂರು, ಯಾನಾಗುಂದಿಯ ಮಾಣಿಕ್ಯಗಿರಿ, ಕೊಲ್ಹಾಪುರದ ಬಳಿಯ ಸಿದ್ಧಗಿರಿ ಅವರು ಅನುಷ್ಠಾನ ಮಾಡಿದ ಕೆಲವು ತಾಣಗಳು. ಸೊಗಲ ಸೋಮೇಶ್ವರದ ಸುಂದರ ಜಲಪಾತದ ಬಳಿಯ 'ಹುಲಿಗವಿ' ಎಂಬೊಂದು ತಾಣದಲ್ಲಿ ಏಕಾಗ್ರ ಚಿತ್ತರಾಗಿ ಸಾಧನೆಗೈದರು. ಸುಮಾರು ಎಂಟು ವರ್ಷಕಾಲ ಒಂದು ಹೊತ್ತು ಊಟ, ವಾರಕ್ಕೊಮ್ಮೆ ಸಂಪೂರ್ಣ ನಿರಾಹಾರ. ವಾರಕ್ಕೊಂದು ದಿನ ಮಾತು; ಉಳಿದಾರು ದಿನ ಅಖಂಡ ಮೌನ. ಮಾತನಾಡುವ ದಿನ ಮಾತ್ರ ಭಕ್ತರಿಗೆ ಸಂದರ್ಶನ, ಪ್ರವಚನ. ಅಂದಿನ ಒಂದು ಪ್ರವಚನಕ್ಕೆ ಸುತ್ತಲಿನ ಹಳ್ಳಿಗಳ ಜನ ಕಿಕ್ಕಿರಿದು ನೆರೆಯುತ್ತಿದ್ದುದೇ ಅಲ್ಲದೆ ತರುಣ ಸನ್ಯಾಸಿಯ ತೇಜೋವಾಣಿಗೆ ಮುಗ್ಧರಾಗುತ್ತಿದ್ದರಂತೆ! ಎಂಟು ವರ್ಷಗಳ ಕಾಲ ಉಣ್ಣುವ ಒಂದು ಹೊತ್ತಿನ ಆಹಾರವನ್ನೂ ಸಂಪೂರ್ಣ ಸಪ್ಪೆಯಾಗಿ ಉಪ್ಪು, ಕಾರ, ಹುಳಿ, ಮಸಾಲೆ ಏನೂ ಇಲ್ಲದೆ ಉಣ್ಣುತ್ತಿದ್ದರಂತೆ! ಕೆಲವು ಕಾಲ ಏಕದಳ

ಧಾನ್ಯ ರಾಗಿ, ಜೋಳ, ಗೋಧಿ, ಅಕ್ಕಿ ಮುಂತಾದುವನ್ನು ವರ್ಜಿಸಿ ಕೇವಲ ದ್ವಿದಳ ಧಾನ್ಯಗಳ ಮೇಲೆಯೇ ಇದ್ದರಂತೆ ಇದನ್ನು ಮಾಡಿದ ಉದ್ದೇಶ ತಮ್ಮ ನಾಲಿಗೆಯನ್ನು ನಿಗ್ರಹಿಸಲು, ಆತ್ಮಬಲ ಬೆಳೆಸಿಕೊಳ್ಳಲು. ತಾನು ಕೈಗೊಂಡ ವ್ರತವನ್ನು ಪೂರೈಸಲು ಸಾಧ್ಯವಾಗುವುದೇ ಎಂಬುದನ್ನು ಪರೀಕ್ಷಿಸಲು. ಸುಪ್ರಭಾತ ಮೂರರಿಂದ ಬೆಳಗಿನ 6–30ರ ವರೆಗೆ ಪ್ರಾಣಾಯಾಮ, ಅಖಂಡವಾದ ಪೂಜೆಯನ್ನು ಮಾಡಿ, ಯೋಗಾಸನಗಳನ್ನು ಮಾಡಿ ಹೊರಬಂದರೆ ನೋಡುವವರು ದಂಗಾಗುವ ತೇಜಸ್ಸು.

ಚಿತ್ರದುರ್ಗದಲ್ಲಿ 1965ರ ಫೆಬ್ರುವರಿಯಲ್ಲಿ ತರಳಬಾಳು ಹುಣ್ಣಿಮೆ ನಡೆದಾಗ ಪೂಜ್ಯ ಸ್ವಾಮೀಜಿಯವರು ಆಗಮಿಸಿದ್ದರು. ಆಗ ಅವರ ವಯಸ್ಸು ಮೂವತ್ನಾಲ್ಕು. ಅವರ ತೇಜಸ್ಸು, ವಕ್ತೃತ್ವ, ಪ್ರಕಾಶಮಯ ವ್ಯಕ್ತಿತ್ವದ ಬಗ್ಗೆ ಊರಲ್ಲೆಲ್ಲ ಸುದ್ದಿಯೋ ಸುದ್ದಿ. ಕಾಲೇಜಿನ ಅಧ್ಯಾಪಕವೃಂದ, ವಿದ್ಯಾರ್ಥಿ ಸಮೂಹ, ಹೆಣ್ಣುಮಕ್ಕಳ ನಿರೀಕ್ಷಣಾ ಕೋಣೆ. ದೇವಾಲಯಗಳು, ಎಲ್ಲಿ ನೋಡಿದರೂ ಆ ತೇಜಸ್ವಿ ವ್ಯಕ್ತಿಯ ಸುದ್ದಿಯೇ! ಆದರೆ ಹತ್ತು ದಿವಸಗಳ ಕಾರ್ಯಕ್ರಮದಲ್ಲಿ ಎಂಟು ದಿನ ಕಳೆದಿದ್ದರೂ ನಾನು ಹೋಗಿರಲಿಲ್ಲ. 'ಏನು ಮಹಾ ಇರಬೇಕು; ನೀವೆಲ್ಲ ಅತೀ ಮಾಡುತ್ತೀರಾ?' ಎಂದು ನನ್ನ ಗೆಳತಿಯರನ್ನು ಗದರಿಕೊಂಡಿದ್ದೆ. ಯಾವುದೋ ಅಹಂ ನನ್ನನ್ನು ತಡೆದಿತ್ತು. "ಚಿತ್ರದುರ್ಗದ ಹಿರಿಯ ವಕೀಲರಾಗಿರುವ ಓ. ವೀರಬಸಪ್ಪನವರು ಸ್ವಾಮೀಜಿಯವರನ್ನು "ಅಭಿನವ ವಿವೇಕಾನಂದ" ಎಂದರು ಕಣೇ! ಸಭೆಯಲ್ಲಿ ನಿತ್ಯವೂ ಸ್ವಾಮೀಜಿಯವರ ಭಾಷಣ ಬೇಕೇ ಬೇಕೆಂದು ಜನರು ನೂರಾರು ಚೀಟಿ ಕಳೆಸುತ್ತಾರೆ ಕಣೇ! ಪ್ಲೀಸ್, ಒಂದು ಸಲ ಬಾ." ಓಂಕಾರದೇವಿ ಎಂಬೋರ್ವ ಸಹಪಾಠಿ ತೀರಾ ಹಿಂಸೆ ಮಾಡಿದ್ದಲ್ಲದೆ ಬರಲೇಬೇಕೆಂದು ಕೈಮೇಲೆ ಕೈಯಿಟ್ಟು ಆಣೆ ಮಾಡಿಸಿಕೊಂಡಳು. ಆಕೆಯ ಹುಚ್ಚುತನಕ್ಕೆ ನಕ್ಕು ಒಪ್ಪಿಕೊಂಡೆ. 'ಅಭಿನವ ವಿವೇಕಾನಂದ' — ಈ ವರ್ಣನೆ ಅಂತರಂಗವನ್ನು ಕಲಕಿತ್ತು. ವಿವೇಕಾನಂದರು ಆಗ ಅಚ್ಚುಮೆಚ್ಚಿನ ಆದರ್ಶವ್ಯಕ್ತಿ ನನ್ನ ಪಾಲಿಗೆ! ಓಂಕಾರದೇವಿಯ 'ಆಣೆಗಾಗಿ' ಹೋದುದಾಯಿತು ಅಂದು ಸಂಜೆಯ ಸಭೆಗೆ. ಸ್ವಾಮೀಜಿಯ ಭಾಷಣ ನಂತರವಿತ್ತು. ಆದರೆ ವೇದಿಕೆಯ ಮೇಲೆ ಹಲವಾರು ಮಠಾಧೀಶರು, ನಾಡಿನ ಗಣ್ಯರ ಮಧ್ಯೆ ವಿರಾಜಮಾನರಾಗಿದ್ದರು. ದಂಗು ಬಡಿಸುವ ತೇಜಸ್ಸು! ಇನ್ನು ಭಾಷಣ ಆರಂಭವಾದ ಮೇಲೆ ಆ ವಾಗ್ಝರಿಯಲ್ಲಿ ತೇಲಿಹೋದೆ. ಶಬ್ದಮುಗ್ಧಳಾದೆ. ಇಡೀ ಸಭೆಯೇ ಮಂತ್ರಮುಗ್ಧವಾಗಿತ್ತು. ಅಂದು ಸ್ವಾಮೀಜಿ ಮಾಡಿದ "ಅನುಭವ ಮಂಟಪ" ಎಂಬ ವಿಷಯ ನನ್ನತನವನ್ನು ಮರೆಸಿ, ಬಸವಣ್ಣನ ಕಲ್ಯಾಣದ ದರ್ಶನಮಾಡಿಸಿತು. ಸಭೆ ಮುಗಿದ ನಂತರ ಸ್ತಂಭೀಭೂತಳಾಗಿದ್ದ ನನ್ನನ್ನು ಸಹಪಾಠಿಯರು ಎಚ್ಚರಿಸಿದರು. "ಓಂಕಾರದೇವಿ, ದೊಡ್ಡ ತಪ್ಪುಮಾಡಿದೆ ನೀನು! ನಿನ್ನೆ ಮಾಡಿದ ಒತ್ತಾಯ ಮೊದಲೇ ಏಕೆ

ಮಾಡಬಾರದಾಗಿತ್ತು? ಎಂಥ ದೊಡ್ಡ ನಷ್ಟ ನಾನು ಮಾಡಿಕೊಂಡೆ." ಪಶ್ಚಾತ್ತಾಪದ ಕಣ್ಣೀರು ತುಂಬತೊಡಗಿದ್ದವು. "ಇದೂ ಚೆನ್ನಾಗಿದೆ! ಈ ಹೊತ್ತು ಸಹ ಬರಲು ನೀನು ತಯಾರೇ ಇದ್ದಿಲ್ಲ" ಎಂದು ಆಕೆ ಉದ್ಗರಿಸಿದಳು. "ಇರಲಿ. ನನ್ನ ಅದೃಷ್ಟ ಇಷ್ಟೆ! ಅಂತೂ ನಿನಗೆ ಚಿರಋಣಿ." ಹೀಗೆ ಎಂಥಾ ವಿಚಾರವಾದಿಗಳನ್ನೂ, ಚಿಂತನ ಶೀಲರನ್ನು ಆಕರ್ಷಿಸುವ ಮಹಾತೇಜಸ್ವಿ ಪೂಜ್ಯ ಸ್ವಾಮೀಜಿ. ಈ ತೇಜಸ್ಸಿನ ಹಿಂದೆ ದೈವೀಕಾರುಣ್ಯವಿದೆ, ಬಸವಣ್ಣನ ಭದ್ರ ರಕ್ಷಾಕವಚವಿದೆ, ಅಸಾಮಾನ್ಯ ಸಾಧನೆ ಇದೆ.

ಸಾಧನೆಯಲ್ಲಿ ಸ್ವಾಮೀಜಿಯವರಿಗಿದ್ದ ದೃಢತೆ ಅಪಾರ. ಜ್ಞಾನಸನ್ಯಾಸ ಸ್ವೀಕರಿಸಿದಾಗ ನಿಲ್ಲಲು ನೆಲೆಯಿಲ್ಲ; ಹೊತ್ತಿಗೆ ಸರಿಯಾಗಿ ಅನ್ನಾಹಾರವಿಲ್ಲ. ಬಂಧು ಬಾಂಧವರ ಮನೆಯಲ್ಲಿ ಕಾಲಿಡಲೂ ಇಷ್ಟವಿಲ್ಲ; ಇಷ್ಟಾದರೂ ಹಿಡಿದ ನೇಮವನ್ನು ಎಡಬಿಡದ ಛಲ. ಓದುವ ಆಕಾಂಕ್ಷೆ ವಿಪರೀತವಿದ್ದರೂ, ಓದಲು ಪುಸ್ತಕಗಳಿಲ್ಲ, ಕುಳಿತೋದಲು ಇನಿತು ತಾಣವಿಲ್ಲ. ಇಷ್ಟೆಲ್ಲ ಸಂಕಷ್ಟಗಳ ಮಧ್ಯದಲ್ಲೂ ಪುಟಕ್ಕಿಟ್ಟ ಚಿನ್ನದಂತೆ ಸಂಸ್ಕರಣಗೊಳ್ಳುತ್ತಲೇ ಬಂದರು ಸ್ವಾಮೀಜಿ. ಸ್ವಂತಿಕೆಯ ಬಲದಿಂದ ಜನರನ್ನು ಆಕರ್ಷಿಸಿದರು–ಪ್ರವಚನಾಮೃತ ಹರಿಸಿ. ಇಂಥ ನಿರಂತರ ತಿರುಗಾಟದ ಮಧ್ಯದಲ್ಲಿಯೇ ಸಾಹಿತ್ಯ ರಚನೆಗೂ ತೊಡಗಿದರು.

ಇರಲಿಕ್ಕೆ ಸ್ಥಿರತಾಣ, ಓದಲಿಕ್ಕೆ ರಾಶಿರಾಶಿ ಗ್ರಂಥಗಳು, ಹೊತ್ತಿಗ್ಹೊತ್ತಿಗೆ ಹಣ್ಣು ಹಾಲು, ಬಾಯಿಗೆ ತುತ್ತಿಟ್ಟಂತೆ-ಬಿಡಿಬಿಡಿಸಿ ಧಾರ್ಮಿಕ ಪಾಠ ಹೇಳುವ ಗುರುಗಳು, ತೆಂಗಿನ ಚಿಪ್ಪು ತಿರುಳನ್ನು ಇಟ್ಟುಕೊಂಡು ರಕ್ಷಿಸುವಂತಹ ರಕ್ಷಣೆ; ಇಷ್ಟೆಲ್ಲಾ ನಾವು ಒದಗಿಸಿದರೂ ಹಲವಾರು ಸಾಧಕರು ವ್ಯಕ್ತಿತ್ವವನ್ನು ರೂಪಿಸಿಕೊಳ್ಳು ವುದು ಕಷ್ಟ. ಬಡತನದ ಬವಣೆಯಲ್ಲಿ ಓದಿ ಶ್ರೀಮಂತನೋ ವಿದ್ಯಾವಂತನೋ ಆದ ಓರ್ವ ವ್ಯಕ್ತಿ ತನ್ನ ಮಕ್ಕಳು ಆ ಬಗೆಯ ಕಷ್ಟಪಡಬಾರದು ಎಂದು ಆಶಿಸುವಂತೆ, ತಾವು ಪಟ್ಟಕಷ್ಟ ತಮ್ಮ ಶಿಷ್ಯರಿಗೆ ಆಗಬಾರದು ಎಂದು ಸುರಕ್ಷಿತವಾದ ರೀತಿಯಲ್ಲಿ ಜೋಪಾನಮಾಡಿದರೂ ಸಾಧಕರು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳರು. ಆದರೆ ಸ್ವಾಮೀಜಿ ಯಾದರೋ 'ಬಿತ್ತದೆ ಬೆಳೆಸದೆ ಬಂದ ಹೆಬ್ಬೆಳಸಿನ ರಾಶಿ; ತಮ್ಮಿಂದ ತಾವಾದ ಅಘಟಿತ ಚರಿತ್ರರು.'

ಬಸವ ತತ್ವದ ಆಕಾಶವಾಣಿ

ಸಂಗೀತಗಾರರು ಎಷ್ಟೋ ಜನರಿರಬಹುದು. ಆಕಾಶವಾಣಿಯ ಮೂಲಕ ಅವರ ಧ್ವನಿ ಕೇಳಬಂದಾಗ ಮಾತ್ರ ಜನರಿಗೆ ತಿಳಿದುಬರುವುದು, ಸಂಗೀತದ ಮಹತ್ವ ಮತ್ತು ಸಂಗೀತಗಾರರ ಹಿರಿಮೆ. ಹಾಗೆಯೆ ಬಸವ ತತ್ತ್ವದ ಆಚರಕರು ಅಲ್ಲಲ್ಲೇ ಸಾಕಷ್ಟು

ಇದ್ದರೂ ಶಕ್ತಿವಂತ ಪ್ರಚಾರಕರು ಇದ್ದಿರದ ಕಾಲದಲ್ಲಿ ಧರ್ಮಪ್ರಚಾರದ ವ್ಯವಸ್ಥೆ ಯೊಂದನ್ನು ಆರಂಭಿಸಿದ ಕ್ರಾಂತಿಪುರುಷ ಪೂಜ್ಯ ಸ್ವಾಮೀಜಿ. ಆಮಂತ್ರಣ ನೀಡಿ ದಾಗ, ಅಡ್ಡಪಲ್ಲಕ್ಕಿ ತಂದಾಗ, ಹಣ ಕೂಡಿಸಿ ಮೆರವಣಿಗೆ ಮಾಡಲು ಕರೆದಾಗ ಹೋಗುವ ಪ್ರವೃತ್ತಿಯವರಾಗದೇ, ಮಳೆಗಾಳಿ ಬಿಸಿಲೆನ್ನದೆ ಪಾದಯಾತ್ರೆಮಾಡಿ ಹಳ್ಳಿ ಹಳ್ಳಿಗೂ ಧರ್ಮಪ್ರಚಾರ ಕೈಗೊಂಡ ಮಹಾನ್‌ವ್ಯಕ್ತಿ ಸ್ವಾಮೀಜಿ. ಪೂಜ್ಯ ಸ್ವಾಮೀಜಿ ಯವರ ಪಾದಯಾತ್ರೆಯಿಂದ ಇಡೀ ಬೀದರ್ ಜಿಲ್ಲೆ ಮತ್ತು ಕಲಬುರ್ಗಿ ಜಿಲ್ಲೆಯ ಹಲವು ಭಾಗಗಳು ಜಾಗೃತಗೊಂಡವು, ಪುನೀತವಾದುವು.

ಹಿಂದೂಪ್ರಜ್ಞೆಯನ್ನು, ಬಸವ ಭಕ್ತಿಯನ್ನು, ರಾಷ್ಟ್ರಪ್ರೇಮವನ್ನು, ಜಾತ್ಯತೀತ ಧೋರಣೆಯನ್ನು ಬೆಳೆಸಿಕೊಂಡ ಅಸಂಖ್ಯಾತ ಚೇತನಗಳು ರೂಪುಗೊಂಡುದು ಸ್ವಾಮೀಜಿ ಯವರ ಶ್ರೀವಾಣಿಯ ಪ್ರತಿಫಲವಾಗಿಯೇ! ಇಂದು ಅವರನ್ನು ಬೈದು ಬದುಕುವವರೂ ಅವರು ಕೊಟ್ಟ ಬಸವಣ್ಣನವರ ತತ್ತ್ವಜ್ಞಾನದ ಸಂಪತ್ತಿನ ಮೇಲೆಯೇ ಎಂದರೆ ಅತಿಶಯೋಕ್ತಿಯಾಗದು. ಮಕ್ಕಳಿಗೆ ತಾಯಿ ತುತ್ತಿಟ್ಟು ಉಣ್ಣಿಸುವಂತೆ ತಮ್ಮ ಶಿಷ್ಯರಿಗೆ ನಿರ್ವಂಚನೆಯಿಂದ ಜ್ಞಾನದಾನ ಮಾಡಿದ ತತ್ತ್ವಜ್ಯೋತಿ ಪೂಜ್ಯ ಸ್ವಾಮೀಜಿಯವರು. ಧರ್ಮ ಪ್ರಚಾರದ ಮಹಾನ್ ಕಾರ್ಯದಲ್ಲಿ ಸ್ವಾಮೀಜಿಯವರ ಕೊಡುಗೆ ಅಸಾಮಾನ್ಯ! ಕರ್ನಾಟಕದಾದ್ಯಂತ, ಗಡಿನಾಡುಗಳಲ್ಲಿ ತತ್ತ್ವದ ಕಹಳೆಯನ್ನೂದಿದ ಅಗ್ರಗಣ್ಯರು. ಅತಿ ಹೆಚ್ಚಿನ ಜನರ ಮೇಲೆ, ವಚನ ಶಾಸ್ತ್ರ ಪಿತಾಮಹ ಫ. ಗು. ಹಳಕಟ್ಟಿಯವರು, ಉತ್ತಂಗಿ ಚನ್ನಪ್ಪನಂತಹವರು ಮುದ್ರಿಸಿ ಒತ್ತೆಡೆಯಿಟ್ಟ ವಚನ ವಿದ್ಯುತ್ತನ್ನು, ಪ್ರಾಯೋಗಿಕವಾಗಿ ಹರಿಸಿ, ಧರ್ಮಜಾಗೃತಿ ಮಾಡಿದ ವ್ಯಕ್ತಿ ಸ್ವಾಮೀಜಿಯವರು.

ನಿರ್ವಂಚನೆಯ ನಿರ್ಮೋಹಿ

ತನಗಿಂತಲೂ ತನ್ನ ಮಕ್ಕಳು ಮುಂದರಿದರೆ, ವಿದ್ಯಾವಂತರಾದರೆ ತಾಯಿತಂದೆ ಮತ್ಸರಿಸದೆ, ಹರ್ಷಿಸುವರು. ಲೌಕಿಕರಲ್ಲಿರುವ ಆ ಪ್ರವೃತ್ತಿ ಸಹ ಅನೇಕ ಧರ್ಮ ಗುರುಗಳಲ್ಲಿರದು. ತನಗಿಂತಲೂ ತನ್ನ ಶಿಷ್ಯರು ಕೀರ್ತಿಶಾಲಿಗಳು, ಪ್ರತಿಭಾವಂತರೂ ಆದರೆ ಸಹಿಸದೆ ಹಿಂದಕ್ಕೆಳೆಯುವ, ನಿರುತ್ಸಾಹ ಉಂಟುಮಾಡುವ ಪ್ರವೃತ್ತಿ ಅನೇಕ ಗುರುಗಳದಾಗಿರುವಾಗ ತಮ್ಮ ಶಿಷ್ಯರು ಹೆಚ್ಚಿನ ಪ್ರತಿಭಾವಂತರು, ಕೀರ್ತಿಶಾಲಿಗಳೂ ಆದರೆ ನಿರ್ವಂಚನೆಯಿಂದ ಸ್ವಾಗತಿಸುವ ಆದರಿಸುವ, ಪ್ರೋತ್ಸಾಹಿಸುವ, ಹರ್ಷಿಸುವ ಪ್ರವೃತ್ತಿ ಸ್ವಾಮೀಜಿಯವರದು. ಅಪ್ರಮಾಣಿಕತನ, ಸುಳ್ಳು, ವಂಚನೆ, ಕುಹಕ, ಕೃತ್ರಿಮತೆಗಳು ಈ ವ್ಯಕ್ತಿಯನ್ನು ಜೀವಮಾನ ಪರ್ಯಂತರ ಸೋಂಕುತ್ತಲೇ ಇಲ್ಲ ಅವರ ನಿರ್ವಂಚನೆ, ಪ್ರಾಮಾಣಿಕತೆ, ಔದಾರ್ಯ, ತ್ಯಾಗಗಳನ್ನು ಕೆಲವರು ದುರುಪಯೋಗ ಮಾಡಿಕೊಂಡಾಗ (ಅದು ಈ ಮಾನವ ಜಗತ್ತಿನಲ್ಲಿ ಸ್ವಾಭಾವಿಕ) ದಿಗ್ಭ್ರಾಂತರೂ

ಚಿಂತಾಕಾಂತರೂ ಆಗುತ್ತಾರೆ. "ಅವರಿಗೆ ನಾವೇನೂ ಕೆಡುಕುಮಾಡಲಿಲ್ಲ. ಎಷ್ಟೊಂದು ಒಳ್ಳೆಯದನ್ನೇ ಮಾಡಿದೆವಲ್ಲಾ; ಆದರೂ ಹೀಗೇಕೆ ಕೆಟ್ಟುದು ಬಗೆಯುತ್ತಾರೆ?" ಎಂದು ಸ್ವಾಮೀಜಿ ದಿಗ್ಭ್ರಾಂತರಾಗಿ ನುಡಿದರೆ ಅವರ ಮುಗ್ಧ ಪ್ರಶ್ನೆಗೆ ಸೋಜಿಗವೆನಿಸುತ್ತದೆ ಮತ್ತೂ ತಮ್ಮಾದರ್ಶದಲ್ಲಿ ಅಚಲರು. "ನಾವು ಮಾಡಿದ ಒಳ್ಳೆಯದು ನಮ್ಮ ಪಾಲಿನ ಬುತ್ತಿ. ಒಳ್ಳೆಯದನ್ನು ಮಾಡಿಸಿಕೊಂಡವರು ಕೆಟ್ಟುದ್ದು ಮಾಡಿದರೇನಂತೆ. ನಾವು ಮಾಡಿದ್ದು ಒಳ್ಳೆಯದು ತಾನೇ!" ಎಂದು ದೃಢವಾಗಿ ನುಡಿಯುವರು. ತಮ್ಮಲ್ಲಿರುವ ಜ್ಞಾನವನ್ನು ನಿರ್ವಂಚನೆಯಿಂದ ಧಾರೆ ಎರೆಯುವ ಸ್ವಾಮೀಜಿ, ಭೋಳಾ ಶಂಕರನಂತೆ ಎಂದರೂ ಉತ್ಪ್ರೇಕ್ಷೆಯಲ್ಲ. ಕುತಂತ್ರ ಕಪಟ ಕಾರಸ್ಥಾನಗಳನ್ನರಿಯದ ಮುಗ್ಧ ಹೃದ ಯದ ಭೋಳಾ ಶಂಕರ ಭಸ್ಮಾಸುರನಿಗೆ ವರವಿತ್ತು, ತನ್ನ ತಲೆಯ ಮೇಲೆ ಕೈ ಇಡಿಸಿ ಕೊಳ್ಳಲವಕಾಶವೀಯುವಂತೆ, ಎಷ್ಟೋ ಬಾರಿ ಸ್ವಾಮೀಜಿ ಅತೀವ ಉಪಕಾರ ಮಾಡಿ, ಉಪಕಾರ ಹೊಂದಿದವರಿಂದ ನೋವು ತಿಂದಿರುವುದೂ ಅಷ್ಟೇ ಸಹಜವಾಗಿದೆ. [ಹೀಗಾಗಿ ಭಸ್ಮಾಸುರನು ತನ್ನ ತಲೆಯ ಮೇಲೆ ತಾನೇ ಕೈಯಿರಿಸಿಕೊಳ್ಳುವಂತೆ ಮಾಡಿದ ವಿಷ್ಣು ವಿನ ಕೆಲಸವನ್ನು ಕೆಲವೊಮ್ಮೆ ನಾವುಗಳು ಮಾಡುವ ಪ್ರಸಂಗವೂ ಒದಗಿ ಬಿಡುತ್ತದೆ. ಅಷ್ಟಾದರೂ ಅವರ ಉಪಕಾರ ಗೈವ ಸ್ವಭಾವದಲ್ಲಿ ಬದಲಾವಣೆಯಿಲ್ಲ. "ಒಳ್ಳಿತನ್ನು ಮಾಡುವುದು ನಮ್ಮ ಕರ್ತವ್ಯ. ಉಳಿಸಿಕೊಳ್ಳುವುದು ಬಿಡುವುದು ಅವರ ಕರ್ತವ್ಯ. ತಾಯಿ-ತಂದೆ ಮಕ್ಕಳನ್ನು ಮಮತೆಯಿಂದ ಸಾಕುತ್ತಾರೆ. ದೊಡ್ಡವರನ್ನಾಗಿ ಬೆಳೆಸು ತ್ತಾರೆ.ಕೆಲವು ಮಕ್ಕಳು ತಮ್ಮ ಹೆಂಡರು ಬಂದ ತಕ್ಷಣ ಮಾತಾ ಪಿತೃಗಳನ್ನು ಮರೆತು ಸ್ವಾರ್ಥಿಗಳಾಗಿ ಬೇರೆಯಾಗಿ ತಮ್ಮ ಹೆಂಡರ ಮಕ್ಕಳ ರಕ್ಷಣೆಯಲ್ಲಿ, ಸುಖದಲ್ಲಿ ಆಸಕ್ತ ರಾಗುತ್ತಾರೆ. ತಾಯಿತಂದೆಯವರನ್ನು ಸಾಕಬೇಕಾದುದು ಕರ್ತವ್ಯವೇ ಇದ್ದರೂ ಅವರು ಮಾಡುವುದಿಲ್ಲ. ತಮ್ಮ ವಾತ್ಸಲ್ಯಕ್ಕಾಗಿ ಮಕ್ಕಳನ್ನು ಬೆಳೆಸಬೇಕು. ಅವ ರಿಂದ ಏನೂ ನಿರೀಕ್ಷಿಸದೆ ಇರಬೇಕು. ಅಂದರೆ ಇವರು ನೆಮ್ಮದಿಯಿಂದ ಇರುತ್ತಾರೆ. ನಾವು ವಿದ್ಯೆ ಕೊಡಿಸಿದೆವು, ಸಾಕಿದೆವು ಎಂದು ಪೇಚಾಡಬಾರದು. ಏಕೆಂದರೆ ಅವನಿಗೆ ತನ್ನ ಹೆಂಡತಿ–ಮಕ್ಕಳನ್ನು ಸಾಕುವ ತಾಕತ್ತಾದರೂ ಬಂದಿರುವುದಲ್ಲವೆ? ಅದನು ಕೊಟ್ಟ ಪುಣ್ಯ ಇವರ ಪಾಲಿಗೆ ಇದ್ದೇ ಇರುತ್ತದೆ. ಅದೇ ರೀತಿ ಗುರುವು ತ್ಯಾಗ ಬುದ್ಧಿಯಿಂದ ಜ್ಞಾನ ನೀಡಿ ಶಿಷ್ಯರನ್ನು ದೊಡ್ಡವರನ್ನು ಮಾಡುವನು. ಅವರು ಕೃತಘ್ನ ರಾಗಿ ತೊಂದರೆ ಕೊಟ್ಟರೂ ಚಿಂತೆಯಿಲ್ಲ; ಸಮಾಜಕ್ಕೆ ವಂಚನೆ ಮಾಡದೆ ಉಪಕಾರ ಮಾಡಿದರೆ ಸಾಕು."

ಇಂಥ ವಿಶಾಲ ಹೃದಯವನ್ನು ಹೊಂದಿರುವ ಸ್ವಾಮೀಜಿಯವರ ಮಾತು ಕೇಳಿ ದಾಗ ನಮಗೇ ಅಚ್ಚರಿ. ಅಂಥ ವೈಶಾಲ್ಯವಿದೆಯೆಂತಲೇ ಅನೇಕ ಧರ್ಮ ಬೋಧಕರಿಗೆ ನಿರಾಶರಾಗದೆ ತರಬೇತಿ ನೀಡಿದ್ದಾರೆ ಪೂಜ್ಯ ಗುರೂಜಿ.

ಕನ್ನಡದ ನಡೆಲಿಂಗ

ಸಾಹಿತ್ಯವನ್ನು ಪ್ರಕಟಿಸಿ ಉಗ್ರಾಣಗಳಲ್ಲಿಟ್ಟರೆ ಭಾಷೆ ಬಳಕೆಗೆ ಬರದು; ಜನ ವಾಣಿ ಸಂಧಾರಿಸದು. ಸ್ವಾಮೀಜಿ ನಡೆಲಿಂಗವಾಗಿ ಸಂಚರಿಸಿ ಹಳ್ಳಿ ಹಳ್ಳಿಗೆ ವಚನ ಸಾಹಿತ್ಯವನ್ನು, ಧಾರ್ಮಿಕ ಸಾಹಿತ್ಯವನ್ನು ಹಂಚಿ ಕನ್ನಡ ಭಾಷೆಯ ರುಚಿಯನ್ನು ಜನಕ್ಕೆ ತೋರಿಸಿದ್ದಾರೆ. ಮಾತೃಭಾಷೆಯ ಅಭಿಮಾನವಿಲ್ಲದವರಿಗೆ ಛೇಡಿಸಿ, ಬೈದು, ಅಭಿಮಾನ ಹುಟ್ಟುವಂತೆ ಮಾಡಿದ್ದಾರೆ. ಸಾಹಿತ್ಯ ಕೃತಿಗಳು ಹಳ್ಳಿ ಹಳ್ಳಿಗಳಿಗೆ ಮುಟ್ಟಲು ಸಾಧ್ಯವಾಗುವಂತೆ ಅಖಂಡವಾಗಿ ಎರಡು ವರ್ಷ ಕಾಲ ಪಾದ ಯಾತ್ರೆಯಲ್ಲಿ ಸಂಚರಿಸಿದ್ದಾರೆ.

ಇಂತಹ ಸ್ವಾಮೀಜಿ ಅದಮ್ಯ ಉತ್ಸಾಹಿ; ಬಿರುಗಾಳಿಗೆ ಸಿಕ್ಕು ನೌಕೆ ಅಲುಗು ವಾಗ ಲಂಗರು ಅದಕ್ಕೊಂದು ನೆಲೆಕೊಟ್ಟಂತೆ, ಎಂಥ ಎಡರುಗಳ ಮಧ್ಯದಲ್ಲೂ ಧೈರ್ಯ ನೀಡಿ ಮುನ್ನಡೆವಂತೆ ಆತ್ಮ ಬಲ ನೀಡುವರು. ವಿಶ್ವಕಲ್ಯಾಣ ಮಿಷನ್ ವೃಕ್ಷದ ತಾಯಿ ಬೇರು; ಸಾಹಸದ ಕಲ್ಪತರು; ಜ್ಞಾನದ ಕಾಮಧೇನು. ಇಂಥ ಪೂಜ್ಯರು ಸ್ಫೂರ್ತಿಯ ಕುಂಡವಾಗಿ ನಮ್ಮೆಲ್ಲರ ಮಧ್ಯೆ ಚಿರಕಾಲ ಬಾಳಲೆಂದು, ಪರಮಾತ್ಮನಲ್ಲಿ ಪ್ರಾರ್ಥಿಸೋಣ.

—ಜಗದ್ಗುರು ಮಾತೆ ಮಹಾದೇವಿ

ಮಾತು ಮಾಣಿಕ್ಯ

ಧೀರರು ಎಡರುಗಳನ್ನು ದಾಟುತ್ತಾರೆ. ಮತ್ತು ಉತ್ತಮವಾದ ಸಿದ್ಧಿಯನ್ನೂ ಪಡೆಯುತ್ತಾರೆ ಒಳ್ಳೆಯ ಸಂಪತ್ತನ್ನೂ ಹೊಂದುತ್ತಾರೆ ಒಟ್ಟಾರೆ ಹೇಳಬೇಕೆಂದರೆ ಧೈರ್ಯವೇ ಸರ್ವತ್ರ ಸಾಧನವಾಗಿದೆ.

ಸ್ಥೈರ್ಯ, ಕ್ಷಮಾಗುಣ, ಬಹಿರಿಂದ್ರಿಯ ನಿಗ್ರಹ, ಕದಿಯದಿರುವಿಕೆ, ಶುಚಿತ್ವ ಮನಸ್ಸಿನ ಸಂಯಮ ಬುದ್ಧಿ ವಿದ್ಯೆ, ಸತ್ಯತ್ವ, ಶಾಂತಸ್ವಭಾವ – ಈ ಹತ್ತು ಧಾರ್ಮಿಕನ ಲಕ್ಷಣಗಳು.

ತಾನು ಕೊಟ್ಟರೆಲ್ಲಿ ಬಡನಾಗುತ್ತೇನೋ ಎಂಬ ಭಯದಿಂದಲೇ ಕೃಪಣನು ದಾನ ಮಾಡುವುದಿಲ್ಲ. ಇಷ್ಟಾದರೂ ಕೃಪಣನಿಗೆ ಒಂದು ದಿನ ಬಡತನ ಪ್ರಾಪ್ತಿ ಯಾಗುತ್ತದೆ. ಕೊಡದಿದ್ದರೆಲ್ಲಿ ತಾನು ಬಡವನಾಗುತ್ತೇನೋ ಎಂಬ ಭಯದಿಂದಲೇ ಶ್ರೀಮಂತ ದಾನಮಾಡುತ್ತಾನೆ. ಅವನ ಸಂಪತ್ತು ವೃದ್ಧಿಯಾಗುತ್ತಲೇ ಇರುತ್ತದೆ.

—ಕುವಲಯಾನಂದ

ಮಾತು ಜ್ಯೋತಿರ್ಲಿಂಗ

ಬುದ್ಧಿಯ ತೃಪ್ತಿಗೆ ದಿವ್ಯಾನುಭವವೇ ಅಂತಿಮ ಆಹಾರ. ದಿವ್ಯಾನುಭವದಿಂದ ದೇವನನ್ನು ಅರಿತು, ತನ್ನತನವನ್ನು ಮನುಷ್ಯ ಕಳೆದುಕೊಳ್ಳುವನು.

ಎರಡು ಗಿಡಗಳು ತಾಕಲಾಡಿದಾಗ ಹುಟ್ಟುವ ಕಿಚ್ಚು ಸುತ್ತಲಿನ ತರುಮರ

—ಬಸವಣ್ಣನವರು

ಗಳನ್ನೆಲ್ಲ ಸುಟ್ಟುಹಾಕುವುದು. ಇಬ್ಬರು ಮಹಾಜ್ಞಾನಿಗಳ ನಡುವೆ ನಡೆಯುವ ಅನುಭವದ ಮಂಥನ ಶರೀರ ಗುಣಗಳನ್ನು ನಾಶಮಾಡುತ್ತದೆ.

—ಅಕ್ಕಮಹಾದೇವಿ

ಕಾಡಿನಲ್ಲಿ ಹುಡುಕಬೇಕೆಂದರೆ ಅದೊಂದು ಗಿಡವಲ್ಲ; ಸರೋವರದಲ್ಲಿ ಅರಸಲು ಅದು ಕಪ್ಪೆ, ಮೀನಲ್ಲ. ದೇಹವನ್ನು ದಂಡಿಸಬೇಕೆಂದರೆ ಕೂಲಿಕೊಡುವ ಸಾಹುಕಾರ ನಲ್ಲ. ಮಾನವ ದೇಹದಲ್ಲಿಯೇ ಹುದುಗಿರುವ ಆತ್ಮಸ್ವರೂಪಿ ದೇವನನ್ನು ತನ್ನೊಳಗೇ ಅರಸಿ ಕಾಣಬೇಕು.

ಎಲ್ಲರೂ ಅಹುದೆಂದ ಮಾತ್ರಕ್ಕೆ ಅದನ್ನು ಪ್ರಮಾಣವಾಗಿ ಶರಣರು ಸ್ವೀಕರಿಸರು.

—ಅಂಬಿಗರ ಚೌಡಯ್ಯ

ಎಲ್ಲರೂ ಅಲ್ಲವೆಂದ ಮಾತ್ರಕ್ಕೆ ಅದನ್ನು ಬಿಟ್ಟುಕೊಡರು. ತಮ್ಮ ಮನೋಮೂರ್ತಿ ಪರಮಾತ್ಮನು ಒಪ್ಪಿದುದನ್ನು ಮಾತ್ರ ಶರಣರು ಆಚರಿಸುವರು.

ತಾವು ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ದೇವನೊಲಿಮೆ ಎಂತು ಸಾಧ್ಯ?

—ತೋಂಟದ ಸಿದ್ಧಲಿಂಗೇಶ್ವರರ

ತಮ್ಮ ಜಾತಿಪ್ರಜ್ಞೆ, ಮಾತಾಪಿತೃಮೋಹವಿರುವ ಬಹುಮುಖಿಗಳಿಗೆ ದೈವಾನುಗ್ರಹು ಸಮನಿಸದು.

ಮಳೆ ಹೊಯಿದರೆ ಆಕಾಶ ನೆನೆಯದು, ಬಿರುಗಾಳಿ ಬೀಸಿದರೆ ಆಕಾಶ

—ಅಲ್ಲಮ ಪ್ರಭುದೇವರು

ಅಲುಗದು, ಅಲಗಿನಿಂದ ಇರಿದರೆ ಆಕಾಶ ಹರಿಯದು! ಹಾಗೆಯೇ ತುಚ್ಛರು ಆಡುವ ಮಾತು ಜ್ಞಾನಿಯಾದ ಶರಣನನ್ನು ಧೃತಿಗೆಡಿಸಬಲ್ಲುದೆ? ಕಲಂಕಿತ ಮಾಡಬಲ್ಲದೇ? ನಾಸ್ತಿಕರಾಡುವ ನಿಂದೆ, ಖಂಡನೆಯ ಮಾತು ಪರಮಾತ್ಮನನ್ನು ಕಲಂಕಿತಗೊಳಿಸ ಬಲ್ಲವೇ?

—ತೋಂಟದ ಸಿದ್ಧಲಿಂಗೇಶ್ವರರು

ಓದುಗರ ಓಲೆ

ಪರಮ ಪೂಜ್ಯ ಜ. ಮಾ. ಮಹಾದೇವಿಯವರ ಚರಣಸನ್ನಿಧಿಗೆ,

ತಾವು ವಿಶ್ವಾಸದಿಂದ ಕಳಿಸುತ್ತಿರುವ 'ಕಲ್ಯಾಣ ಕಿರಣ' ಪತ್ರಿಕೆಯ ಮೂಲಕ ತಮ್ಮ ಸಮಸ್ತ ಕ್ರಿಯಾ ಮುಖದಲ್ಲಿನ ಅಭಿವೃದ್ಧಿ, ಹಾಗೂ ಸತ್ವಭರಿತ ಕಾಯಕ ಸದ್ಭಾವ ಹಾಗೂ ವಿವಿಧ ವಿಚಾರವೀಚಿಗಳ ಬಾಹುಳ್ಯಗಳನ್ನು ಸತತವಾಗಿ ಓದಿ ಸಂತೋಷಪಡುವವರಲ್ಲಿ ನಾನೊಬ್ಬ. ತಮ್ಮ 'ಬಸವ ಭಾರತಿ ವಿದ್ಯಾಲಯ' ಶಾಲಾ ಕಟ್ಟಡ ಪ್ರಾರಂಭೋತ್ಸವದ ಆಹ್ವಾನ ಪತ್ರಿಕೆಯು ತಲುಪಿ ಸಂತೋಷವಾಯಿತು. ತಮ್ಮಗಳ ಅಗಾಧ ಕರ್ತೃತ್ವ ಶಕ್ತಿಯ ಅಪರಿಮಿತ ಅಭಿವೃದ್ಧಿ ಸಾಧನೆಯ ವಿಷಯಗಳು ಎಂಥವರನ್ನೂ ಶಬ್ದಮುಗ್ಧರನ್ನಾಗಿ ಮಾಡುತ್ತವೆ.

"...ಕ್ರಿಯಾ ಸಿದ್ಧಿಸ್ಸತ್ವೇ ಭವತಿ ಮಹತಾಂನೋಪಕರಣೇ" ಎಂದೆನ್ನುವ ಕಾಳಿದಾಸನ ಅನುಭವೋಕ್ತಿ ನೀವುಗಳು ಸಾಧಿಸಿರುವ ಸಾಧನೆಗೆ ಪೂರ್ಣ ಅನ್ವಯಿಸುವ ಮಾತು. ತಮ್ಮ ಯಾವತ್ತೂ ಅಭಿವೃದ್ಧಿ ಕಾರ್ಯಗಳೂ ಸರ್ವೇಶ್ವರ ಕೃಪೆಯಿಂದ ಯಶಸ್ವಿ ಗೊಳ್ಳಲೆಂದು ಸದಾ ಹಾರೈಸುತ್ತಿರುವ ನನ್ನ ಅನೇಕ ಸಾಷ್ಟಾಂಗ ಪ್ರಣಾಮಗಳು.

ಇತೀ ತಮ್ಮ ಕೃಪಾಭಿಲಾಷಿ,

ಎರೇಸೀಮೆ ಚೆನ್ನಪ್ಪ, ಬೆಂಗಳೂರು.

14-8-1981.

ಪೂಜ್ಯ ಶ್ರೀ ಮಾತೆಯವರಲ್ಲಿ ವಂದನಾಪೂರ್ವಕ ಬಿನ್ನಹ.

ತಾವು ಅಭಿಮಾನವಿಟ್ಟು ಕಳಿಸುತ್ತಿರುವ 'ಕಿರಣ' ತಲುಪಿದೆ. ಅದರಲ್ಲಿ ಪ್ರಕಟ ಗೊಂಡಿರುವ ಲೇಖನಗಳು ಎಂದಿನಂತೆ ವಿಚಾರಪೂರ್ಣವೂ, ಬೋಧಪ್ರದವೂ ಆಗಿವೆ. ಈ ಸಲದ (ಆಗಸ್ಟ್ ಸಂಚಿಕೆ) 'ಹರಕೆ' ತುಂಬಾ ಕಳಕಳಿಯಿಂದ ಕೂಡಿದುದಾಗಿದೆ. 'ಅನಾಮಧೇಯ'ರ ಲೇಖನಕ್ಕೆ ಕೊಟ್ಟಿರುವ ಉತ್ತರವು ತರ್ಕಬದ್ಧವಾಗಿ, ಆಧಾರ ಪೂರ್ವಕವಾಗಿದೆ. ಪುಟ 62-63ರಲ್ಲಿರುವ ಮಾತುಗಳು ಮುಟ್ಟಿಮುಟ್ಟಿ ನೋಡಿ ಕೊಳ್ಳುವಂತಹ, ಸವರಿಕೊಳ್ಳುವಂತಹ, ನೇವರಿಸಿಕೊಳ್ಳುವಂತಹ ಚಾಟಿ ಏಟುಗಳು. 'ಬಸವ ಪಂಚಮಿಯಂದು ಬಯಲಾದ ಬೆಳಕು' ಎಂಬ ಲೇಖನದಲ್ಲಿ ಬಸವಣ್ಣನವರು ಲಿಂಗೈಕ್ಯರಾದುದು ೩-೭-೧೧೯೬ರಂದು ಎಂದು ಯಾರೋ ಅಭಿಪ್ರಾಯಪಡುತ್ತಾರೆ ಎಂದಿದ್ದೀರಿ. ಈ ಅಭಿಪ್ರಾಯವು ಸಾಧಾರವಾಗಿಲ್ಲ. ಬಸವಣ್ಣನವರು ಶ್ರಾವಣಶುದ್ಧ ಪಂಚಮಿಯಂದು ಲಿಂಗೈಕ್ಯರಾದರೆಂದು ಯಾರೋ ಹೇಳಿಬಿಟ್ಟರಾಯಿತೆ? ಕ್ರಿ. ಶ. 1190ರಲ್ಲಿದ್ದ ನೇಮಿಚಂದ್ರನ ಮೇಲೆ ಬಸವಣ್ಣನವರ ವಚನಗಳ ಪ್ರಭಾವ ಬಿದ್ದಿರುವು ದಕ್ಕೆ ಪ್ರಬಲವಾದ ಪ್ರಮಾಣಗಳಿವೆ. ಡಾ॥ ಜಿ. ಎಸ್. ಶಿವರುದ್ರಪ್ಪನವರ 'ಅಣುರಣನ' ಎಂಬ ಪುಸ್ತಕ ನೋಡಿರಿ. ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಪುನರ್ ಪರಿಶೀಲಿಸುವಿರೆಂದು ನಂಬಿದ್ದೇನೆ.

— ಇಂತು ವಂದನೆಗಳೊಡನೆ,

ಎಚ್. ದೇವೀರಪ್ಪ, ಬೆಂಗಳೂರು.

8-8-1981.

ಬಾಳಬುತ್ತಿ

— ಮಾತಾಜಿ

೧. ಬಳಸದಿರದ್ವೈತವನು ಬಾಹ್ಯದೊಳು

ಒಂದು ದಿನ ಓರ್ವ ಸಾಧುಗಳು ಎಲ್ಲಿಂದಲೋ ಪ್ರಯಾಣ ಮಾಡುತ್ತ ಬಂದರು. ಕೆಂಗೇರಿಯ ಬಳಿಗೆ ಬಂದಾಗ ಇಲ್ಲೊಂದು ಆಶ್ರಮವಿರುವುದನ್ನು ಜನರು ಹೇಳಿದರಂತೆ. ಅವರಿಗೆ ಆರೋಗ್ಯ ಬೇರೆ ಸರಿಯಿರಲಿಲ್ಲ. ಸ್ವಲ್ಪ ವಿಶ್ರಾಂತಿಯನ್ನು ಪಡೆದುಕೊಳ್ಳುವಾ ಎಂದು ಬಂದರು. ನೋಡಲಿಕ್ಕೆ ಒಳ್ಳೇ ತೇಜಸ್ವಿಪುರುಷರು, ವಯೋವೃದ್ಧರು. ಅವರ ಮುಖದ ಕಾಂತಿ, ಅದಕ್ಕೆ ಹಿನ್ನೆಲೆ ನೀಡಿದ್ದ ಬಿಳಿಯ ಗಡ್ಡ ಉತ್ತಮ ಕಳೆ ನೀಡಿದ್ದವು.

ಬಂದವರನ್ನು ಬರಮಾಡಿಕೊಂಡು ಕುಳ್ಳಿರಿಸಿ ಮಾತುಕತೆಗೆ ತೊಡಗಿದೆವು.

"ಯಾವ ಕಡೆಯಿಂದ ಬಂದಿರಿ ?"

"ಈ ಶರೀರ ಹರದ್ವಾರದ ಕಡೆಯಿಂದ ಬಂದಿತು."

"ಎತ್ತ ಹೋಗುತ್ತಿರುವಿರಿ ?"

"ಆತ್ಮನು ಪ್ರೇರಣೆ ನೀಡಿದತ್ತ"

"ನಿಮ್ಮ ಊರಾವುದು ? ಮಾತೃಭಾಷೆ ಯಾವುದು ?"

"ಇಂಥ ಪ್ರಶ್ನೆಗಳನ್ನೇ ನೀವು ಕೇಳಬಾರದು. ಏಕೆಂದರೆ ಇವೆಲ್ಲವು ದೇಹವನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡುವ ಮಾತುಗಳು. ಆತ್ಮನಿಗೆ ಊರುಂಟೆ ? ಅವನಿಗೊಂದು ಭಾಷೆಯುಂಟೆ ? ನಮ್ಮದೊಂದು ಊರು, ಭಾಷೆ ಇಂಥದು ಎಂದರೆ ಆಗ ನಮ್ಮನ್ನು ನಾವು ಸೀಮಿತಗೊಳಿಸಿಕೊಂಡಂತಾಗುತ್ತದೆ."

"ನೀವೀಗ ಯಾವ ಉದ್ದೇಶಕ್ಕೆ ಹೀಗೆ ತಿರುಗುತ್ತಿರುವಿರಿ ?"

"ಉದ್ದೇಶ ? ಉದ್ದೇಶವಿಲ್ಲದ ಉದ್ದೇಶ ; Aimless aim. ಒಂದು ಸಲ ಪೂರ್ತಿ ಪರಿಭ್ರಮಿಸಿ ಬಂದಿದ್ದೇನೆ. ಒಂದಾರು ತಿಂಗಳ ಕಾಲ ಮಾತ್ರ ಹರದ್ವಾರದಲ್ಲಿದ್ದು, ಮತ್ತೆ ಎರಡನೆಯ ಪರಿಭ್ರಮಣ ಮಾಡುತ್ತಿದ್ದೇನೆ. ಮನ ಬಂದಲ್ಲಿಗೆ ನಡೆಯುತ್ತಿದ್ದೇನೆ. ನೀರು ಹರಿಯುತ್ತದೆ ; ಅದಕ್ಕೊಂದು ಉದ್ದೇಶವಿದೆಯೆ ? ಗಾಳಿ ಬೀಸುತ್ತದೆ; ಅದಕ್ಕೊಂದು ಉದ್ದೇಶವಿದೆಯೇ ? ಹಾಗೆಯೇ ನನ್ನ ಸಂಚಾರವೂ.

"ಅದು ತಿರುಗಾಟವಲ್ಲ ಸಂಚಾರ" ಎಂದರು. ಈ ಎಲ್ಲ ಮಾತುಗಳನ್ನು ಕೇಳುತ್ತ ಕೇಳುತ್ತ ನಾನು ಚಿಂತನೆಯಲ್ಲಿ ತೊಡಗಿದೆ. "ನಾನೆಂದರೆ ದೇಹವಲ್ಲ : ಆತ್ಮ, ಕೈಕಾಲು ಪ್ರಾಣಮನ ಬುದ್ಧಿ ಎಲ್ಲವೂ ನಾನಲ್ಲ, ಇದೆಲ್ಲವನ್ನು ಆಡಿಸುವ ಆತ್ಮ. ಮಾತ್ರವೇ ನಾನು. ಇದಕ್ಕೆ ದೇಶಭಾಷೆಗಳ ಸೀಮೆ ಇಲ್ಲ, ನಾಮರೂಪಗಳಿಲ್ಲ." ಎಂಬುದು ಅಧ್ಯಾತ್ಮ ಪಥದಲ್ಲಿ ಅಂಬೆಗಾಲಿಕ್ಕುತ್ತಿರುವವನಿಗೂ ಗೊತ್ತು. ಆ ಆತ್ಮಭಾವ ಪ್ರಜ್ಞೆ ಮೂಡಿದಾಗಲೇ ಅವನಿಗೆ ಅಷ್ಟಿಷ್ಟು ವೈರಾಗ್ಯಬರುವುದು. ಆದರೆ ಈ ಅದ್ವೈತವನ್ನು ಬಾಹ್ಯದಲ್ಲಿ ಬಳಸಲಾದೀತೆ ?

ರೇಲ್ವೆ ಸ್ಟೇಷನ್ನಿಗೆ ಹೋಗಿ ಟಿಕೆಟ್‌ಕೊಳ್ಳಲು ನಿಂತಾಗ, 'ಟಿಕೆಟ್ಟು ಯಾವ ಊರಿಗೆ' ಎಂದು ಅಧಿಕಾರಿ ಕೇಳಿದರೆ 'ಆತ್ಮನಿಗೆ ಊರಿಲ್ಲ' ಎಂದರೆ ಆದೀತೆ ? ಅದಕ್ಕೇ ಶ್ರೀ ನಿಜಗುಣರು "ಬಳಸದಿರದ್ವೈತವನು ಬಾಹ್ಯದೊಳು, ನಿನ್ನೊಳಗೇಕೋ ಭಾವನೆಯೊಡಗೂಡು" ಎಂದಿದ್ದಾರೆ. ಹರಿಯುವ ನದಿಯು ಗೊತ್ತುಗುರಿ ಇಲ್ಲದೆ ಹರಿಯದು. ಸಮುದ್ರವನ್ನು ಬೆರೆಯಬೇಕೆಂಬ ಗುರಿಯೊಡನೆ, ತವಕದೊಡನೆ ಹರಿಯುತ್ತದೆ; ಗಾಳಿಯು ವ್ಯರ್ಥವಾಗಿ ಬೀಸದು. ಜೀವರಾಶಿಯನ್ನು ಜೀವಂತವಾಗಿಡಲು, ಮಳೆ-ಬೆಳೆಗಳನ್ನು ಕಾಲಕಾಲಕ್ಕೆ ನೀಡಲು ಬೀಸುವುದು. ನಿಸರ್ಗದಲ್ಲಿ ಯಾವುದೂ ಗೊತ್ತುಗುರಿಯಿಲ್ಲದೆ ಸಾಗದು. ಮನುಷ್ಯನಾದರೂ ಹಾಗೆಯೇ ಗೊತ್ತು ಗುರಿಯಿಲ್ಲದೆ ಬಾಳಿ, ಸಾಗಿ ಜೀವನವನ್ನು ವ್ಯರ್ಥವಾಗಿ ಕಳೆಯಬಾರದು. ಆಳವಾದ ಕೊಳ್ಳದಲ್ಲಿ ಹರಿವ ನದಿ ಕುಡಿಯಲಿಕ್ಕಾಗಲೀ, ಹೊಲಕ್ಕೆ ನೀರುಣಿಸಲಿಕ್ಕಾಗಲೀ ಉಪಯೋಗವಾಗದು. ಹಾಗೆಯೇ ಗೊತ್ತುಗುರಿಯಿಲ್ಲದೆ ಸಾಗುವ ಸನ್ಯಾಸಿ, ಸಂತನ ಜೀವನವೂ ಧರ್ಮಜಾಗೃತಿ, ಸಮಾಜಸೇವೆ, ಜ್ಞಾನದಾನ—ಈ ಯಾವುದಕ್ಕೂ ಉಪಯೋಗವಾಗದು.

೨. ವರದ ದುರುಪಯೋಗ

ತುಂಬಾ ಆಸೆ–ಆಕಾಂಕ್ಷೆ, ಕನಸುಗಳನ್ನು ಹೊತ್ತು ನಾವು ಅನೇಕ ಸಾಧಕರನ್ನು ಪ್ರೋತ್ಸಾಹಿಸಿ, ಬೆಳೆಸಿ ಅವರು ಕೀರ್ತಿಶಾಲಿಗಳಾಗಲೆಂದು, ಸಮಾಜಸೇವೆ ಮಾಡಲೆಂದು ಸಾರ್ವಜನಿಕ ರಂಗಕ್ಕೆ ಕಳಿಸುತ್ತೇವೆ. ಹಾಗೆ ಕಳಿಸಿದಾಗ ಕೆಲವರು ನಮ್ಮ ಉದ್ದೇಶ ಈಡೇರಿಸುವಂತೆ ಸರಿಯಾದ ದಾರಿಯಲ್ಲಿ ಉಳಿಯುತ್ತಾರೆ. ಇನ್ನು ಕೆಲವರು ದಾರಿ ತಪ್ಪುತ್ತಾರೆ. ಪ್ರಾರಂಭದಲ್ಲಿ ಅವರು ಯೋಗ್ಯರೆಂದೇ ನಾವೂ ಕಳಿಸುತ್ತೇವೆ. ನಮ್ಮ ಕಣ್ಣಿಂದ ದೂರವಿದ್ದಾಗ ಹೆಜ್ಜೆ ತಪ್ಪುತ್ತಾರೆ. ಅಂಥದೊಂದು ಪ್ರಸಂಗದಲ್ಲಿ ಓರ್ವ ಹಿರಿಯ ಭಕ್ತರು ನೋವಿನಿಂದ ಬಂದು ಕೇಳಿದರು : "ನೀವು ಕಳಿಸಿದೆವು ಅಂತ

ನಂಬಿದೆವು ; ಗೌರವಿಸಿದೆವು. ನೀವು ಅಂಥವರನ್ನೇಕೆ ಕಳಿಸಿದಿರಿ ?" ಆಗ ನಾನು ಆಲೋಚನಾ ಮಗ್ನನಾದೆ. ನಂತರ ಉತ್ತರಿಸಿದೆ. "ವಿದ್ಯಾಭ್ಯಾಸ ಮಾಡಲೆಂದೋ, ಕೀರ್ತಿವಂತರಾಗಲೆಂದೋ ನೀವು ನಿಮ್ಮ ಮಕ್ಕಳನ್ನು ದೂರದ ಊರಿಗೆ ಕಳಿಸುತ್ತೀರಿ. ಆದರೆ ಅವರು ಅಲ್ಲಿ ತಮ್ಮ ಕರ್ತವ್ಯ ಮರೆತು, ಅಡ್ಡದಾರಿ ಹಿಡಿದರೆ ತಪ್ಪು ಯಾರದು ? ಮಕ್ಕಳು ಕೆಟ್ಟು ಬಿಟ್ಟಾರಲ್ಲಾ ಎಂದು ತಾಯಿತಂದೆ ಮನೆಯಲ್ಲೇ ಹಿಡಿದಿಟ್ಟುಕೊಂಡರೆ ಮಕ್ಕಳ ಪ್ರತಿಭೆಗೆ ಅಡ್ಡಿ ಬಂದಂತೆ ಆಗದೆ ? ನಂಬಿ ಕಳಿಸುವುದು ತಾಯಿತಂದೆಯರ ಔದಾರ್ಯ ; ಅದನ್ನುಳಿಸಿಕೊಂಡು ಸರಿದಾರಿಯಲ್ಲಿರಬೇಕಾದ್ದು ಮಕ್ಕಳ ಕರ್ತವ್ಯ. ಅದನ್ನು ಮರೆತು ತಪ್ಪಿದರೆ ತಪ್ಪು ಮಕ್ಕಳದೇ ವಿನಾ ಹಿರಿಯರದಲ್ಲ."

ಭಸ್ಮಾಸುರನು ಒಳ್ಳೆಯವನೇ ! ಅವನು ಒಳ್ಳೆಯವನಿರದಿದ್ದರೆ, ಅವನ ತಪಸ್ಸು ಶಕ್ತಿಶಾಲಿಯಾಗಿರದಿದ್ದರೆ ಶಿವನು ಅದೆಂತು ಪ್ರತ್ಯಕ್ಷನಾಗುತ್ತಿದ್ದ, ವರ ಕೊಡುತ್ತಿದ್ದ ? ಶಿವನು ವರ ಕೊಡುವಾಗ ಭಸ್ಮಾಸುರ ಒಳ್ಳೆಯವನಿರಲೇಬೇಕು. ಆದರೆ ವರವು ಸಿಕ್ಕಾದ ಬಳಿಕ ಅವನಲ್ಲಿ ಅಹಂ ಮೊಳೆಯಿತು. ಸ್ವಾರ್ಥ, ಮದಾಂಧತೆ ಬೆಳೆಯಿತು. ಆ ಅಹಂ-ಸ್ವಾರ್ಥ-ಮದಾಂಧತೆಗಳ ಸಂಗಮವಾಗುತ್ತಿದ್ದಂತೆಯೇ ಉದ್ಧಟನಾಗಿ ಎಲ್ಲರನ್ನೂ ಸುಡಹೊರಟ. ಅವನ ಅಹಂ ಎಲ್ಲಿಗೆ ಹೋಯಿತೆಂದರೆ ತನಗೆ ವರವಿತ್ತು, ದೊಡ್ಡವನನ್ನಾಗಿ ಮಾಡಿದ ಗುರು ಶಿವನ ತಲೆಯ ಮೇಲೇ ಕೈಯಿಡುವಷ್ಟರ ಮಟ್ಟಿಗೆ ಹೋಯಿತು. ಕೃತಘ್ನತೆ ಅಧಿಕವಾದಾಗ ಪ್ರತಿಕ್ರಿಯೆ ಬಂದಿತು ವಿಷ್ಣು ತಾಳಿದ ಮೋಹಿನಿಯ ಆಕಾರದಲ್ಲಿ. ಇಂದಿನ ರಾಜಕೀಯವಾದರೂ ಹೀಗೇ ಅಲ್ಲವೆ ! ಪ್ರಜೆ ಎನ್ನುವ 'ಶಿವ' ಶಾಸಕ, ಲೋಕಸಭಾ ಸದಸ್ಯ ಎನ್ನುವ ಮುಖಂಡನಿಗೆ ವರವನ್ನೀಯುವನು ಓಟಿನ ಮೂಲಕ. ಆ ವರ ಪಡೆದು ಪ್ರತಿನಿಧಿಯಾದ ಅವರು, ಭಸ್ಮಾಸುರರಾಗಿ ಓಟುಕೊಟ್ಟ ಪ್ರಜಾ ಶಿವನ ಮೇಲೆಯೇ ಕೈಯಿಡುವುದನ್ನು ಕಾಣೆವೆ ? ಅಷ್ಟೇ ಸ್ವಾಭಾವಿಕ ಈ ಧರ್ಮಪ್ರಸಾರ ಕ್ಷೇತ್ರದಲ್ಲಿಯೂ ಅಹಂಕಾರದ ಮೊಳಕೆ. ನಿರ್ವಂಚನೆಯಿಂದ ಗುರುಕೊಟ್ಟ ಜ್ಞಾನ, ಅಧಿಕಾರ, ಕೀರ್ತಿಗಳನು ದುರುಪಯೋಗ ಮಾಡಿಕೊಂಡರೆ ತಪ್ಪು ಪಡೆದುಕೊಂಡವರದೇ ವಿನಾ ಕೊಟ್ಟವರದಲ್ಲ !

★

★ ನೀವು ಎಂತೆಂಥ ಬಿರುಗಾಳಿ ಎದುರಿಸಿರೆಂದು ಜಗತ್ತು ಕೇಳುವುದಿಲ್ಲಾ; ನೀವು ಹಡಗನ್ನು ಸುರಕ್ಷಿತವಾಗಿ ದಡಕ್ಕೆ ತಂದಿರಾ ? ಎಂದಿಷ್ಟೇ ಅದು ವಿಚಾರಿಸುತ್ತದೆ.

—ವಿಲಿಯಮ್ ಮ್ಯಾಕ್‌ಫೀ

ಬಸವ ಭಾರತಿ ಶಾಲಾ ವಾರ್ಷಿಕ ಸಂಚಿಕೆ

ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆಯು ಬಸವ ಗಂಗೋತ್ರಿಯ ಆವರಣದಲ್ಲಿ ಶ್ರೀ ಬಸವ ಭಾರತಿ ವಿದ್ಯಾಲಯ ಎಂಬ ವಸತಿ ಸಹಿತ ಉನ್ನತ ಪ್ರೈಮರಿ ಮತ್ತು ಪ್ರೌಢ ಶಾಲೆಯನ್ನು ನಡೆಸುತ್ತಿರುವುದು ಸರ್ವಶ್ರುತವಿದೆಯಷ್ಟೆ !

ಬಸವ ಗಂಗೋತ್ರಿ, ಬಸವ ಭಾರತಿ, ವಿಶ್ವಕಲ್ಯಾಣ ಮಿಷನ್ ಈ ಎಲ್ಲವುಗಳ ಪ್ರಗತಿಯನ್ನು ಚಿತ್ರಿಸಲೋಸುಗ ಮತ್ತು ಶಾಲೆಯ ಮಕ್ಕಳ ವಿವಿಧ ಪ್ರಗತಿಗಳನ್ನು ಮನಗಾಣಿಸಲೋಸುಗ, ಅಲ್ಲದೆ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ವಿಕಸಿಸಲೋಸುಗ, ಬಸವ ಭಾರತಿ ಎಂಬ ವಾರ್ಷಿಕ ಸಂಚಿಕೆಯೊಂದನ್ನು ಹೊರತರಲು ಉದ್ದೇಶಿಸಲಾಗಿದೆ. ಈ ವಾರ್ಷಿಕ ಸಂಚಿಕೆಗೆ ವಿವಿಧ ಶಾಲೆಗಳ ಮಕ್ಕಳು ಮತ್ತು ಕಲ್ಯಾಣ ಕಿರಣದ ಓದುಗರು ಸಣ್ಣ ಸಣ್ಣ ಲೇಖನಗಳು, ದೃಷ್ಟಾಂತ ಕಥೆಗಳು, ಕವನಗಳು, ತಮ್ಮ ಜೀವನದ ವಿಶೇಷಾನುಭವಗಳನ್ನು ಕಳಿಸಬಹುದು. ಆಯ್ಕೆ ಮಾಡಿ ಪ್ರಕಟಿಸಲಾಗುವುದು.

ಉದ್ಯಮದಾರರು, ವ್ಯಾಪಾರಸ್ಥರು, ಜಾಹಿರಾತುಗಳನ್ನು ನೀಡಬೇಕು. ಉದ್ಯಮ ವ್ಯಾಪಾರಗಳಿಲ್ಲದವರೂ ಶುಭಕಾಮನೆಗಳೊಡನೆ ತಮ್ಮ ಉದಾರವಾದ ಜಾಹಿರಾತು ಮತ್ತು ಕೊಡುಗೆ ನೀಡಬಹುದು. ಅವರ ಯಥಾನುಸಾರದ ಕೊಡುಗೆಯನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸಂಚಿಕೆಯ ಆಕಾರ 1/4 ಕ್ರೌನ್ ಜಾಹಿರಾತು ದರ :

ಹೊದ್ದಿಕೆಯ ನಾಲ್ಕನೆಯ ಪುಟಕ್ಕೆ	400 ರೂ
ಹೊದ್ದಿಕೆಯ ಮೂರನೆಯ ಪುಟಕ್ಕೆ	350 ರೂ
ಒಳಗಿನ ಪುಟ	300 ರೂ
ಅರ್ಧ ಪುಟ	175 ರೂ
ಕಾಲು ಪುಟ	100 ರೂ

ಜಾಹಿರಾತಾಗಲೀ, ಶುಭಕಾಮನೆಯ ಕೊಡುಗೆಯಾಗಲೀ ಆ ಹಣವನ್ನು ಬ್ಯಾಂಕ್ ಡ್ರಾಫ್ಟ್, ಚೆಕ್, ಮನಿಯಾರ್ಡರು, ನಗದು ಯಾವುದೇ ರೂಪದಲ್ಲಿ ಕೊಡಬಹುದು. ಮತ್ತು ಅದು ವಿಶ್ವಕಲ್ಯಾಣ ಮಿಷನ್ ವಿದ್ಯಾ ಸಂಸ್ಥೆಯನ್ನು ಉದ್ದೇಶಿಸಲ್ಪಟ್ಟದ್ದಾಗಿರಬೇಕು. ಎಲ್ಲರ ಸಹಕಾರವನ್ನೂ ನಿರೀಕ್ಷಿಸುವೆವು. ಅಕ್ಟೋಬರ್

ಎರಡನೆಯ ತಾರೀಖು ಬಿಡುಗಡೆ ಮಾಡಲು ಉದ್ದೇಶಿಸಿರುವ ಕಾರಣ, ಜಾಹಿರಾತುಗಳು ತಮ್ಮ ಮೊತ್ತ ಮತ್ತು ವಿವರಗಳೊಡನೆ ಅಕ್ಟೋಬರ್ 15 ರೊಳಗೆ ಕೈಸೇರುವಂತೆ ದಯವಿಟ್ಟು ತಲ್ಪಿಸಬೇಕಾಗಿ ವಿನಂತಿ.

ವಿ. ಸೂ :—ಕಟ್ಟಿರುವ ಶಾಲಾಕಟ್ಟಡವು 5 ರಿಂದ 9 ನೆಯ ತರಗತಿಯವರೆಗೆ ಮಾತ್ರ ಸಾಕಾಗುತ್ತಿದ್ದು ಮುಂದಿನ ವರ್ಷ ಆರಂಭವಾಗುವ ಎಸ್. ಎಸ್. ಎಲ್. ಸಿ ತರಗತಿಗೆ ಕೊಠಡಿಯನ್ನು ನಿರ್ಮಾಣ ಮಾಡಬೇಕಾಗಿದೆ. ಉದಾರಿಗಳ ಕೊಡುಗೆ "ಬಸವ ಭಾರತಿ" ಶಾಲಾ ಸಂಚಿಕೆಯ ವೆಚ್ಚವನ್ನು ಮೀರಿದರೆ ಅದನ್ನು ಕಟ್ಟಡ ನಿಧಿಗಾಗಿ ಬಳಸುವ ಕಾರಣ ಉದಾರವಾಗಿ ನೆರವು ನೀಡಬೇಕೆಂದು ಕೋರುತ್ತೇವೆ

ಜಾಹಿರಾತು ಕಳಿಸಬೇಕಾದ ವಿಳಾಸಗಳು :—

1. ಬಸವ ಭಾರತಿ ವಿದ್ಯಾಲಯ
   ಬಸವ ಗಂಗೋತ್ರಿ
   ಕುಂಬಳಗೋಡು–560074
   ಬೆಂಗಳೂರು–ಮೈಸೂರು ಹೆದ್ದಾರಿ
   ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೋಕು

2. ವಿಶ್ವಕಲ್ಯಾಣ ಮಿಷನ್ ವಿದ್ಯಾ ಸಂಸ್ಥೆ
   ಬಸವ ಮಂಟಪ, 2ನೇ ಬ್ಲಾಕು
   ಕಾರ್ಡ್ ರಸ್ತೆ, ರಾಜಾಜಿನಗರ
   ಬೆಂಗಳೂರು–560010

ಮಾನ್ಯ ಶರಣರೇ, 'ಅನಾಮಧೇಯ ಲೇಖನ'ಕ್ಕೆ ಉತ್ತರದ ಬಗ್ಗೆ ವ್ಯಕ್ತಪಡಿಸಿದ ನಿಮ್ಮ ಅಭಿಮಾನಪೂರ್ವಕ ಅಭಿಪ್ರಾಯಕ್ಕೆ ಧನ್ಯವಾದ. ಬಸವಣ್ಣನವರ ಲಿಂಗೈಕ್ಯತಿನ ಮತ್ತು ವರ್ಷಗಳ ಬಗ್ಗೆ ಪುನರ್‌ಪರಿಶೀಲಿಸಲು ಸೂಚಿಸಿದ್ದೀರಿ. ನಾವು ಮುಖ್ಯವಾಗಿ ತತ್ತ್ವಜ್ಞಾನದ ಹಿನ್ನೆಲೆಯಲ್ಲಿ ವಚನಗಳನ್ನು ಶರಣರನ್ನು ವಿಶ್ಲೇಷಿಸುವ ಆಸಕ್ತಿಯುಳ್ಳವರು. ಐತಿಹಾಸಿಕ ಕಾಲಮಾನದ ನಿರ್ಣಯದ ವಿಜ್ಞಾನವಾಗಲೀ, ತಂತ್ರವಾಗಲೀ ನಮಗೆ ತಿಳಿಯದು. ಆದರಲ್ಲಿ ಬಲ್ಲಿದರಾದ ಮೈಸೂರು ವಿಶ್ವವಿದ್ಯಾಲಯದ ಡಾ॥ ಬಾಡಾಲ ರಾಮಯ್ಯನವರು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಡಾ॥ ಕಲಬುರ್ಗಿಯಂತಹವರ ಅಭಿಪ್ರಾಯಗಳನ್ನು ಒಪ್ಪಿದ್ದೇವೆ ಮಾತ್ರ. ಕಾಲಜ್ಞಾನ ವಚನ, ಶಾಸನಾಧ್ಯಯನಗೈದು ಡಾ॥ ಬಾಡಾಲ ರಾಮಯ್ಯನವರು ಶ್ರುತ ಪಡಿಸಿರುವ ದಿನ ಅದೊಂದೇ. ಬಸವಣ್ಣನವರ ಲಿಂಗೈಕ್ಯ ದಿನದ ಮಹತ್ವವನ್ನು ಜನಕ್ಕೆ ಮನಗಾಣಿಸಲೋಸುಗ ನಾವದನ್ನು ಒಪ್ಪಿ ಆಚರಣೆಗೆ ತರುತ್ತಿದ್ದೇವೆ. ಈ ವಿಷಯದಲ್ಲಿ ಬಲ್ಲಿದರಾದವರು ಮತ್ತಾವುದಾದರೂ ನಿರ್ಣಯ ಕೈಗೊಂಡರೆ ನಮ್ಮ ನಂಬಿಗೆ ಬದಲಿಸಿ ಪುನರ್ ಪರಿಶೀಲಿಸಲು ನಮ್ಮದೇನೂ ಅಭ್ಯಂತರವಿಲ್ಲ.

—ಮಾತಾಜಿ

ಬಸವ ಗೀತೆ

—ಮಾತಾಜಿ

ಪುಣ್ಯ-ಪಾಪವೆಂಬ ಉಭಯ ಕರ್ಮವನಾರು ಬಲ್ಲರಯ್ಯಾ ?
ಇವನಾರುಂಬರು ?
ಕಾಯ ತಾನುಂಬಡೆ ಕಾಯ ತಾ ಮಣ್ಣು ;
ಜೀವ ತಾನುಂಬಡೆ ಜೀವ ತಾ ಬಯಲು
ಈ ಉಭಯ ನಿರ್ಣಯವ
ಕೂಡಲ ಸಂಗಮದೇವಾ, ನಿಮ್ಮ ಶರಣ ಬಲ್ಲ. –ಬಸವಣ್ಣನವರು 862

ಮನುಷ್ಯನು ಮಾಡುವ ದುಷ್ಟಕಾರ್ಯಗಳ ಪರಿಣಾಮವೇ ಪಾಪ, ಸತ್ಕಾರ್ಯಗಳ ಪರಿಣಾಮವೇ ಪುಣ್ಯ. ಪಾಪ-ಪುಣ್ಯಗಳೆಂಬವು ಜೀವನ ವೃಕ್ಷವು ತಳೆವ ಫಲಗಳು. ಬೇರೆ ಗಿಡಗಳನ್ನು ಬೆಳೆದಾಗ ಅದು ತಳೆಯುವ ಹಣ್ಣುಗಳನ್ನು ತಾನು ತಿನ್ನಬಹುದು ಅಥವಾ ಬಿಡಬಹುದು. ಆದರೆ ತನ್ನ ಜೀವನ ವೃಕ್ಷದಲ್ಲಿ ಬಿತ್ತಿ ಬೆಳೆದ ಫಲಗಳನ್ನು ಮಾತ್ರ ತಾನೇ ತಿನ್ನಬೇಕು. ಹಾಗಾದರೆ ತಿನ್ನುವವರು ಯಾರು ? ದೇಹವು ಉಣ್ಣುವುದೇ ? ಹೇಗೆ ಸಾಧ್ಯ. ಅದು ಮಣ್ಣಿನಿಂದ ಅಂದರೆ ಜಡವಾದ ಪಂಚಭೂತಗಳಿಂದಾದುದು. ಆತ್ಮವು ತಿನ್ನುವುದೇ ? ಅದು ನಿರಾಕಾರ ; ಬಯಲು ಸ್ವರೂಪವಾದ ಸಚ್ಚಿದಾನಂದ ಲಕ್ಷಣಗಳುಳ್ಳುದು. ನಿರ್ಲೇಪ ಗುಣವುಳ್ಳುದು. ಬೆಂಕಿ ನಿರಾಕಾರ ; ಅದನ್ನು ಹೊಡೆಯುವುದು ಸಾಧ್ಯವೆ ? ಸಾಧ್ಯ ; ಕಬ್ಬಿಣದ ಆಶ್ರಯದಲ್ಲಿ ಬೆಂಕಿಯನ್ನು ಬಂಧಿಸಿದಾಗ ಬೆಂಕಿಯನ್ನು ಹೊಡೆಯಲು ಸಾಧ್ಯ. ಹಾಗೆಯೇ ದೇಹವು ಜಡ-ತನ್ನಿಂದ ತಾನೇ ಪಾಪ ಮಾಡಲಾರದು, ಅನುಭವಿಸಲೂ ಆರದು. ಆತ್ಮವು ನಿರ್ಲಿಪ್ತವು, ತನ್ನಿಂದ ತಾನೇ ಪಾಪ ಮಾಡಲಾರದು. ಆದರೆ ಕಾಯದ ಆಶ್ರಯದಲ್ಲಿ ಆತ್ಮವು ಪಾಪ-ಪುಣ್ಯ ಮಾಡಿ, ಸುಖದುಃಖಗಳನ್ನು ಅನುಭವಿಸುವುದು. ಈ ತತ್ತ್ವವನ್ನು ಅತ್ಯಂತ ಸಮರ್ಪಕವಾಗಿ ಟಾಲ್‌ಸ್ಟಾಯ್‌ರವರ ಕಥೆಯೊಂದು ಚಿತ್ರಿಸುತ್ತದೆ.

ಒಂದು ಊರಿನಲ್ಲಿ ಓರ್ವ ಶ್ರೀಮಂತನಿದ್ದ. ಅವನ ಬಳಿ ಸಂಪದ್ಭರಿತವಾದ ತೋಟವೊಂದಿತ್ತು. ಅದು ಉತ್ತಮವಾದ ಫಲಗಳಿಂದ ಕೂತು ನಿಂತಿತ್ತು. ಅವನ್ನು ಕಾಯಲೋಸುಗ ಆ ಶ್ರೀಮಂತ ಓರ್ವ ಕಾವಲುಗಾರನನ್ನು ಹುಡುಕಿದ. ಆದರೆ

ಕಾವಲುಗಾರನು ಕದಿಯುವನೆಂಬ ಭಯದಿಂದ, ಕದಿಯಲಾರದಂತಹವರನ್ನು ಹುಡುಕು ವಾಗ ಓರ್ವ ಕುಂಟ ಮತ್ತು ಕುರುಡ ಕಣ್ಣಿಗೆ ಬಿದ್ದರು. ಕುರುಡನಿಗೆ ಹಣ್ಣು ಎಲ್ಲಿದ್ದಾವೆಂದು ಕಾಣಿಸದು. ಕುಂಟನಿಗೆ ಕಂಡರೂ ಗಿಡ ಹತ್ತಿ ಕೀಳಲು ಬರದು ಎಂದು ಆಲೋಚಿಸಿ ಅವರಿಬ್ಬರನ್ನೂ ಜೊತೆ ಮಾಡಿ ತೋಟವನ್ನು ಕಾಯಲು ನೇಮಿಸಿದ ಕೆಲವೇ ದಿನಗಳಲ್ಲಿ ಹಣ್ಣುಗಳು ಕಳುವಾಗಲು ಆರಂಭವಾದವು. ಶ್ರೀಮಂತನಿಗೆ ಆಶ್ಚರ್ಯವಾಯಿತು. ಇಬ್ಬರನ್ನೂ ಹಿಡಿದು, ಶಿಕ್ಷಿಸಲು ಎಳಸಿದ. ಆಗ ಅವರು ಅಮಾಯಕರಂತೆ ನುಡಿದರು. "ಸ್ವಾಮಿ, ನಾನು ಕುರುಡ. ಹಣ್ಣುಗಳು ಎಲ್ಲಿವೆಯೆಂಬುದೇ ತಿಳಿಯದು. ಹೀಗಿರುವಾಗ ಇನ್ನೆಂತು ಕದಿಯಲಿ". ಎಂದ ಕುರುಡ. "ಸ್ವಾಮಿ; ನಾನು ಕುಂಟ ; ಹಣ್ಣಿರುವ ಜಾಗವನ್ನು ಗುರುತಿಸಿದರೂ, ಗಿಡವನ್ನು ಹತ್ತಲು ಬರದು" ಆಗ ಶ್ರೀಮಂತನು ನುಡಿದ. "ನಿಜ, ಕುರುಡನು ನೋಡಲಾರ. ಅವನಲ್ಲಿ ಜ್ಞಾನಾಂಗದ ಕೊರತೆ, ಕುಂಟನು ನಡೆಯಲಾರ. ಅವನಲ್ಲಿ ಕ್ರಿಯಾಂಗದ ಕೊರತೆ. ಆದರೆ ಕುಂಟ ನೋಡಿ ಹಣ್ಣೆಲ್ಲಿದೆ ಎಂದು ಹೇಳಬಲ್ಲ, ಕುರುಡ ಹತ್ತಿ ಕೀಳಬಲ್ಲ. ಇಬ್ಬರ ಸಹಕಾರದಿಂದಲೇ ಕಳ್ಳತನ ನಡೆಯುವುದು".

ಅದೇ ರೀತಿ ಆತ್ಮನು ಕ್ರಿಯಾಂಗವಿಲ್ಲದ ಕುಂಟ, ದೇಹವು ಜ್ಞಾನಾಂಗವಿಲ್ಲದ ಕುರುಡ. ಇಬ್ಬರೂ ಒಂದಾದಾಗ ಮಾತ್ರವೇ ಪಾಪ-ಪುಣ್ಯಗಳನ್ನು ಮಾಡಲೂ ಸಾಧ್ಯ, ತತ್ಫಲವಾಗಿ ದುಃಖ-ಸುಖಗಳನ್ನು ಅನುಭವಿಸಲೂ ಸಾಧ್ಯ. ಬಸವಣ್ಣನವರ ವಚನಕ್ಕೆ ಟಾಲ್‌ಸ್ಟಾಯ್‌ರವರ ಈ ಕಥೆ ವ್ಯಾಖ್ಯಾನದಂತಿದೆ.

2. ಭಕ್ತಿ ಪಂಜರ

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ,
ಶಿವ ಶಿವಾ ಎಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು
ಕೂಡಲ ಸಂಗಮದೇವಾ.

"ನರರು ವಾಸಿಸುವ ಲೋಕಾರಣ್ಯದಲ್ಲಿ ಒಂದು ಪುಟ್ಟ ಗಿಳಿಯನ್ನಾಗಿ ಮಾಡಿ, ವಾತ್ಸಲ್ಯದಿಂದ ಸಲಹುತ್ತ, ಮತ್ತಾವ ಚಿಂತೆಯನ್ನು ಮಾಡದೆ ಶಿವಶಿವಾ ಎಂದು ಜಪಿಸುವಂತೆ ಮಾಡು. ಭಕ್ತಿಯೆಂಬ ಪಂಜರದೊಳಗಿಟ್ಟು ರಕ್ಷಿಸು."


ಹೀಗೆ ಬೇಡುತ್ತಾರೆ ಬಸವಣ್ಣನವರು. ಅವರ ಕೆಲವು ವಚನಗಳಂತೂ ತೀರಾ ಪುಟ್ಟವಾಗಿದ್ದರೂ ತೀವ್ರವಾದ ಭಾವಾಭಿವ್ಯಕ್ತಿಯನ್ನು ಹೊಂದಿ ಶಕ್ತಿಶಾಲಿಗಳಾಗಿರುತ್ತವೆ. ವಿವಿಧ ಕೋನಗಳಿಂದ ನೋಡಿದಂತೆಲ್ಲ ಅವರ ವಚನಗಳು ಅಚ್ಚರಿಯನ್ನು

ಉಂಟುಮಾಡುವಂತಹ ಅರ್ಥಗಳನ್ನು ಕೊಡುತ್ತವೆ. ಮಾನವನು ಎಲ್ಲ ಪ್ರಾಣಿಗಳನ್ನೂ ಮೀರಿಸಿದ ಬುದ್ಧಿವಂತ, ವಿಮರ್ಶಾಶಾಲಿಯು ಆಗಿದ್ದರೂ ತನ್ನ ಅರಿಷಡ್ವರ್ಗ ದಾಸ್ಯ, ದುರ್ಗುಣಗಳಿಂದಾಗಿ ಈ ಸಮಾಜವನ್ನು ಕಾಡಿಗಿಂತಲೂ ಭಯಂಕರವಾದ ತಾಣವನ್ನಾಗಿ ಮಾಡಿದ್ದಾನೆ. ಮೂಕಪ್ರಾಣಿಗಳು ವಾಸಿಸುವ ಕಾನನಕ್ಕಿಂತಲೂ ಮಾತನಾಡುವ ಪ್ರಾಣಿಗಳು ವಾಸಿಸುವ ಈ ಸಮಾಜದ ಕಾಡು ಅತೀವ ಭಯಂಕರ. ಇಂತಲ್ಲಿ ಅವರು "ಹುಲುಗಿಳಿ"ಯಾಗಲು ಇಷ್ಟಪಡುತ್ತಾರೆ. "ಹುಲು" ಎಂಬ ಪದ ಇಲ್ಲಿ ಬಹಳ ಅರ್ಥಗರ್ಭಿತ, ಶಕ್ತಿಶಾಲಿ ಪದ. ಸಣ್ಣದಾದ ಪ್ರಾಣಿ ಎಂದು ಹೇಳುವಲ್ಲಿ, ಕಾಡಿನ ಬೃಹತ್ತತೆ, ಕಾಡುಮೃಗಗಳ ಬಲಶಾಲಿತ್ವ, ಅದರಲ್ಲಿ ಈ ಗಿಳಿಯ ಅಣುತ್ವ, ಅಲ್ಪತ್ವ ವ್ಯಕ್ತವಾಗಿವೆ. ಅದೇ ರೀತಿ ಈ ವಿಶ್ವ, ಇದರ ವ್ಯಾಪ್ತಿ, ಮಾನವ ಜನಾಂಗ ಈ ಎಲ್ಲದರ ಮಧ್ಯೆ ಓರ್ವ ವ್ಯಕ್ತಿ ಹುಲುಗಿಳಿಯಲ್ಲದೆ ಮತ್ತೇನು ?

"ಹುಲುಗಿಳಿ" ಎಂಬುದು ಅನಾಮಿಕತ್ವ, ಅಕೀರ್ತಿತ್ವವನ್ನೂ ಧ್ವನಿಸುತ್ತದೆ. ಬದುಕಲು ಹೋರಾಟ (Struggle for existence), ಬಲಶಾಲಿಗಳ ದೌರ್ಜನ್ಯವೇ ತುಂಬಿರುವ ಈ ಜಗತ್ತಿನಲ್ಲಿ ಯಾವ ಕೀರ್ತಿಕಾಮನೆಯೂ ಇಲ್ಲದೆ, ಶಾಂತ ಪ್ರವೃತ್ತಿಯ ಗಿಳಿಯ ಬದುಕನ್ನು ಬದುಕಲು ಬಸವಣ್ಣನವರ ಮನ ಇಚ್ಛಿಸುತ್ತದೆ. ಈ ನರವಿಂಧ್ಯದಲ್ಲಿ ಎರಗುವ ನೈಸರ್ಗಿಕ, ಸಾಮಾಜಿಕ ಎಡರು ಮತ್ತು ಆಘಾತಗಳಿಂದ ರಕ್ಷಿಸಿಕೊಳ್ಳಲು ಭಕ್ತಿ ಎಂಬ ಪಂಜರದ ಆಶ್ರಯವನ್ನು ಅವರು ಕೋರುತ್ತಾರೆ. ಅನ್ಯ ಮತ್ತು ಬಾಹ್ಯ ಚಿಂತೆಯಿಲ್ಲದೆ ಶರಣಾಗತ ಭಾವದಿಂದ ಭಕ್ತಿ ಪಂಜರದ ಆಶ್ರಯ ಪಡೆದು, ಏಕಪ್ರಕಾರದ ಮನಸ್ಸಿನಿಂದ ಶಿವನಾಮಸ್ಮರಣೆ ಮಾಡಬಯಸುತ್ತಾರೆ.

'ಗಿಳಿ'ಯೇ ಆಗಲು ಬಯಸಿರುವ ಉದ್ದೇಶ ಹೀಗೂ ಇರಬಹುದು. ಅದು ಒಂದು ಶಬ್ದವನ್ನು ಅಥವಾ ಉಕ್ತಿಯನ್ನು ಕಲಿತರೆ ಆಯಿತು. ಅದನ್ನು ನಿರಂತರವಾಗಿ ಪಠಿಸುತ್ತಾ ಹೋಗುತ್ತದೆ. ಹಾಗೆಯೇ ಮನಸ್ಸಿನ ಗಿಳಿಯೂ "ಶಿವಶಿವಾ" ಎಂಬೊಂದು ಶಬ್ದವನ್ನು ಕಲಿತು ಕುಹಕ, ಕುತ್ಸಿತ, ಕುಟಿಲಗಳನ್ನು ಆಡದೆ ಏಕಪ್ರಕಾರದ ಮನದಿಂದ ದೇವಧ್ಯಾನವನ್ನು ಮಾಡಬೇಕು. ಈ ವಚನದಲ್ಲಿ ಬಸವಣ್ಣನವರು ಬಯಸಿರುವುದು, 1. ಅಂತರ್ಮುಖ ಜೀವನವನ್ನು 2. ಪರಮಾತ್ಮನ ನಿರಂತರವಾದ ಚಿಂತನೆಯನ್ನು 3. ಅವನ ಭದ್ರವಾದ ರಕ್ಷಾಕವಚವನ್ನು. ಇಷ್ಟಿದ್ದರೆ ಇನ್ನಾವ ಕೀರ್ತಿವಾರ್ತೆಯು ಬೇಡ, ಭೋಗಭಾಗ್ಯವು ಬೇಡ, ಹೊರಗಡೆಯ ಎಲ್ಲ ತಾಡನಗಳ ಮಧ್ಯೆಯೂ ಪಂಜರದೊಳಗಣ ಗಿಳಿಯಂತೆ ನಿರ್ಲಿಪ್ತವಾಗಿದ್ದು ದೇವಧ್ಯಾನಾಸಕ್ತರಾಗಲು ಹಂಬಲಿಸುತ್ತಾರೆ.

★



—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಅರಿವೇ ಗುರು, ಆಚಾರವೇ ಶಿಷ್ಯ
ಜ್ಞಾನವೇ ಲಿಂಗ, ಪರಿಣಾಮವೇ ತಪ
ಸಮತೆ ಎಂಬುದೇ ಯೋಗನೋಡಾ.
ಈಸುವನರಿಯದೆ ಲೋಚು ಬೋಳಾದರೇನು ?
ಮಹಾಲಿಂಗ ಕಲ್ಲೇಶ್ವರ ದೇವರು ನಗುವರು.

—ಹಾವಿನ ಹಾಳ ಕಲ್ಲಯ್ಯ

ಅಧ್ಯಾತ್ಮ ಸಾಧನೆಯಲ್ಲಿ ಕೆಲವು ಸಲಕರಣೆಗಳಿವೆ, ಸಾಧನ ಸಂಪತ್ತಿವೆ. ಅವುಗಳು ಕೆಲವು ಸಿದ್ಧಿಗಾಗಿ ಶ್ರಮಿಸುತ್ತವೆ. ಅಂಥ ವಿಶಿಷ್ಟಸಾಧನ ಸಂಪತ್ತು ಬೆಳೆಸಿಕೊಳ್ಳದೆ, ಸಿದ್ಧಿಯನ್ನು ಹೊಂದದೇ ಇದ್ದರೆ ಪರಿಶ್ರಮವೆಲ್ಲ ವ್ಯರ್ಥ. ಹಾಗೆಯೇ ಗುರು ಒಂದು ಸಾಧನ ತತ್ತ್ವ. ಗುರುವಿನ ಆರಾಧನೆ, ಸೇವೆ ಯಾವ ಸಿದ್ಧಿ ಹೊಂದಲು ? ಗುರು ಮುಟ್ಟಿ ಗುರುವಾಗಲು ಕಡೆಗೆ ಅರಿವೇ ತಾನಾಗಲು. ಅಂತಹ ಅರಿವನ್ನು ಹೊಂದದಿರುವ ಗುರುತ್ವದಿಂದೇನು ಪ್ರಯೋಜನ. ಯಾವ ಅರಿವಿದು ? ಶಾಸ್ತ್ರಗಳ ಅಧ್ಯಯನದಿಂದ ಕಲಿತ ಓದೆ ? ಅಥವಾ ಪುರಾಣ ಸಂಕೀರ್ತನೆಗಳಿಂದ ಸಂಗ್ರಹಿಸಿದ ತಿಳುವಳಿಕೆಯೇ ? ಪ್ರಾರಂಭದ ದಿನಗಳಲ್ಲಿ ಮನುಷ್ಯ ಕೆಲವಷ್ಟನ್ನು ಬಲ್ಲವರಿಂದ ತಿಳಿಯುತ್ತಾನೆ. ಇನ್ನಷ್ಟನ್ನು ಶಾಸ್ತ್ರಗಳಿಂದ ಸಂಗ್ರಹಿಸುತ್ತಾನೆ. ಇನ್ನು ಕೆಲವಷ್ಟನ್ನು ತರ್ಕ–ವಾದಗಳಿಂದ ಗಳಿಸುತ್ತಾನೆ. ಆದರೆ ಇವಾವುಗಳ ಅವಲಂಬನೆಯಿಲ್ಲದೆ ಅಂತರ್ವಾಣಿಯಿಂದಲೇ ಸ್ಫುರಿಸುವ ಜ್ಞಾನವೊಂದಿದೆ ಅದೇ ಅರಿವು. ಶಾಸ್ತ್ರಗಳು ತಪ್ಪೆಜ್ಜೆ ಇಡಬಹುದು, ತರ್ಕವಾದಗಳು ಪೇಚಿಗೆ ಸಿಕ್ಕಿಸಬಹುದು ; ಜನರ ಸಲಹೆ ದಿಕ್ಕುಗೆಡಿಸಬಹುದು. ಆದರೆ ಈ ಅರಿವು, ಮೊಸರನ್ನು ಮಥಿಸಿದಾಗ ಅದರೊಳಗಿನಿಂದ

ಉದಿಸುವ ಬೆಣ್ಣೆಯಂತೆ ಬರುವ ಸ್ಫುರಣಾತ್ಮಕ ಜ್ಞಾನಮಾತ್ರ ದಿಕ್ಕು ತಪ್ಪಿಸದ ದೈವೀ ವಾಣಿ. ಕುಟಿಲ ಕುಹಕ, ಕುತಂತ್ರಗಳು ಮನಸ್ಸಿನ ಕೂಸುಗಳು. ಈ ಸ್ಫುರಣಾತ್ಮಕ ಅರಿವು–ಎಂದೆಂದೂ ಆರದ ವಿವೇಕದ ನಂದಾದೀಪ, ಆತ್ಮನ ಶಿಶು. ಆಚಾರವೇ ಶಿಷ್ಯ. ಗುರುವಿನ ಶಿಷ್ಯನಾಗುವುದರ ಉದ್ದೇಶವೇನು ? ಆಚಾರವನ್ನು ಸರ್ವಾಂಗದಲ್ಲಿ ಅಳವಡಿಸಿಕೊಳ್ಳುವುದಕ್ಕೆ. ಅರಿವು ತುಂಬಿದವನು ಗುರುವಾದಂತೆ ಆಚಾರ ತುಂಬಿದವನು ಶಿಷ್ಯ. ಆಚಾರ ಎಂದರೇನು ? ತಣ್ಣೀರಿನ ಸ್ನಾನ, ಹಸಿ ಮಡಿಯಲ್ಲಿದ್ದು ಅನ್ಯರನ್ನು ಮುಟ್ಟಿಸಿಕೊಳ್ಳದೆ, ಎಲ್ಲವನ್ನೂ ನೀರಲ್ಲಿ ತೋಯಿಸಿ ತೋಯಿಸಿ ಬಳಸುವುದೆ ? ಇಲ್ಲ. ದೇಹದ ಶುಚಿತ್ವ, ಮಾನಸಿಕ ಶುದ್ಧತ್ವಗಳನ್ನು ಅಳವಡಿಸಿಕೊಂಡು ಬಹಿರೀಂದ್ರಿಯಗಳನ್ನು ಎಲ್ಲೆಂದರಲ್ಲೆ ಹರಿಬಿಡದೆ, ಅಂತರೀಂದ್ರಿಯಗಳನ್ನು ಹತೋಟಿಯಲ್ಲಿರಿಸಿಕೊಂಡು, ಸತ್ಯ ಶುದ್ಧ ಕಾಯಕದಿಂದ ಆರ್ಜಿಸಿ, ದಾಸೋಹಂ ಭಾವನೆಯಿಂದ ಸಲ್ಲಿಸಿ ಸಾತ್ವಿಕ ಬದುಕನ್ನು ಅಳವಡಿಸಿಕೊಂಬುದೇ ಆಚಾರ.

“ಜ್ಞಾನವೇ ಲಿಂಗ”. ಲಿಂಗವೆಂದರೆ ಪರಾತ್ಪರ ವಸ್ತು, ಅದು ಸತ್–ಚಿತ್–ಆನಂದ ಸ್ವರೂಪವು. ಶುದ್ಧವಾದ ‘ಚಿತ್’ ಅನ್ನೇ ಜ್ಞಾನ ಎನ್ನುವುದು; ಹೀಗಾಗಿ ಪರಮಾತ್ಮನು ಜ್ಞಾನ–ಅನಂದ ಸ್ವರೂಪನು. ಅಂಥ ಜ್ಞಾನವನ್ನು ಅಳವಡಿಸಿಕೊಂಬುದೇ ಲಿಂಗವಾಗುವಿಕೆ. ಅಂಥ ಜ್ಞಾನವನ್ನು (Enlightenment) ಅಳವಡಿಸಿಕೊಂಡಲ್ಲದೆ ಲಿಂಗಪೂಜೆಗೆ ಸಂಪೂರ್ಣತೆ ಬರದು.

“ಪರಿಣಾಮವೇ ತಪ”. ತಪಸ್ಸು ಒಂದು ಸಾಧನ. ಅದರ ಗುರಿ ಪರಿಣಾಮದ ಸಂಪಾದನೆ. ಸಂತೃಪ್ತಿ ಇಲ್ಲದ ಮೇಲೆ ಯಾವ ತಪಸ್ಸು ಮಾಡಿದರೇನು ? ‘ತಪ್’ ಎಂದರೆ ಕಾಯುವುದು, ಪರಿಪಕ್ವವಾಗುವುದು. ಯಾವುದು ಪರಿಪಕ್ವ ಮಾಡುವುದೋ, ಕಾಯಿಸುವುದೋ ಅದೇ ತಪಸ್ಸು. ಬೇಯಿಸದ್ದನ್ನು ಬೆಂಕಿ ಎನ್ನಲು ಬರದು ; ಪಕ್ವಗೊಳಿಸದ್ದನ್ನು ತಪಸ್ಸೆನ್ನಲು ಬರದು. ಸಂತೃಪ್ತಿಯನ್ನು ಮನುಷ್ಯನು ಕಾಯಕದ ಮುಖಾಂತರವಾಗಿಯೇ ಪಡೆಯಲಿ, ಪೂಜೆ–ಧ್ಯಾನಾದಿಗಳ ಮುಖಾಂತರವಾಗಿಯೇ ಪಡೆಯಲಿ, ಸೇವೆಯ ಮುಖಾಂತರವಾಗಿಯೇ ಪಡೆಯಲಿ ಅದು ಅವನ ತಪಸ್ಸು ! ತೋರಿಕೆ ಮತ್ತು ಇರವಿಕೆ ಎಂಬೆರಡು ತತ್ತ್ವಗಳುಂಟು. ಕೆಲವರು ತುಂಬಾ ತಪಸ್ಸಿನಲ್ಲಿ, ಸಾಧನೆಯಲ್ಲಿ ಇರುವಂತೆ ತೋರಿಸಿಕೊಳ್ಳುತ್ತಾರೆ. ಆದರೆ ಆಂತರಂಗಿಕವಾಗಿ ತುಂಬಾ ಉದ್ವಿಗ್ನರಾಗಿ, ಅಶಾಂತಚಿತ್ತರಾಗಿ ಇರುತ್ತಾರೆ. ‘ಪರಿಣಾಮ’ ಅಂದರೆ ಸಂತೃಪ್ತ ಚಿತ್ತ ಅಳವಟ್ಟುದೇ ತಪಸ್ಸು ಎಂದು ಹೇಳಬಹುದು.

“ಸಮತೆ ಎಂಬುದೇ ಯೋಗ”. ಸಮತೆ ಎಂಬ ಶಬ್ದ ಹಲವಾರು ರಂಗಗಳಲ್ಲಿ ಬಳಕೆಯಾಗುತ್ತದೆ. ಸಮತೆ ಎಂದರೆ ಏರುಪೇರುಗಳಿಲ್ಲದ ಸಮಾನತೆ. ಇದು ವ್ಯಕ್ತಿಯ

ಅಂತರಂಗಕ್ಕೆ ಸಂಬಂಧಪಟ್ಟಾಗ "ಚಿತ್ತಸಮತೆ" Equanimity of mind ಎನ್ನಿಸಿಕೊಳ್ಳುತ್ತದೆ. ಸಮಾಜಕ್ಕೆ ಸಂಬಂಧಪಟ್ಟಾಗ ಸಾಮಾಜಿಕ ಸಮತೆ, ಆರ್ಥಿಕ ಸಮತೆ ಎನ್ನಿಸಿಕೊಳ್ಳುತ್ತದೆ. ನಿಜವಾದ ಯೋಗವೆಂದರೆ ಎಡರುತೊಡರುಗಳಲ್ಲಿ ಸ್ತುತಿ-ನಿಂದೆಗಳಲ್ಲಿ, ಏರಿಳಿತಗಳಲ್ಲಿ ಏಕ ಪ್ರಕಾರವಾದ ಮನಃಸ್ಥಿತಿಯನ್ನು ಕಾಪಾಡಿಕೊಳ್ಳುವ ಚಿತ್ತ ಸಮತೆ. ಎಲ್ಲವನ್ನೂ ಶಿವನ ಪ್ರಸಾದವೆಂದು ಭಾವಿಸಿ ಸಿಹಿ-ಕಹಿಗಳನ್ನು ಸಮಭಾವದಿಂದ ಸ್ವೀಕರಿಸುವುದು ಚಿತ್ತಸಮತೆ. ಎಲ್ಲರನ್ನು ದೇವಾಂಶರೆಂದು ಸಮಾನವಾಗಿ ಕಾಣುವುದು ಸಮದೃಷ್ಟಿ. ಮಾನವ ಮಾನವರನ್ನು ಭೇದ ದೃಷ್ಟಿಯಿಂದ ಕಾಣದೆ ಸಮದೃಷ್ಟಿಯಿಂದ ಕಾಣುವುದೇ ಸಮತೆ. ಇಂಥ ಸಮತೆಯೇ ಯೋಗ!

ಇಂತೆಲ್ಲ ಸದ್ಗುಣಗಳನ್ನು ಅಳವಡಿಸಿಕೊಳ್ಳದೇ ಮಂಡೆ ಬೋಳಾದಡೇನು ? ತುಂಡು ಕಂಬಳಿ ಹೊದೆದಡೇನು ? ದೇವನು ಮೆಚ್ಚನು.

★

★ ಚೆನ್ನಾಗಿ ಪರೀಕ್ಷಿಸದೇ ಯಾರನ್ನೂ ಒಮ್ಮೆಲೆ ನಂಬಬಾರದು.

—ಇಸೋಪ

★ ಮಿನುಗುವುದೆಲ್ಲ ಚಿನ್ನವಲ್ಲ, ಆದ್ದರಿಂದ ಪ್ರತ್ಯಕ್ಷಕಂಡರೂ, ಪ್ರಮಾಣಿಸಿ ನೋಡು.

—ಆಂಗ್ಲನುಡಿ

★ ತತ್ಕಾಲದ ಪರಿಸ್ಥಿತಿಯನ್ನಷ್ಟೇ ನೋಡಿ ನಿರಾಶಾವಾದಿಯಾಗಬಾರದು.

—ನೆಹರೂ

★ ಅನ್ಯರ ಅನುಚಿತ ನಿಂದೆಯನ್ನು ಸೈರಿಸುವ ಶಕ್ತಿ ನಿನಗೆ ಬಂದಿತೆಂದರೆ, ಸಮಸ್ತ ಜಗತ್ತನ್ನೇ ನೀನು ಗೆಲ್ಲಬಲ್ಲೆ.

—ಮಹಾಭಾರತ

★ ಚಟಗಳನ್ನು ಅವುಗಳ ಹುಟ್ಟಿನಲ್ಲೇ ಹತೋಟಿಯಲ್ಲಿಡಬೇಕು ಇಲ್ಲವಾದರೆ ಅವು ಅಗತ್ಯಗಳಾಗಿ ಬೆಳೆಯುತ್ತವೆ.

—ಆಗಸ್ಟಿನ್

★ ಈ ಜಗತ್ತಿನಲ್ಲಿ ದುರ್ದೈವದ ಸಂಗತಿಯೆಂದರೆ, ಒಳ್ಳೇ ಅಭ್ಯಾಸವನ್ನು ಬಿಟ್ಟಷ್ಟು ಸುಲಭವಾಗಿ, ಕೆಟ್ಟದ್ದನ್ನು ತೊರೆಯಲು ಸಾಧ್ಯವಾಗುವುದಿಲ್ಲ.

—ಮಾಘ

★ ಚಟಗಳು ಬಹು ಬೇಗ ಅಂಟುತ್ತವೆ. ಅವುಗಳನ್ನು ತ್ಯಜಿಸುವಾಗ ಮಾತ್ರ ಮೈಚರ್ಮವನ್ನೇ ಸುಲಿದಂತಾಗುತ್ತದೆ.

—ಕಾಫ್ಲರ್

★ ದುಶ್ಚಟಗಳಿಗೆ ಅಧೀನನಾದ ಮನುಷ್ಯನು ಎಂದಿಗೂ ಏಳ್ಗೆ ಹೊಂದುವುದಿಲ್ಲ.

—ಟೆರೆನ್ಸ್

ಸಮಸ್ಯೆ? ಸಮಾಧಾನ!

ಉಮರಾಣಿ ಗುರುಗಳು, ಕೂಡಲಸಂಗಮ.

★ ಹಿರಿಯರು ತೀರಿಕೊಂಡಾಗ ತಿಥಿ, ಸಪ್ತಾಹಗಳನ್ನು ಆಚರಿಸುವುದು ಸರಿಯೋ ತಪ್ಪೋ ?

* ಪಿತೃಪೂಜೆ ಅನ್ನುವ ಭಾವದಿಂದ ತಿಥಿ ಆಚರಿಸುವುದು ತಪ್ಪು. ಮುಕ್ತಾತ್ಮರಾದರೆ ದೇವನಲ್ಲಿ ಒಂದಾಗಿರುತ್ತಾರೆ, ಸಮುದ್ರದಲ್ಲಿ ನದಿ ಒಂದಾದಂತೆ. ಸಮುದ್ರದಲ್ಲಿ ಒಂದಾದ ನದಿಯನ್ನು ಬೇರ್ಪಡಿಸಲು ಬರದಂತೆ ಪಿತೃಗಳನ್ನು ಬೇರ್ಪಡಿಸಿ ಪೂಜಿಸಲು ಬರದು. ಒಂದು ವೇಳೆ ಮುಕ್ತಾತ್ಮರಾಗದೆ ಸಾಮಾನ್ಯ ಸ್ಥಿತಿಯಲ್ಲೇ ಸತ್ತರೆ, ಕರ್ಮ ಸಂಚಯಕ್ಕೆ ತಕ್ಕಂತೆ ಇನ್ನೊಂದು ದೇಹವನ್ನು ಆತ್ಮವು ಧರಿಸಿರುತ್ತದೆ. ಅಂದಾಗ ಇನ್ನು ಬೇರಿಟ್ಟು ಪೂಜಿಸುವುದೆಂತು, ಅನ್ನಾಹಾರ ಸಲ್ಲಿಸುವುದೆಂತು ? ತೀರಿಕೊಂಡವರ ಹೆಸರಿನಲ್ಲಿ ಉತ್ತಮ ಕಾರ್ಯಗಳನ್ನು ಮಾಡಲೋಸುಗ, ತತ್ತ್ವಚಿಂತನೆ ಮಾಡಲೋಸುಗ ಸಪ್ತಾಹಗಳನ್ನು ಆಚರಿಸಿದರೆ ತಪ್ಪಾಗದು.

★ ಶಿವನು ಐತಿಹಾಸಿಕ ಪುರುಷ ಎಂದು ಶ್ರೀಮಾತೆಯವರು ಪ್ರತಿಪಾದಿಸುತ್ತಾರೆ. ಹಾಗಿದ್ದರೆ ಅವನ ಹೆಸರು ಜಾಗತಿಕ ಇತಿಹಾಸದಲ್ಲಿದೆಯೇ ?

* ಪುರಾಣಗಳೂ ಅರ್ಧಂಬರ್ಧ ಇತಿಹಾಸಗಳೇ ! ಇತಿಹಾಸಕ್ಕೆ ಕಲ್ಪನೆಯ ತೆರೆಬಿದ್ದಾಗ ಅವು ಪೌರಾಣಿಕ ರೂಪ ಹೊಂದುತ್ತವೆ. ಇತಿಹಾಸವನ್ನೇ ಪುರಾಣೀಕರಿಸುವ ಪರಿಪಾಠ ಹಿಂದುಗಳದಾಗಿರುವಾಗ, ಇನ್ನೇನು ವೈಚಾರಿಕ ದೃಷ್ಟಿ ಅವರದಾದೀತು ? ಶಿವನು ಐತಿಹಾಸಿಕ ವ್ಯಕ್ತಿ ಎಂಬ ದೃಷ್ಟಿಯಿಂದ ಸಂಶೋಧನೆ, ಅಧ್ಯಯನ ಮಾಡಿ ಒಪ್ಪಿಕೊಂಡರೆ ಜಗತ್ತಿನ ಇತಿಹಾಸ ಬರೆಯುವವರು ಹೆಸರನ್ನು ಸೇರಿಸುವುದೇನುತಡ ?

★ ಬ್ರಹ್ಮಚರ್ಯ ದೀಕ್ಷೆ ಪಡೆದ ಸ್ತ್ರೀಯರು ಕುಂಕುಮ ಹಚ್ಚಬೇಕೋ ಬಾರದೊ ಏಕೆ ?

' ಬಸವಣ ನವರೇ ಆದಿಯಾಗಿ ಶರಣರ ವಿಚಾರಧಾರೆಯ ಪ್ರಕಾರ ಕುಂಕುಮ ರಕ್ತವರ್ಣದ ಲಾಂಛನವಾದ ಕಾರಣ, ಅಹಿಂಸಾ ತತ್ತ್ವದ ಪ್ರತಿಪಾದಕರಾದ ಅವರು

ಕುಂಕುಮಧಾರಣೆಯನ್ನು ನಿಷೇಧಿಸಿದರು, ಪೂಜೆಗೆ ಸಹ ಬಳಸಬಾರದೆಂದರು. ಆದರೆ ಹಿಂದೂ ಸಂಸ್ಕೃತಿಯ ಒಂದು ವಿಶೇಷ ಲಾಂಛನ, ಸಾಂಸ್ಕೃತಿಕ, ಅಲಂಕಾರಿಕ ಸಾಧನವಾದ ಕಾರಣ ಕುಂಕುಮದ ಬಳಕೆ ಹಿಂದೂ ಸ್ತ್ರೀಯರಿಗೆ ಕಡ್ಡಾಯವಾಗಬೇಕು. ಆದರಿಂದ ಶರಣರಿಗೆ ಸಮ್ಮತವಾಗದ ತತ್ತ್ವವನ್ನು ಆಚರಣೆ ಮಾಡಿದಂತಾಗುವುದಾದರೂ, ಅವರ ಮೂಲ ತತ್ತ್ವಕ್ಕೆ ತೀರಾ ವಿರೋಧಿಯಾದ ಆಚರಣೆ ಅಲ್ಲವಾದ ಕಾರಣ ಹಿಂದೂ ಸಮಾಜದ ಹಿತ ಚಿಂತನೆಯ ದೃಷ್ಟಿಯಿಂದ ಶರಣರ ಕ್ಷಮೆ ಕೇಳಿ ಹಚ್ಚಿಕೊಳ್ಳಬಹುದು. ಆದರೆ ಬ್ರಹ್ಮಚಾರಿಣಿಯರು ಹಚ್ಚಬಾರದು. ಜಾಗೃತಗೊಂಡ ಆಜ್ಞಾ ಚಕ್ರದ ಸಂಕೇತವಾಗಿ ಕುಂಕುಮ ಯೋಗಿಕ ಸಂಕೇತದಿಂದಲೇ ಆರಂಭವಾದರೂ, ಇಂದು ಕೇವಲ ಪತಿಯ ಸಂಕೇತವಾಗಿದೆ. ಅದು ವಿಧವೆ–ಸಧವೆಯರನ್ನು ಬೇರೆ ಮಾಡಿ ತೋರುತ್ತದೆ. ಬ್ರಹ್ಮಚಾರಿಣಿ ಪರಮಾತ್ಮನ ಸತಿ, ನಿತ್ಯ ಮುತ್ತೈದೆ. ಆದ್ದರಿಂದ ಲೌಕಿಕ ಪತಿಯ ಸಂಕೇತವಾದ ಕುಂಕುಮ ಧರಿಸದೆ, ದೈವೀಲಾಂಛನವಾದ ವಿಭೂತಿ ಧರಿಸಿದರೆ ಸಾಕು.

★ ನೀತಿಗೂ ಮುಕ್ತಿಗೂ ಸಂಬಂಧವೇನು ?

* ಮುಕ್ತಿ ಆತ್ಮನ ಗುರಿ ; ಅಧ್ಯಾತ್ಮ ಜೀವನದ ಕಡೆಯ ನಿಲ್ದಾಣ. ನೀತಿಯು ಆ ನಿಲ್ದಾಣವನ್ನು ತಲ್ಪಲಿಕ್ಕಿರುವ ಹಲವಾರು ಸಾಧನೆಗಳಾದ ನೀತಿ, ಜ್ಞಾನ, ಭಕ್ತಿ, ಧ್ಯಾನ ಇವುಗಳಲ್ಲೊಂದು. ಅದು ಅಧ್ಯಾತ್ಮ ಸಾಧನೆಯ ಅವಿಭಾಜ್ಯ ಅಂಗ.

★ ವಿಭೂತಿಯನ್ನು ಹಸುವಿನ ಸಗಣಿಯಿಂದಲೇ ಮಾಡುವ ಉದ್ದೇಶವೇನು?

* ಭಸ್ಮವನ್ನು ಕೆಲವು ಕಟ್ಟಿಗೆಗಳಿಂದ, ಇನ್ನು ಕೆಲವು ಕಡೆ ಬಿಳಿಯ ಮಣ್ಣಿನಿಂದ ತಯಾರು ಮಾಡಿದರೂ ಆಕಳ ಸಗಣಿಯಿಂದಾದುದೇ ಶ್ರೇಷ್ಠ ಭಸ್ಮ. ಒಂದನೆಯದಾಗಿ ಅದು ತುಂಬಾ ಶುಭ್ರವಾಗಿ ಬರುತ್ತದೆ, ಎರಡನೆಯದಾಗಿ ಅದು ಕ್ರಿಮಿನಾಶಕ, ಮೂರನೆಯದಾಗಿ ಅದು ನಂಜು ನಿರೋಧಕ; ಕೊಯ್ದ ಗಾಯಕ್ಕೆ ತಕ್ಷಣವೇ ಉತ್ತಮ ವಿಭೂತಿಪುಡಿ ಹಾಕಿದರೆ ಕೀವಾಗದು.

— ಸುಜಾತ, ಜಯನಗರ, ಬೆಂಗಳೂರು.

★ ನಾನೊಂದು ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇನೆ. ನಮ್ಮೋರ್ವ ಸ್ನೇಹಿತೆ, ವಿವಾಹಿತೆ. ಲಗ್ನವಾಗಿ ಸಾಕಷ್ಟು ವರ್ಷಗಳಾಗಿವೆ. ಇತ್ತೀಚೆಗೆ ಆಕೆಯ ನಡತೆಯಲ್ಲಿ ಬದಲಾವಣೆ ತೋರಿದೆ. ತನ್ನ ಪತಿಗೆ ವಂಚನೆ ಮಾಡಿ ಅನ್ಯ ತರುಣನೊಡನೆ ಸ್ನೇಹ ಸಂಬಂಧ ಬೆಳೆಸಿದ್ದಾಳೆ. ನನಗಿದು ಗೊತ್ತಿದೆ. ಆಕೆಯ ಪತಿಯೋ ನನ್ನ ಮಾತಿನಲ್ಲಿ ಅನನ್ಯ ನಂಬಿಗೆ ಇಟ್ಟಿದ್ದಾರೆ. ಅವರಿಗೆ ಇರುವ ಸಂಗತಿ ತಿಳಿಸಲೋ ? ಅಥವಾ ಆಕೆಗೆ

ಬುದ್ಧಿ ಹೇಳಿ ಸರಿದಾರಿಗೆ ತರಲೋ ? ತುಂಬಾ ಮಾನಸಿಕ ತೊಳಲಾಟದಲ್ಲಿದ್ದೇನೆ. ದಯಮಾಡಿ ಉತ್ತರಿಸಿರಿ.

* ಇದು ಬಹಳ ಸೂಕ್ಷ್ಮ ಪ್ರಶ್ನೆ. ಧನಾತುರನಾದವನಿಗೆ ಗುರುವಿಲ್ಲ ಮಿತ್ರನಿಲ್ಲ; ಕಾಮಾತುರನಾದವನಿಗೆ ಭಯವಿಲ್ಲ, ಲಜ್ಜೆ ಇಲ್ಲ. ನಾಯಿಯಂಥ ಒಂದು ಪ್ರಾಣಿಯನ್ನು ನೋಡಿ. ಕಾಮಾತುರವಾದ ಅದನ್ನು ನಿಗ್ರಹಿಸಲು ಹೋದರೆ ಅನ್ನಕೊಟ್ಟ ಮಾಲಿಕನನ್ನೂ ಅದು ಕಚ್ಚಲು ಹೋಗುವುದು. ಮನುಷ್ಯ ಅದಕ್ಕಿಂತಲೂ ಭಯಂಕರ. ಅವರ ಗಂಡನಿಗೆ ತಿಳಿಸಿದರೆ ಪತಿ–ಪತ್ನಿಯರಲ್ಲಿ ವಿರಸ ಬಂದು ಸಂಸಾರ ಹಾಳಾಗುವುದು ಖಂಡಿತ. ಇನ್ನು ನೀವು ಆಕೆಗೆ ಬುದ್ಧಿ ಹೇಳಿದರೆ ಆಕೆ ನಿಮ್ಮ ಶತ್ರುವಾಗುವುದು ನಿಶ್ಚಿತ. ಬುದ್ಧಿ ಕೇಳುವ ಮಟ್ಟವನ್ನು ನಿಮ್ಮ ಸ್ನೇಹಿತೆ ಮೀರಿದ್ದರೂ ಇರಬಹುದು. ಮಾನಸಿಕ ಆಂದೋಳನ ನೀವು ತಪ್ಪಿಸಿಕೊಳ್ಳಬೇಕಾದರೆ ಹೀಗೆ ಮಾಡಿರಿ. ನಿಮ್ಮ ಸ್ನೇಹ ಕೆಡುತ್ತದೆ ಎಂದು ನೂರಕ್ಕೆ ನೂರು ನಂಬಿಯೇ ಆಕೆಗೆ ಬುದ್ಧಿ ಹೇಳಿರಿ. ದೈವಾನುಗ್ರಹದಿಂದ ಆಕೆ ಸರಿಯಾದರೆ ಪತಿತೆಯನ್ನುದ್ಧರಿಸಿದ ಪುಣ್ಯ ನಿಮಗೆ ಬರುತ್ತದೆ. ನಿಮ್ಮ ಶತ್ರುವಾದರೆ, ನಿಮ್ಮ ಕರ್ತವ್ಯ ನಿರ್ವಹಿಸಿದ ತೃಪ್ತಿಯಿಂದ ನೀವು ಸ್ನೇಹ ಕತ್ತರಿಸಿಕೊಂಡು ದೂರವಾಗಿರಿ.

ಶಿವರಾಜ್ ಸಿದಬಟ್ಟೆ, ಔರಾದ.

★ ಮೂರ್ಖನನ್ನು ಪರೀಕ್ಷಿಸುವ ಒರೆಗಲ್ಲು ಯಾವುದು ?

* ಅವನ ಮಾತು ಮತ್ತು ವರ್ತನೆ. ಸಂದಿಗ್ಧ ಸಮಯದಲ್ಲಿ ಅವನು ಕೈಗೊಳ್ಳುವ ನಿರ್ಧಾರ.

★ ಸಂಸಾರದ ಮರ್ಯಾದೆ ಎಲ್ಲಿಯವರೆಗೆ ?

* ಸಂಸಾರದ ಆಂತರಂಗಿಕ ಗುಟ್ಟು ಬೀದಿಗಿಳಿಯುವವರೆಗೆ ; ಗಂಡ-ಹೆಂಡಿರ, ಅಣ್ಣ ತಮ್ಮರ, ಅತ್ತೆ ಸೊಸೆಯರ ಜಗಳ ಪಂಚಾಯತಿ ಕಟ್ಟೆಗೆ ಬರುವವರೆಗೆ !

ಎ. ಶಿವಪ್ರಕಾಶ್, ನಲ್ಲಿಪಾಳೆಯಂ, ತಮಿಳುನಾಡು

★ ಅಮೆರಿಕಾದಲ್ಲಿ ವೀರಶೈವರಿದ್ದಾರಾ ? ಅವರು ಅಲ್ಲಿ ಏನು ಮಾಡುತ್ತಾರೆ ?

* ಅಮೆರಿಕಾದಲ್ಲಿ ಸಾಕಷ್ಟು ಜನ ಏಷಿಯನ್ನರು, ಭಾರತೀಯರು, ಹಿಂದುಗಳು, ಲಿಂಗಾಯತರೂ ಇದ್ದಾರೆ. ವೈದ್ಯರು, ಎಂಜಿನಿಯರರು, ಕಾಂಟ್ರ್ಯಾಕ್ಟರರು,

ವಿಜ್ಞಾನಿಗಳೂ ಆಗಿ ಇದ್ದಾರೆ. ಅಮೆರಿಕಾದ ಪೌರತ್ವವನ್ನೂ ಹೊಂದಿದ್ದಾರೆ, ಮತ್ತು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಶಿವಾನಂದ ಬಗಲಿ, ಇಂಡಿ

★ ಹಿಂದಿನ ಧರ್ಮಕ್ಕು ಮತ್ತು ಇಂದಿನ ಧರ್ಮಕ್ಕೂ ವ್ಯತ್ಯಾಸವೇನು ?

* ಸಂವಿಧಾನ ಇದ್ದಂತೆಯೇ ಇರುತ್ತದೆ, ಆಚರಿಸುವ ಜನರಲ್ಲಿ ಮಾತ್ರ ಏರಿಳಿತಗಳಾಗುತ್ತವೆ. ಹಿಂದಿನ ಜನ ಧರ್ಮಾಚರಣೆಯನ್ನು ಆತ್ಮಾನಂದಕ್ಕಾಗಿ ಇರಿಸಿಕೊಂಡಿದ್ದರು, ಆಂತರಂಗಿಕ ವಿಕಾಸಕ್ಕಾಗಿ ಸಾಧನವಾಗಿ ಮಾಡಿಕೊಂಡಿದ್ದರು. ಆದರೆ ಇಂದಿನ ಬಹುಪಾಲುಜನ ವ್ಯವಹಾರಕ್ಕಾಗಿ ಇರಿಸಿಕೊಂಡಿದ್ದಾರೆ. ದೇವರೊಡನೆ ಕಮೀಷರ್ ವ್ಯವಹಾರ ಮಾಡುವವರು ಕೆಲವರಾದರೆ, ಸಾರ್ವಜನಿಕ ಹಣವನ್ನು ಎತ್ತಿ ಪೋಲು ಮಾಡುವವರು ಇನ್ನು ಕೆಲವರು. ನಿಷ್ಠಾವಂತ ಧಾರ್ಮಿಕ ಜೀವನ ನಡೆಸುವವರು ಬೆರಳ ಮೇಲೆಣಿಸುವಷ್ಟು.

ಸಹಜಾನಂದ, ಊರುಬೇಡ

★ ನಾನೋರ್ವ ಸಾಧಕ ; ನನ್ನಂತೆಯೇ ಇನ್ನು ಅನೇಕರು ಓರ್ವ ಗುರುವಿನ ಸನ್ನಿಧಿಯಲ್ಲಿದ್ದೇವೆ. ಅವರು ಬಹಳ ಕಟ್ಟುನಿಟ್ಟು. ಇದನ್ನು ಸಹಿಸದ ಕೆಲವು ಸಾಧಕರು ಸ್ವತಂತ್ರರಾಗಿದ್ದರೆ ಸುಖವಾಗಿ ಸ್ವಚ್ಛಂದವಾಗಿರಬಹುದೆಂದು ತಮ್ಮೊಡನೆ ಹೊರಬರಲು ಕರೆಯುತ್ತಿದ್ದಾರೆ. ಸ್ವತಂತ್ರವಾಗಿದ್ದರೆ ಹೆಚ್ಚಿನ ಕೀರ್ತಿವಾರ್ತೆಯೂ ಬರುವುದು ಎನ್ನುತ್ತಿದ್ದಾರೆ. ನಾನೀಗ ಏನು ಮಾಡಲಿ ? ದಯವಿಟ್ಟು ಸಲಹೆ ನೀಡಿ.

* ನಿರ್ಧಾರ ನಿಮಗೆ ಸೇರಿದ್ದು. ಶಿವನ ಸನ್ನಿಧಿಯನ್ನು ತೊರೆದು ಪ್ರೇತಗಣಗಳ ಒಡನಿರುವ ಇಚ್ಛೆಯಿದ್ದರೆ ಅವರೊಡನೆ ಹೋಗಿ. ಪ್ರೇತಗಣಗಳನ್ನು ತೊರೆದು ಶಿವನ ಸನ್ನಿಧಿಯಲ್ಲಿರುವದಾದರೆ ಸುಮ್ಮನೇ ಇರಿ. ಶಿವನ ಅಂಕೆ ತಪ್ಪಿದ ಪ್ರೇತಗಣಗಳು ಯಾವಾಗ ಯಾರನ್ನು ತಿನ್ನುತ್ತವೋ ಹೇಳಲಾಗದು. ಆದ್ದರಿಂದ ಎಚ್ಚರವಾಗಿರಿ. ಆ ಕೀರ್ತಿವಾರ್ತೆಗೆ ಮರುಳಾಗಿ ಹೋಗುವುದಂತೂ 'ಅರಸನ ಕಂಡು ಪುರುಷನ ಮರೆದಂತೆ' ಆಗುತ್ತದೆ.

★

★ ಐಶ್ವರ್ಯದೊಡನೆ ವಿಶೇಷ ಸಂಬಂಧವನ್ನು ಇಟ್ಟುಕೊಳ್ಳಬಾರದು. ಕಾರಣ ವಿಷ್ಟೇ ! ಅದು ಹೋದಾಗ ನಮ್ಮ ಗೌರವ ಸಹ ಅದರೊಡನೆಯೇ ಹೋಗುವುದು. ಅದು ಇದ್ದಾಗ ಗೌರವವನ್ನು ಉಳಿಸಿಕೊಳ್ಳಲು ತುಂಬಾ ವ್ಯಯಮಾಡಬೇಕಾಗುತ್ತದೆ.

—ಚಾಣುಕ್ಯ

ಬಸವ ಗಂಗೋತ್ರಿಯಲ್ಲಿ ಅಕ್ಟೋಬರ್ ೨ ರಂದು ವಿಶೇಷ ಕಾರ್ಯಕ್ರಮ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು 1978 ನೇ ಇಸವಿ ಅಕ್ಟೋಬರ್ 6 ರಂದು ಖರೀದಿಸಿದ ಬಸವ ಗಂಗೋತ್ರಿಗೆ ಮೂರು ವರ್ಷ ತುಂಬಲಿವೆ ಈ ಅವಧಿಯಲ್ಲಿ ತೋಟಗಾರಿಕೆ, ಹೈನುಗಾರಿಕೆ, ಚೆನ್ನಾಗಿ ಅಭಿವೃದ್ಧಿಗೊಂಡಿವೆ. ಶ್ರೀ ಬಸವ ಭಾರತಿ ವಿದ್ಯಾಲಯವು 1979 ರಲ್ಲಿ ಆರಂಭವಾಗಿ ಹೆಚ್ಚಿನ ಪ್ರಗತಿ ಸಾಧಿಸಿದೆ. ಅನೇಕ ರಾಜ್ಯಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಿದೆ. ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮಗಳೆರಡರಲ್ಲಿಯೂ ತರಗತಿಗಳನ್ನು ನಡೆಸುವ ಈ ಶಾಲೆಯು ತನ್ನ ಉತ್ತಮ ಶೈಕ್ಷಣಿಕ ಮಟ್ಟದಿಂದ ಜನಪ್ರಿಯಗೊಂಡಿದೆ. ಇಂತಹ ಸಂಸ್ಥೆಯ ಸಂದರ್ಶನಕ್ಕೆ ಅನುವಾಗುವಂತೆ ವಿಶೇಷ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿದೆ. 1981 ನೇ ಅಕ್ಟೋಬರ್ 2 ನೇ ತಾರೀಖಿನಂದು ನಡೆಯಲಿರುವ ಈ ಕಾರ್ಯಕ್ರಮದ ಉದ್ದೇಶ ಹಲವು ಮುಖವಾಗಿದೆ.

1. ವಿಶ್ವಕಲ್ಯಾಣ ಮಿಷನ್‌ನ ಸಚೇತಕ ಶಕ್ತಿಯಾಗಿರುವ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ 50 ನೆಯ ಹುಟ್ಟುಹಬ್ಬದ ಆಚರಣೆ.
2. ಬಸವ ಭಾರತಿ ವಿದ್ಯಾಲಯದ ಪ್ರಗತಿ ಚಿತ್ರಿಸುವ ವಾರ್ಷಿಕ ಪತ್ರಿಕೆ "ಬಸವ ಭಾರತಿ"ಯ ಬಿಡುಗಡೆ.
3. ಶಾಲಾ ಮಕ್ಕಳ ಚಟುವಟಿಕೆ, ಕಲೆಗಳ ಪ್ರದರ್ಶನ–ಮಧ್ಯಾಹ್ನ 3 ರಿಂದ 5.
4. ಬಸವ ಗಂಗೋತ್ರಿ, ಮತ್ತು ಬಸವ ಭಾರತಿಯ ಕಟ್ಟಡಗಳಿಗೆ ಧನ ಸಹಾಯ ಮಾಡಿದ ವಿವಿಧ ಊರುಗಳ ದಾನಿಗಳಿಗೆ ಸತ್ಕಾರ.

ಅಕ್ಟೋಬರ್ 2 ನೇ ತಾರೀಖಿನಂದು ಬೆಳಿಗ್ಗೆ 10 ಗಂಟೆಯಿಂದ 2 ಗಂಟೆಯವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಲು ಸದ್ಭಕ್ತರನ್ನು, ಸಹೃದಯರನ್ನೂ ಆಹ್ವಾನಿಸುತ್ತಿದ್ದೇವೆ.

* ಬಸವ ಗಂಗೋತ್ರಿಯು ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಬೆಂಗಳೂರಿನಿಂದ ೨೧ನೆಯ ಕಿಲೋಮೀಟರ್ ಬಳಿ ಇದೆ. ದೂರವಾಣಿ : ಕುಂಬಳಗೋಡು 34.
* ಬೆಂಗಳೂರು ಕಲಾಸಿಪಾಳ್ಯಂ ಬಸ್‌ನಿಲ್ದಾಣದಿಂದ ಮಾರ್ಗ ನಂ. 226, 227, 228, 229 ಮತ್ತು 230–ಈ ಬಸ್ಸುಗಳಲ್ಲಿ ಬರಬಹುದು.
* ಹೆಚ್ಚಿನ ವಿವರಗಳಿಗೆ :–ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ನಂ. 24, 2ನೇ ಬ್ಲಾಕು, ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು–560 010.

ಕಲ್ಯಾಣ ಕಿರಣ Regd. No. KRNB 312 ಸೆಪ್ಟೆಂಬರ್ 1981

Licenced to post without pre-payment No. WPP-25



ಕೋಲು ಹಿಡಿದು ಹಸನ್ಮುಖಿಯಾಗಿ ನಿಂತ ಪೂಜ್ಯ ಸ್ವಾಮೀಜಿ.
ಮುಪ್ಪಿನ ಸಂಕೇತವಾಗಿ ಅಲ್ಲ, ತತ್ತ್ವನಿಷ್ಠೆಯ ಸಂಕೇತವಾಗಿ.